

# ಕಾರ್ಮಿಕರ ದೃಷ್ಟಿಕೋನ

ಫೆಬ್ರವರಿ 2025 ಬೆಲೆ: ರೂ. 7/-

ಸಂಪುಟ: 37
ಸಂಚಿಕೆ: 12

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ–ಕಮ್ಯುನಿಸ್ಟ್ **SUCI(C)** ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ


ಒಳ ಪುಟಗಳಲ್ಲಿ.............


ಪುಟ 3 ಆರ್.ಜಿ. ಕರ್ ಪಾತಕ
ಪುಟ 4 ಯುಜಿಸಿ ಕರಡು ನಿಯಮಾವಳಿ-2024 ಎಂಬ ನೀಲನಕ್ಷೆ
ಪುಟ 7 ವಕ್ಫ್ ವಿವಾದ
ಪುಟ 5 ಆರ್ಥಿಕತೆ ಬೆಳೆಯುತ್ತಿದೆ, ಜನರು ನಿರ್ಗತಿಕರಾಗುತ್ತಿದ್ದಾರೆ - ಏನೀ ರಹಸ್ಯ???
ಪುಟ 9 ಲೆನಿನ್ ಬೋಧನೆ
ಪುಟ 6 ಮೂರು ಕರಾಳ ಕೃಷಿ ಕಾಯ್ದೆಗಳ ಹಿಂಬಾಗಿಲಿನಿಂದ ಪ್ರವೇಶ
ಪುಟ 10 ನೇತಾಜಿ ನೆನವು
ಪುಟ 11 ರಾಜ್ಯಾದ್ಯಂತ ಮಹಿಳಾ ಹೋರಾಟಗಳು


## ಆಶಾ ಹೋರಾಟ ಯಶಸ್ವಿ

# ಆರೋಗ್ಯ ಕಾರ್ಯಕರ್ತೆಯರ ಪಟ್ಟುಬಿಡದ ಧರಣಿ ಸಫಲ!




ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ನೇತೃತ್ವದಲ್ಲಿ ಮಾಸಿಕ ರೂ.15,000 ವೇತನ, ಮತ್ತಿತರ ಬೇಡಿಕೆಗಳ ಈಡೇರಿಕೆಗಾಗಿ ಜನವರಿ 7 ರಿಂದ ನಾಲ್ಕು ದಿನ ಯಶಸ್ವಿಯಾಗಿ ನಡೆದ ಆಂದೋಳನ ಅನಿರ್ದಿಷ್ಟ ಅವಧಿಯ ಒಂದು ಐತಿಹಾಸಿಕ ಹೋರಾಟವಾಗಿತ್ತು. ಹತ್ತಾರು ವರ್ಷಗಳಿಂದ 'ದುಡಿದಷ್ಟು ಕೆಲಸಕ್ಕೆ ವೇತನ' ಸಿಗದೇ ತಾವು ಮೋಸ ಹೋಗುತ್ತಿರುವ ಬಗ್ಗೆ ಆಶಾಗಳು ಅನೇಕ ಬಾರಿ ಪ್ರತಿಭಟನೆ ನಡೆಸಿದ ಮೇಲೂ ಸರಿಯಾದ ಪರಿಹಾರ ದೊರೆತಿರಲಿಲ್ಲ. ಕಳೆದ ವರ್ಷ ಫೆಬ್ರವರಿ 13–14 ರಂದು ಪ್ರತಿಭಟನೆ ಕೈಗೊಂಡಾಗ ಮುಖ್ಯಮಂತ್ರಿಗಳ ಭರವಸೆ ಮೇರೆಗೆ ಹೋರಾಟವನ್ನು ಹಿಂಪಡೆಯಲಾಗಿತ್ತು. ನಂತರ ಸಚಿವರು, ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ 16 ಸಭೆಗಳು ನಡೆದರೂ ಸಹ ಸಮಸ್ಯೆ ಇತ್ಯರ್ಥವಾಗಲಿಲ್ಲ. ಈಗ ಮುಷ್ಕರದ ಮಾರ್ಗವೊಂದೇ ಉಳಿದಿತ್ತು. ಇಂತಹ ಪರಿಸ್ಥಿತಿ ಬರಬಹುದೆಂದು ನಿರೀಕ್ಷಿಸಿದ ಆಶಾ ಸಂಘಟನೆಯ ರಾಜ್ಯ ನಾಯಕತ್ವವು ಸುದೀರ್ಘ ತಯಾರಿ

2ನೇ ಪುಟಕ್ಕೆ....

## ಮೆಟ್ರೋ ದರ ಏರಿಕೆ ವಿರುದ್ಧ 'ಬೆಂಗಳೂರಿಗರ ಪ್ರತಿಭಟನೆ'




**ಜನವರಿ 27ರಂದು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ನೇತೃತ್ವದಲ್ಲಿ ಬೆಂಗಳೂರಿನ ನಾಗರಿಕರು ಪ್ರಸ್ತಾವಿತ ಮೆಟ್ರೋ ಪ್ರಯಾಣ ದರ ಏರಿಕೆಯನ್ನು ವಿರೋಧಿಸಿ ಪ್ರತಿಭಟನೆ ನಡೆಸಿದರು. ಪಕ್ಷದ ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಕಾಮ್ರೇಡ್ ಎಂ.ಎನ್.ಶ್ರೀರಾಮ್ ಮತ್ತು ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ ಕಾಮ್ರೇಡ್ ವಿ.ಜ್ಞಾನಮೂರ್ತಿ ಪ್ರತಿಭಟನೆಯ ನೇತೃತ್ವವನ್ನು ವಹಿಸಿದ್ದರು.**



**ಮೆಟ್ರೋ ಪ್ರಯಾಣ ದರ ಏರಿಕೆಯನ್ನು ಹಿಂತೆಗೆದುಕೊಳ್ಳಲು ಆಗ್ರಹಿಸಿ ಫೆ.15ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಾಗರಿಕರ ಪ್ರತಿಭಟನೆಗೆ ಬೆಂಗಳೂರು ಮೆಟ್ರೋ ಪ್ರಯಾಣಿಕರ ಸಂಘಟನೆ (ಬೆಂಗಳೂರು ಉಳಿಸಿ ಸಮಿತಿ ಸಂಯೋಜಿತ) ಕರೆ ನೀಡಿತ್ತು. ಬೆಂಗಳೂರಿನ ವಿವಿಧ ಬಡಾವಣೆಯ ಜನಸಾಮಾನ್ಯರು, ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿಗಳು ದೊಡ್ಡ ಸಂಖ್ಯೆಯಲ್ಲಿ ಬಂದು ಭಾಗವಹಿಸಿದರು.**

# ಕೇಂದ್ರ ಬಜೆಟ್ 2025

### ವಾಡಿಕೆಯಂತೆ ಮತ್ತೊಂದು ಬಾರಿ ವಂಚನೆ – ಎಸ್‌ಯುಸಿಐ(ಸಿ)

ಕೇಂದ್ರ ಬಜೆಟ್ 2025ಕ್ಕೆ ತಕ್ಷಣದ ಪ್ರತಿಕ್ರಿಯೆಯಾಗಿ, ಎಸ್‌ಯುಸಿಐ(ಸಿ) ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್ ಫೆ. 1ರಂದು ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ಹೀಗೆ ಹೇಳಿದ್ದಾರೆ :

"ನಿರೀಕ್ಷಿಸಿದ್ದಂತೆಯೇ, ಅಂಕಿಅಂಶಗಳ ಕುಟಿಲತೆಯಿಂದ ಮತ್ತು ಅಬ್ಬರದ ಮಾತುಗಳ ಮೂಲಕ ಸರ್ಕಾರದ ನಕಲಿ ಸಾಧನೆಗಳನ್ನು ಬಡಾಯಿ ಕೊಚ್ಚುವ ಭಾಷಣ ಕೇಂದ್ರ ಬಜೆಟ್ 2025 ಅಷ್ಟೇ. ಸಾಮಾನ್ಯ ಜನರು ಎದುರಿಸುತ್ತಿರುವ ಯಾವುದೇ ಜ್ವಲಂತ ಸಮಸ್ಯೆಯನ್ನು ಬಜೆಟ್ ಪರಿಹರಿಸಿಲ್ಲ. ಉದ್ಯೋಗ ಸೃಷ್ಟಿಯ ಭರವಸೆಗಳು ಮತ್ತು ಸಾಮಾನ್ಯ ಜನರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವ ಕ್ರಮಗಳು ಕಳೆದ ಬಜೆಟ್‌ನಲ್ಲಿದ್ದ ಪ್ರಸ್ತಾಪಗಳಿಗಿಂತ ಭಿನ್ನವಾಗಿಲ್ಲ ಮತ್ತು ಅವು ಹೇಗೆ ವಿಫಲವಾದವು ಎಂದು ಎಲ್ಲರಿಗೂ ತಿಳಿದಿದೆ. ಖಾಸಗಿ–ಸಾರ್ವಜನಿಕ ಪಾಲುದಾರಿಕೆ (ಪಿಪಿಪಿ) ಮಾದರಿಯ ವ್ಯಾಪಕ ಬಳಕೆ, ವಿಮಾ ಕ್ಷೇತ್ರದಲ್ಲಿ ಶೇ.100 ಎಫ್‌ಡಿಐ ಮತ್ತು ಸರ್ಕಾರಿ ಆಸ್ತಿಯ ನಗದೀಕರಣ ಯೋಜನೆಯ ಮುಂದುವರಿಕೆ, ಅಂದರೆ ಸರ್ಕಾರಿ ಮೂಲಸೌಕರ್ಯಗಳ ಪರಭಾರೆ ಮುಂತಾದ ಹೆಚ್ಚಿನ ಖಾಸಗೀಕರಣದ ಕಡೆಗೆ ನಿರ್ದಿಷ್ಟವಾದ ಒಲವು ಪ್ರಸ್ತುತ ಬಜೆಟ್ಟಿನ ಪ್ರಮುಖ ಅಂಶವಾಗಿದೆ. ಆರೋಗ್ಯ, ಶಿಕ್ಷಣ, ಕೃಷಿ ಮತ್ತು ಇತರ ಕ್ಷೇತ್ರಗಳಿಗೆ ಹಂಚಿಕೆಯ ಬಗ್ಗೆ ನಿರ್ದಿಷ್ಟ ಆಯೋಜನೆಯನ್ನು ಬಹುಎಚ್ಚರಿಕೆಯಿಂದ ತಪ್ಪಿಸಲಾಗಿದೆ.

ವೈಯಕ್ತಿಕ ಆದಾಯ ತೆರಿಗೆ ದರಗಳನ್ನು ಕಡಿಮೆ ಮಾಡಿರುವ ಕ್ರಮವು ತಾತ್ಕಾಲಿಕ ನೋವು ನಿವಾರಕದಂತೆ ಕಂಡರೂ ಅದು ದೇಶೀಯ ಮಾರುಕಟ್ಟೆ ಕ್ಷೀಣಿಸಿ, ಗ್ರಾಹಕ ಸರಕುಗಳ ಮಾರಾಟದಲ್ಲಿ ಕುಸಿತವನ್ನು ತಡೆಯುವ ಅನಿವಾರ್ಯತೆಯಿಂದ ಕೈಗೊಂಡಿರುವ ಕ್ರಮವಾಗಿದೆ ಮತ್ತು ಆ ಮೂಲಕ ಮಧ್ಯಮ ವರ್ಗದ ಹತಾಶ ಮನೋಭಾವವನ್ನು ಸ್ವಲ್ಪ ಶಮನಗೊಳಿಸುವ ಉದ್ದೇಶವನ್ನು ಹೊಂದಿದೆ. ಎನ್‌ಡಿಎ ಮೈತ್ರಿಕೂಟದ ಪಾಲುದಾರ ನಿತೀಶ್ ಕುಮಾರ್ ಅವರನ್ನು ಸಂತುಷ್ಟಗೊಳಿಸಲು ಬಿಹಾರಕ್ಕೆ ಕೆಲವು ಯೋಜನೆಗಳನ್ನು ಘೋಷಿಸಲಾಗಿದೆ.

ಬಜೆಟ್‌ನ ಹೆಸರಿನಲ್ಲಿ ನಡೆದಿರುವ ಈ ಅಪಹಾಸ್ಯವನ್ನು ನಾವು ಬಲವಾಗಿ ಖಂಡಿಸುತ್ತೇವೆ ಮತ್ತು ಇಂತಹ ಜನವಿರೋಧಿ ಕಾರ್ಪೋರೇಟ್ ಪರವಾದ ಹಣಕಾಸು ದಾಖಲೆಯ ವಿರುದ್ಧ ಒಗ್ಗಟ್ಟಿನ ಪ್ರತಿಭಟನೆಯ ಧ್ವನಿಯನ್ನು ಎತ್ತಲು ಸಂಕಷ್ಟಗಳಿಗೆ ಒಳಗಾಗಿರುವ ಜನತೆಗೆ ನಾವು ಕರೆ ನೀಡುತ್ತೇವೆ."

# ಆಶಾ ಹೋರಾಟ ಯಶಸ್ವಿ

...1ನೇ ಪುಟದಿಂದ

ನಡೆಸಿ ರಾಜ್ಯದಾದ್ಯಂತ ಪಿಎಚ್‌ಸಿಯಿಂದ, ತಾಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದವರೆಗೆ ಸಮ್ಮೇಳನಗಳನ್ನು ಸಂಘಟಿಸಿತು. ಹೋರಾಟದಲ್ಲಿ ಹದಗೊಂಡು ಉತ್ತಮ ನಾಯಕರಾಗಿ ಹೊರಹೊಮ್ಮಿದ ಆಶಾಗಳನ್ನು ಸೇರಿಸಿಕೊಂಡು ನೂತನ ಸಮಿತಿಗಳನ್ನು ರಚಿಸಲಾಯಿತು. ಜಿಲ್ಲಾ ಮಟ್ಟದಲ್ಲಿ ಬೃಹತ್ ಪ್ರತಿಭಟನೆಗಳಲ್ಲದೆ ಬೆಳಗಾವಿ ಅಧಿವೇಶನಕ್ಕೂ ಮುನ್ನ ನೂರಾರು ಶಾಸಕರಿಗೂ, ಸಚಿವರಿಗೂ ಮನವಿ ಪತ್ರಗಳನ್ನು ನೀಡಲಾಯಿತು. ಅಂತಿಮವಾಗಿ ಆಶಾಗಳು ಈ ಮುಷ್ಕರವನ್ನು ಕೈಗೊಳ್ಳಲು ನಿರ್ಧರಿಸಿಯೇ ಬಿಟ್ಟರು. ದಶಕಗಳ ಕಾಲದಿಂದ ತಮಗಾಗುತ್ತಿರುವ ಅನ್ಯಾಯಕ್ಕೆ ಈ ಬಾರಿ ಕೊನೆ ಹಾಕಲು ಅವರು ದೃಢ ನಿಶ್ಚಯ ಮಾಡಿದ್ದರು. ಈ ದಿಟ್ಟೆಯರು ಕೆಚ್ಚೆದೆಯ ಹೋರಾಟದ ಮೂಲಕ ಬೆಂಗಳೂರಿನ ಕೊರೆಯುವ ಚಳಿಗೂ ಕಿಚ್ಚನ್ನು ಹಚ್ಚಿದರು. ಮತ್ತೊಮ್ಮೆ ನಾಡಿಗೆ ಮಾದರಿಯಾಗುವಂತಹ ಹೋರಾಟವನ್ನು ಬೆಳೆಸುವ ಮೂಲಕ ಕಾರ್ಮಿಕ ಚಳುವಳಿಯ ಇತಿಹಾಸಕ್ಕೆ ಹೊಸ ಅಧ್ಯಾಯವನ್ನು ಬರೆದರು.




ಕಾಮ್ರೇಡ್ ಕೆ.ರಾಧಾಕೃಷ್ಣ




ಶ್ರೀ. ಅಲ್ಲಮಪ್ರಭು ಬೆಟ್ಟದೂರು



ಶ್ರೀ. ನಿರಂಜನಾರಾಧ್ಯ



ಕಾಮ್ರೇಡ್ ಕೆ. ಉಮಾ




ಕಾಮ್ರೇಡ್ ಕೆ. ಸೋಮಶೇಖರ್

## ಹಿನ್ನೆಲೆ

ರಾಜ್ಯದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ ಸುಮಾರು 42,000 ಆಶಾ ಕಾರ್ಯಕರ್ತೆಯರು ನೇಮಕವಾಗಿದ್ದಾರೆ.ತಾಯಿ–ಮಗುವಿನ ಸ್ವಾಸ್ಥದಿಂದ ಹಿಡಿದು, ಸಾಂಕ್ರಾಮಿಕ ಖಾಯಿಲೆಗಳ ಬಗ್ಗೆ ಜಾಗೃತಿ, ಗ್ರಾಮ ಹಾಗೂ ಪಟ್ಟಣದ ಹಿಂದುಳಿದ ಪ್ರದೇಶಗಳಲ್ಲಿ ನೈರ್ಮಲ್ಯದ ಅರಿವು ಮೂಡಿಸುವುದು, ಹೀಗೆ 36 ಬಗೆಯ ಜವಾಬ್ದಾರಿಗಳನ್ನು ನಿರ್ವಹಿಸುವ ಈ ಆರೋಗ್ಯ ಸ್ವಯಂಸೇವಕಿಯರಿಗೆ ನಿಗದಿತ ವೇತನವಿಲ್ಲ. ಅವರು ಕೇವಲ ಪ್ರೋತ್ಸಾಹ ಧನದ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ‘ಆಶಾ ನಿಧಿ ಪೋರ್ಟಲ್’ ಎಂಬ ಜಾಲತಾಣದಲ್ಲಿ ಅವರು ಮಾಡುವ ಚಟುವಟಿಕೆಗಳು ದಾಖಲಾದರೆ ಮಾತ್ರ ಅವರಿಗೆ ಪ್ರೋತ್ಸಾಹ ಧನ ದೊರಕುತ್ತದೆ. ಆದರೆ, ತಂತ್ರಾಂಶದಲ್ಲಿನ ತಾಂತ್ರಿಕ ದೋಷಗಳು, ನೈಪುಣ್ಯದ ಕೊರತೆ ಹಾಗೂ ಕೆಲಸದ ಒತ್ತಡ, ಇತ್ಯಾದಿ ಕಾರಣಗಳಿಂದ ಆಶಾಗಳಿಗೆ ದುಡಿದಷ್ಟು ಕೆಲಸಕ್ಕೆ ದೊರಕಬೇಕಾದ ಪ್ರೋತ್ಸಾಹ ಧನ ಸಂದಾಯವಾಗದಿರುವುದು ಬಹುದೊಡ್ಡ ಸಮಸ್ಯೆಯಾಗಿದೆ. ನಮ್ಮ ಕೇಂದ್ರೀಯ ಕಾರ್ಮಿಕ ಸಂಘಟನೆಯಾದ ಎಐಯುಟಿಯುಸಿ, ಆಶಾ ಕಾರ್ಯಕರ್ತೆಯರನ್ನು ಸಂಘಟಿಸಿ, ಸರ್ಕಾರವು ಇವರನ್ನು ‘ನೌಕರರು’ ಎಂದು ಪರಿಗಣಿಸಬೇಕು, ಅಲ್ಲಿಯವರೆಗೆ ಕಾರ್ಮಿಕರ ಸ್ಥಾನಮಾನ ನೀಡಬೇಕು ಎಂಬ ಬೇಡಿಕೆಯೊಂದಿಗೆ, ಕನಿಷ್ಠ ವೇತನ, ಇಎಸ್‌ಐ, ಪಿಎಫ್, ರಜೆ ಮುಂತಾದ ಹಕ್ಕುಗಳಿಗಾಗಿ ಧ್ವನಿಯೆತ್ತುತ್ತಾ ಬಂದಿದೆ. ತಂತ್ರಾಶ ಆಧರಿಸಿ ಪ್ರೋತ್ಸಾಹಧನ ಕೊಡುವ ಬದಲಿಗೆ ನಿಗದಿತ ಮಾಸಿಕ ಗೌರವಧನ ನೀಡಬೇಕೆಂದು ಸರ್ಕಾರವನ್ನು ಆಗ್ರಹಿಸುತ್ತಾ ಬಂದಿದೆ.

> **ಹೋರಾಟದ ಹಾದಿಯಲ್ಲಿ ನಾವು ಆಶಾಗಳು।**
> **ಭೂಮಿಯೆ ಹಾಸಿಗೆ ಆಕಾಶವೇ ಹೊದಿಕೆ।**
> **ಸುರಿಯಲಿ ಮಳೆ, ಬೀಸಲಿ ಬಿರುಗಾಳಿ।**
> **ಜಗ್ಗದೆ ಕುಗ್ಗದೆ ನಿಲ್ಲುವೆವು ಧ್ರುವ ನಕ್ಷತ್ರಗಳಂತೆ।**

ಆಶಾ ಕಾರ್ಯಕರ್ತೆಯರು ಮುಷ್ಕರದಲ್ಲಿ ತೊಡಗದಂತೆ ತಡೆಯಲು ಆರೋಗ್ಯ ಇಲಾಖೆಯು ಆದೇಶ ಪತ್ರವನ್ನು ಹೊರಡಿಸಿ ಅವರನ್ನು ಬೆದರಿಸಲು ಪ್ರಯತ್ನಿಸಿತು. ‘2 ಗಂಟೆ ಮಾತ್ರದ ಕೆಲಸಕ್ಕೆ ಈಗ ಕೊಡುತ್ತಿರುವುದೇ ಹೆಚ್ಚು’, ‘ಮುಷ್ಕರ ಕಾನೂನುಬಾಹಿರ’, ‘ಮುಷ್ಕರ ಕೈಬಿಟ್ಟು ಕೆಲಸಕ್ಕೆ ಹಾಜರಾಗದಿದ್ದರೆ ಹೊಸ ಆಶಾ ನೇಮಕ’ –ಇಂತಹ ಯಾವ ಬೆದರಿಕೆಗಳೂ ಅವರನ್ನು ತಡೆಯದಾದವು. ರಾಜ್ಯದಾದ್ಯಂತ ಆಶಾ ಕಾರ್ಯಕರ್ತೆಯರು ಕೆಲಸಗಳನ್ನು ಸ್ಥಗಿತಗೊಳಿಸಿದರು. ನದಿಗಳೆಲ್ಲಾ ಬಂದು ಸಾಗರವನ್ನು ಸೇರುವಂತೆ ರಾಜ್ಯದ ಮೂಲೆ ಮೂಲೆಗಳಿಂದ ಜನವರಿ 7ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಅವರು ಬಂದು ಸೇರಿಕೊಂಡರು. ಮೊದಲ ದಿನ ಸುಮಾರು 25,000 ಆಶಾ ಕಾರ್ಯಕರ್ತೆಯರು ಪ್ರತಿಭಟನೆಯಲ್ಲಿ ನೇರವಾಗಿ ಭಾಗವಹಿಸಿದ್ದರು.



ಕಾಮ್ರೇಡ್ ಡಿ. ನಾಗಲಕ್ಷ್ಮಿ




ಕಾಮ್ರೇಡ್ ಸೋಮಶೇಖರ್ ಯಾದಗಿರಿ




ಶ್ರೀ. ಎಸ್.ಆರ್.ಹಿರೇಮಠ್



ನ್ಯಾ. ಸಂತೋಷ್ ಹೆಗ್ಡೆ



ಶ್ರೀ. ಉಗ್ರ ನರಸಿಂಹೇಗೌಡ

ಪ್ರತಿಭಟನಾ ಸಭೆಯಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಎಐಯುಟಿಯುಸಿ ಅಖಿಲ ಭಾರತ ಅಧ್ಯಕ್ಷರಾದ ಕಾಮ್ರೇಡ್ ಕೆ.ರಾಧಾಕೃಷ್ಣರವರು, “ಇದು ಆಳ್ವಿಕರು ಹಾಗೂ ದುಡಿಯುವವರ ನಡುವಿನ ಸಮರ, ಕೈಯಲ್ಲಿ ಅಸ್ತ್ರಗಳಿಲ್ಲ ಅಷ್ಟೇ! ಬಡತನದಲ್ಲಿರುವ ಆಶಾಗಳಿಂದ ಸರ್ಕಾರವು ಬಿಟ್ಟಿ ಚಾಕರಿ ಮಾಡಿಸಿಕೊಳ್ಳುತ್ತಿದೆ. ತಮ್ಮ ಜೀವ ಪಣಕ್ಕಿಟ್ಟು ಆಶಾ ಕಾರ್ಯಕರ್ತರು ದುಡಿಯುತ್ತಿದ್ದಾರೆ. ಇದು ಕೇವಲ ವೇತನ ಹೆಚ್ಚಳದ ಬೇಡಿಕೆಗಾಗಿ ಕೈಗೊಂಡ ಆರ್ಥಿಕ ಹೋರಾಟವಲ್ಲ. ಗೌರವ ಹಾಗೂ ಘನತೆಯ ಬದುಕಿಗಾಗಿ ನಡೆಸುತ್ತಿರುವ ಹೋರಾಟ....... ದೇಶದಲ್ಲೆಡೆ ಅಸಮಾನತೆ, ತಾರತಮ್ಯ ಮಿತಿಮೀರಿವೆ. ಗಂಟೆಗೆ 197 ಕೋಟಿ ರೂ. ಲಾಭಗಳಿಸುವ ಉದ್ಯಮಿ ಒಂದೆಡೆ ಇದ್ದರೆ, ಇನ್ನೊಂದೆಡೆ, ದಿನಕ್ಕೆ 90ರೂ. ಕೂಲಿಯೂ ಸಿಗದಿರುವಂತಹ ನಿರ್ಗತಿಕರನ್ನು ಜಾಗತೀಕರಣ–ಖಾಸಗಿಕರಣ ನೀತಿಗಳು ಸೃಷ್ಟಿಸಿವೆ. ಇಂದು ದುಡಿಯುವವರ ಬದುಕು ಅಭದ್ರವಾಗಿದೆ, ಅವರ ಹಕ್ಕುಗಳ ಹರಣವಾಗುತ್ತಿದೆ. ಎಲ್ಲಾ ಕ್ಷೇತ್ರಗಳಲ್ಲಿ ಅನ್ಯಾಯ ಮುಂದುವರೆದಿದೆ. ಇತಿಹಾಸದಲ್ಲಿ ತ್ಯಾಗ–ಬಲಿದಾನಗಳಿಲ್ಲದೆ ಯಾವ ಹೋರಾಟವೂ ಜಯಗಳಿಸಿಲ್ಲ. ನಿಮ್ಮ ಹೋರಾಟವೂ ಸಹ ಅಷ್ಟೇ, ಎಲ್ಲಾ ತ್ಯಾಗಕ್ಕೂ ನೀವೂ ಸಿದ್ಧರಾಗಬೇಕು. ಆಗ ವಿಜಯ ನಿಮ್ಮದೇ” ಎಂದು ನುಡಿದರು. ಹಿರಿಯ ಸಾಹಿತಿ ಅಲ್ಲಮಪ್ರಭು ಬೆಟ್ಟದೂರು, ಸಾಮಾಜಿಕ ಹೋರಾಟಗಾರರಾದ ಎಸ್.ಆರ್ ಹಿರೇಮಠ್, ನಿವೃತ್ತ ಲೋಕಾಯುಕ್ತ ನ್ಯಾಯಾಧೀಶರಾದ ನ್ಯಾಯಮೂರ್ತಿ ಸಂತೋಷ ಹೆಗ್ಡೆ, ಶಿಕ್ಷಣತಜ್ಞ ನಿರಂಜನಾರಾಧ್ಯ, ಪ್ರಗತಿಪರ ಹೋರಾಟಗಾರರಾದ ಉಗ್ರ ನರಸಿಂಹೇಗೌಡ ಮುಂತಾದ ಸಮಾಜದ ವಿವಿಧ ವಿಭಾಗಗಳಿಗೆ ಸೇರಿದ ಗಣ್ಯರು ಈ ಹೋರಾಟವನ್ನು ಬೆಂಬಲಿಸಿದರು. ನಮ್ಮ ಪಕ್ಷ ಎಸ್‌ಯುಸಿಐ(ಕಮ್ಯುನಿಸ್ಟ್) ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಕೆ.ಉಮಾ ಮಾತನಾಡಿ, “ಜನರ ಆರೋಗ್ಯ ಕಾಪಾಡುವ ನಿಮ್ಮ ಆರೋಗ್ಯವನ್ನು, ನಿಮ್ಮ ಬದುಕನ್ನು ಕಾಯದ ಸರ್ಕಾರಗಳು ಜನವಿರೋಧಿ ಸರ್ಕಾರಗಳು. ಎಲ್ಲಾ ಸರ್ಕಾರಗಳು ಬಂಡವಾಳಗಾರರನ್ನು ಕಾಪಾಡುತ್ತವೆಯೇ ಹೊರತು ದುಡಿಯುವ ಜನರನ್ನಲ್ಲ. ಇದೊಂದು ಶೋಷಕ ವ್ಯವಸ್ಥೆಯಾಗಿದೆ. ಅದರ ವಿರುದ್ಧ ಉನ್ನತ ನೀತಿ–ಸಂಸ್ಕೃತಿ ಆಧಾರದ ಮೇಲೆ ಹೋರಾಟಗಳನ್ನು ಬೆಳೆಸಬೇಕು.” ಎಂದು ಕರೆ ನೀಡಿದರು. ಎಐಯುಟಿಯುಸಿ ರಾಜ್ಯಾಧ್ಯಕ್ಷರಾದ ಕಾ. ಕೆ. ಸೋಮಶೇಖರ್ ಮಾತನಾಡಿ, “ಇಂದು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಬಂಡವಾಳಗಾರರ ಹಿತಕ್ಕಾಗಿ ಕಾರ್ಮಿಕ ಕಾಯ್ದೆಗಳನ್ನು ತಿದ್ದುಪಡಿ ಮಾಡುತ್ತಿವೆ. ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಳ್ಳುತ್ತಿವೆ. ಎಲ್ಲಾ ವಿಭಾಗದ ಕಾರ್ಮಿಕರ ಜೊತೆ ಸೇರಿ ಆಶಾ ಕಾರ್ಯಕರ್ತೆಯರು ಅಂತಿಮ ಬಿಡುಗಡೆಗಾಗಿ ಹೋರಾಟಕ್ಕೆ ಮುಂದಾಗಬೇಕು” ಎಂದರು. ಪ್ರತಿಭಟನೆಯ ನೇತೃತ್ವವನ್ನು ಆಶಾ ಸಂಘದ ಅಧ್ಯಕ್ಷರಾದ ಕಾ। ಸೋಮಶೇಖರ್ ಯಾದಗಿರಿ ವಹಿಸಿದ್ದರು. ಸಂಘದ ರಾಜ್ಯ ಕಾರ್ಯದರ್ಶಿ ಕಾ॥ ಡಿ ನಾಗಲಕ್ಷ್ಮಿ ಪ್ರಾಸ್ತವಿಕವಾಗಿ ಮಾತನಾಡಿದರು.

ಪ್ರತಿಭಟನಾ ಸ್ಥಳಕ್ಕೆ ಇಲಾಖೆಯ ಅಧಿಕಾರಿಗಳು, ಸಚಿವರು ಆಗಮಿಸಿ ಕೆಲವೊಂದು ಭರವಸೆ ಸೂಚಿಸಿದರೂ, ಅವು ಒಪ್ಪಿಗೆ ಆಗದ ಕಾರಣ ಧರಣಿ ಮುಂದುವರೆಯಿತು. ಈ ಹೋರಾಟಕ್ಕೆ ತಕ್ಕಂತೆ ಭಾರಿ ವ್ಯವಸ್ಥೆಯನ್ನೇ ಮಾಡಿಕೊಳ್ಳಲಾಗಿತ್ತು. ವಿದ್ಯುನ್ಮಾನ ಹಾಗೂ ಪತ್ರಿಕಾ ಮಾಧ್ಯಮಗಳನ್ನೊಳಗೊಂಡಂತೆ ಬಹುತೇಕ ಸಮೂಹ ಮಾಧ್ಯಮಗಳು ಪ್ರತಿದಿನದ ಸುದ್ದಿ ಬಿತ್ತರಿಸಿ ಆಶಾಗಳ ಪರಿಸ್ಥಿತಿಯನ್ನು ಮನೆಮನೆಗೆ ತಲುಪಿಸಿದವು. ಕೆಲವೊಂದು ಪ್ರಮುಖ ಪತ್ರಿಕೆಗಳು ಸಂಪಾದಕೀಯವನ್ನೇ ಬರೆದು ಸರ್ಕಾರದ ಗಮನ ಸೆಳೆದವು. ಜನ ಬೆಂಬಲದ ಮಹಾಪೂರವೇ ಹರಿದುಬಂತು.

‘ಒಂದು ಉದಾತ್ತವಾದ ಚಳುವಳಿಯು ಸಾಮಾನ್ಯರಂತಿರುವ ಜನರನ್ನು ಸಹ ಧೀರರನ್ನಾಗಿ, ಸಣ್ಣತನವನ್ನು ಮೀರಿದ ವಿಶಾಲ ಹೃದಯವಂತರನ್ನಾಗಿ ಮಾಡಿ ಹೊಸ ಮನುಷ್ಯರನ್ನಾಗಿ ರೂಪಿಸುತ್ತದೆ’ ಎಂಬುದು ಸತ್ಯ. ಹೋರಾಟದ ಅಂಗಳದಲ್ಲಿ ಕಂಡುಬಂದ ಮನಮಿಡಿಯುವ ಸಂಗತಿಗಳು ಅನೇಕ. ಊರಿನಿಂದ ಕರೆ ಬಂದಾಗ ಮಾತನಾಡುತ್ತಿದ್ದ ಒಬ್ಬ ಆಶಾ, ಅತ್ತಲಿಂದ ಅಳುವ ಕಂದನ ರೋದನಕ್ಕೆ ಮರುಗುತ್ತಲೇ, ‘ಅಳಬೇಡ ಮಗನೇ, ಇಷ್ಟರಲ್ಲೇ ಬರುತ್ತೇನೆ, ಇವತ್ತು ಅಪ್ಪನ ಜೊತೆಗೆ ಮಲಗು’ ಎಂದಾಗ ಸದ್ದಿಲ್ಲದೆ ಅವಳ ಕಣ್ಣಲ್ಲಿ ನೀರು ಬಂದಿತ್ತು. ಆಪರೇಷನ್ ಟೇಬಲ್ ಮೇಲೆ ಮಲಗಿದ ಮೊಮ್ಮಗನನ್ನು ತೋರಿಸಿದ ಅಜ್ಜಿ ಒಬ್ಬಳು, ಮಗಳು ಆಶಾಗೆ, ‘ಹುಷಾರಿಲ್ಲದ ಮಗನನ್ನು ಬಿಟ್ಟು ಇದೀಯಲ್ಲ ಹಡೆದವ್ವ, ನಿಂಗೆ ಮನಸ್ಸಾದರೂ ಹೆಂಗ ಬಂದೀತು’ ಎಂದು ಹಲುಬಿದಾಗ ಒಂದು ಕ್ಷಣ ಕರುಳು ಚುರುಕ್ ಎಂದು ಕಣ್ಣು ತುಂಬಿಕೊಂಡ ಆಶಾ, ‘ಅಮ್ಮ, ಇಲ್ಲಿರೋ ತಾಯಂದಿರೆಲ್ಲರೂ ಮಕ್ಕಳನ್ನು ಬಿಟ್ಟು ಬಂದವರೆ, ಇವರನ್ನೆಲ್ಲ ಬಿಟ್ಟು ನಾನೊಬ್ಬಳೇ ಹೆಂಗ್ ಬರಲವ್ವ? ಇಷ್ಟು ಜನ ತಾಯಂದಿರ ಆಶೀರ್ವಾದ ನನ್ನ ಮಗನನ್ನು ಕಾಪಾಡುತ್ತೆ, ನೀನೇನೂ ಚಿಂತಿ ಮಾಡಬೇಡ’ ಎಂದು ಸಂತೈಸಿದ್ದಳು. ಮನೆಗಳಿಂದ ಫೋನಾಯಿಸಿದ ಗಂಡಂದಿರು, “ಮನೀ ಕಡಿ ಚಿಂತಿ ಮಾಡಬ್ಯಾಡ್ರಿ. ನಿಮ್ಮ ಕೆಲಸ ಆಗುವವರೆಗೂ ಬರಬ್ಯಾಡ್ರಿ. ಹಂಗೇನಾದ್ರೂ ಆದ್ರ ನಾವು ಬಂದು ಅಲ್ಲೇ ಇರ್ತೀವಿ.” ಎಂದು ಧೈರ್ಯ ತುಂಬುತ್ತಿದ್ದುದು ಸರ್ವೇ ಸಾಮಾನ್ಯವಾಗಿತ್ತು. ಹೋರಾಟ ದಿನೇ ದಿನೇ ಮತ್ತಷ್ಟು ಬಲಗೊಳ್ಳುತ್ತಿರುವುದನ್ನು ಗಮನಿಸಿದ ಸರ್ಕಾರ, ಕೊನೆಗೂ ಮುಖ್ಯಮಂತ್ರಿಗಳೊಂದಿಗೆ ಮಾತುಕತೆಗೆ ಸಂಘದ ಪದಾಧಿಕಾರಿಗಳನ್ನು ಆಹ್ವಾನಿಸಿತು. ಮಾಸಿಕ, ನಿರ್ದಿಷ್ಟ ರೂ.10000, ಮತ್ತಿತರ ಬೇಡಿಕೆಗಳನ್ನು ಈಡೇರಿಸಲು ಅವರೇ ಘೋಷಿಸಿದ ನಂತರ ಆಶಾ ಕಾರ್ಯಕರ್ತೆಯರ ಹೋರಾಟ ಗೆಲುವಿನಲ್ಲಿ ಅಂತ್ಯಗೊಂಡಿತು. ಯಾವುದೇ ಸಮುದಾಯ ತನ್ನ ನ್ಯಾಯೋಚಿತವಾದ ಬೇಡಿಕೆಗೆ ಸಮರ್ಥ ಕ್ರಾಂತಿಕಾರಿ ನಾಯಕತ್ವದ ನೇತೃತ್ವದಲ್ಲಿ ಉನ್ನತ–ನೀತಿ–ಸಂಸ್ಕೃತಿಯ ಆಧಾರದ ಮೇಲೆ ಒಗ್ಗಟ್ಟಿನ ಹೋರಾಟವನ್ನು ಬೆಳೆಸಿದ್ದೇ ಆದಲ್ಲಿ ಗೆಲುವನ್ನು ತನ್ನದಾಗಿಸಿಕೊಳ್ಳುತ್ತದೆ ಎಂಬುದಕ್ಕೆ ಆಶಾ ಚಳುವಳಿ ನಿದರ್ಶನವಾಗಿದೆ. ಈ ಯುಗದ ಮಹಾನ್ ಮಾರ್ಕ್ಸ್‌ವಾದಿ ನಾಯಕರೂ, ಎಸ್‌ಯುಸಿಐ(ಸಿ) ಪಕ್ಷದ ಸಂಸ್ಥಾಪಕ ಕಾರ್ಯದರ್ಶಿಗಳೂ ಆದ ಕಾ. ಶಿವದಾಸ್ ಘೋಷ್‌ರವರ ಚಿಂತನೆಗಳಾಧಾರದಲ್ಲಿ ಮುನ್ನಡೆಯಿಡುತ್ತಿರುವ ಎಐಯುಟಿಯುಸಿಯ ನೇತೃತ್ವದಲ್ಲಿನ ಈ ಆಶಾ ಹೋರಾಟ, ಅತ್ಯಂತ ಶಾಂತಿಯುತವಾಗಿ, ಏಕಮಾನವನಂತೆ ಒಂದೇ ಗುರಿಯಿಂದ, ಶಿಸ್ತುಬದ್ಧವಾಗಿ ನಡೆದು ರಾಜ್ಯದ, ದೇಶದ ಜನರ ಮೆಚ್ಚಿಗೆ ಗಳಿಸಿದೆ. ಈ ಸಮಾಜದ ಶೋಷಿತರ, ದಮನಿತರ ಹೋರಾಟಗಳಿಗೆ ಭರವಸೆಯ ಸ್ಫೂರ್ತಿಯನ್ನು ನೀಡಿದ ಆಶಾ ಕಾರ್ಯಕರ್ತೆಯರ ಚಳುವಳಿಗೆ ಕಾರ್ಮಿಕ ದೃಷ್ಟಿಕೋನ ಕ್ರಾಂತಿಕಾರಿ ಅಭಿನಂದನೆಗಳನ್ನು ಸಲ್ಲಿಸುತ್ತದೆ.

# ಆರ್.ಜಿ. ಕರ್ ಪಾತಕ: ತೀರ್ಪಿಗೆ ವ್ಯಾಪಕ ಆಕ್ರೋಶ

ಪಶ್ಚಿಮ ಬಂಗಾಳದ ಸಿಯಾಲ್ಡಾ ನ್ಯಾಯಲಯವು, ಸಿಬಿಐ ತನ್ನ ತನಿಖಾ ವರದಿಯನ್ನು ಸಲ್ಲಿಸಿದ ಬಳಿಕ ಮತ್ತು ಐದು ತಿಂಗಳ ವಿಚಾರಣೆಯ ನಂತರ, 2024ರ ಆಗಸ್ಟ್ 9ರಂದು ಘಟಿಸಿದ್ದ ಆರ್.ಜಿ. ಕರ್ ಕಾಲೇಜಿನ ವೈದ್ಯೆಯ ಮೇಲಿನ ಘೋರ ಅತ್ಯಾಚಾರ ಮತ್ತು ಕೊಲೆಯ ಪ್ರಕರಣದಲ್ಲಿ ಸಂಜಯ್ ರಾಯ್‌ನನ್ನು ತಪ್ಪಿತಸ್ಥನೆಂದು ತೀರ್ಪು ನೀಡಿ, ಅವನಿಗೆ ಆಜೀವ ಕಾರಾಗೃಹ ಶಿಕ್ಷೆ ವಿಧಿಸಿದ್ದು ಅನಿರೀಕ್ಷಿತವೇನಲ್ಲ! ಇತರೆ ಪುರಾವೆಗಳನ್ನು ಗಣನೆಗೆ ತೆಗೆದುಕೊಳ್ಳದೆ ಕೇವಲ ಒಬ್ಬನನ್ನು ತಪ್ಪಿತಸ್ಥನೆಂದು ಘೋಷಿಸಿದ ತೀರ್ಪಿನ ವಿರುದ್ಧ ಸಾಮಾನ್ಯ ಜನತೆ ಮತ್ತು ವೈದ್ಯಕೀಯ ಸಮುದಾಯ ತೀವ್ರವಾದ ಆಕ್ರೋಶವನ್ನು ವ್ಯಕ್ತಪಡಿಸಿವೆ.

ಇದಕ್ಕೂ ಮುನ್ನ, ಇಬ್ಬರು ಪ್ರಮುಖ ಆರೋಪಿಗಳಾಗಿದ್ದ ಡಾ. ಸಂದೀಪ್ ಘೋಷ್ ಹಾಗೂ ಅಭಿಜಿತ್ ಮಂಡಲ್ ಎಂಬ ಇಬ್ಬರಿಗೆ ವಿಶೇಷ ಸಿಬಿಐ ನ್ಯಾಯಾಲಯವು ಜಾಮೀನು ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು. ಈ ಇಬ್ಬರು ವ್ಯಕ್ತಿಗಳು, ಆ ಘೋರ ಹತ್ಯೆಗೆ ಸಂಬಂಧಿಸಿದ್ದ ಅನೇಕ ಮಹತ್ವದ ಸಾಕ್ಷ್ಯ ನಾಶ ಮಾಡಿದ ಆರೋಪಕ್ಕೆ ಒಳಗಾಗಿದ್ದವರು. ನಮ್ಮ ಪಕ್ಷ ಎಸ್‌ಯುಸಿಐ(ಸಿ) ಜನಚಳುವಳಿಗಾಗಿ ನೀಡಿದ ಕರೆ ಹಾಗೂ ವೈದ್ಯ ಸಮೂಹದ ಜೊತೆ ಜನಸಾಮಾನ್ಯರು ನಿರಂತರವಾಗಿ ಹೇರಿದ ಹೋರಾಟದ ಒತ್ತಡದಿಂದಾಗಿ, ಕಿರಿಯ ವೈದ್ಯೆಯ ಕಳೇಬರದ ಮರಣೋತ್ತರ ಪರೀಕ್ಷೆ ಮತ್ತು ಎಫ್‌ಐಆರ್ ಆಗುವಂತಾಗಿತ್ತು. 2024ರ ಆಗಸ್ಟ್ 18ರಂದು ಸುಪ್ರಿಂ ಕೋರ್ಟು ಈ ಪ್ರಕರಣವನ್ನು ಸ್ವಯಂಪ್ರೇರಣೆಯಿಂದ ಕೈಗೆತ್ತಿಕೊಂಡು ವಿಚಾರಣೆಯನ್ನು ಆದೇಶಿಸಿತ್ತು. ಅತ್ತ ಕೋಲ್ಕೊತ್ತ ಹೈಕೋರ್ಟ್ ಸಹ ಸಿಬಿಐ ತನಿಖೆಯನ್ನು ಆದೇಶಿಸಿತ್ತು. ಘೋಷ್ ಹಾಗೂ ಮಂಡಲ್ ನಡುವಿನ ನಿರಂತರ ದೂರವಾಣಿ ಕರೆಗಳ ದಾಖಲೆ ದೊರಕಿದ್ದು, ಆಸ್ಪತ್ರೆಯ ಹಾಗೂ ಪೊಲೀಸ್ ಸ್ಟೇಷನ್ನಿನ ಸಿಸಿಟಿವಿ ದೃಶ್ಯಾವಳಿಗಳನ್ನು ಅಳಿಸಿಹಾಕಿದ್ದು, ಸರಿಯಾದ ಹಾಗೂ ಕ್ರಮಬದ್ಧ ಕಾರ್ಯವಿಧಾನಗಳ ಉಲ್ಲಂಘನೆ ಮಾಡಿದ್ದು– ಇಂತಹ ಘಟನೆಗಳನ್ನು ಉಲ್ಲೇಖಿಸಿದ್ದ ಸಿಬಿಐ, ಪ್ರಕರಣದ ತ್ವರಿತ ಪ್ರಗತಿಯ ಬಗ್ಗೆ ಹೇಳಿಕೆ ನೀಡಿತ್ತು. ನಂತರ, ಲಭ್ಯ ಪುರಾವೆಗಳನಾಧರಿಸಿ, ಸೆಪ್ಟೆಂಬರ್ 14ರಂದು, ಡಾ. ಘೋಷ್ ಹಾಗೂ ಮಂಡಲ್ ಅವರನ್ನು ಸಿಬಿಐ ಬಂಧಿಸಿತ್ತು. ಸಿಬಿಐ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಆರೋಪ ಪಟ್ಟಿಯಲ್ಲಿ, ಸಿಬಿಐ, ಅತ್ಯಾಚಾರ ಮತ್ತು ಹತ್ಯೆಗೆ ಸಂಬಂಧಿಸಿದಂತೆ, ಡಾ. ಘೋಷ್, ವೈದ್ಯೆಯ ಸಾವನ್ನು ತಕ್ಷಣವೇ ಘೋಷಣೆ ಮಾಡದಿದ್ದುದು, ಸಾಕ್ಷಿಗಳನ್ನು ಉದ್ದೇಶಪೂರ್ವಕ ನಾಶ ಮಾಡಿದ್ದು, ಇತರರ ಜೊತೆಗೂಡಿ ಹೂಡಿದ ಸಂಚಿನ ಭಾಗವಾಗಿ ಎಫ್‌ಐಆರ್ ದಾಖಲಿಸುವಲ್ಲಿ ವಿಳಂಬ ಮಾಡಿದ್ದು– ಈ ಕಾರಣಗಳಿಂದಾಗಿ ಪ್ರಮುಖ ಸಾಕ್ಷ್ಯಗಳ ನಾಶಕ್ಕೆ ಎಡೆಮಾಡಿಕೊಟ್ಟಿದ್ದರಿಂದ u/s 238, 199/w 61(2) of BNS-2023 ಅಡಿಯಲ್ಲಿ ಅಪರಾಧವೆಸಗಿದ್ದಾರೆ" ಎಂದು ಹೇಳಿತ್ತು. ಘೋಷ್ ಹಾಗೂ ಮಂಡಲ್ ಈ ಇಬ್ಬರ ಪಾತ್ರದ ಬಗ್ಗೆ ಸಹ ಹಲವು ಸಾಕ್ಷಿಗಳು ಲಭ್ಯವಾಗಿದ್ದವು.

ಏತನ್ಮಧ್ಯೆ, ಸುಪ್ರಿಂ ಕೋರ್ಟಿನಲ್ಲಿ ಮುಖ್ಯ ನ್ಯಾಯಾಮೂರ್ತಿಯ ನೇತೃತ್ವದ ತ್ರಿಸದಸ್ಯ ಪೀಠವು ಪ್ರಕರಣದ ವಿಚಾರಣೆಯನ್ನು ಆರಂಭಿಸಿತ್ತು. ಸಿಬಿಐ, ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ವರದಿಯ ಬಗ್ಗೆ ಪ್ರತಿಕ್ರಿಯಿಸಿದ ಸುಪ್ರಿಂ ಕೋರ್ಟ್ ಸೆಪ್ಟೆಂಬರ್ 17ರಂದು, "ಆ ವರದಿಯು ಮನಕಲುಕುವಂತಿದೆ" ಎಂದಿತ್ತು. ಆದರೆ, ವಿವರಗಳನ್ನು ಬಹಿರಂಗಪಡಿಸಿರಲಿಲ್ಲ. ಸೆಪ್ಟೆಂಬರ್ 30ರಂದು, ಸಿಬಿಐ, ತನಿಖೆಯಲ್ಲಿ ಗಣನೀಯವಾದ ಸುಳಿವುಗಳು ದೊರೆತಿವೆ ಎಂದು ಸರ್ವೋಚ್ಚ ನ್ಯಾಯಾಲಯಕ್ಕೆ ಮಾಹಿತಿ ನೀಡಿತ್ತು. "ಡಾ. ಘೋಷ್ ಹಾಗೂ ಮಂಡಲ್ ಅವರ ಮೊಬೈಲ್‌ಗಳ ಶೋಧನೆಯಿಂದಾಗಿ, ಅನೇಕ ಅಪರಾಧಾರ್ಹ ಮಾತುಕತೆಗಳು, ವಿಡಿಯೋಗಳೂ ದೊರೆತಿವೆ" ಎಂಬ ವರದಿಯನ್ನು ಸಿಬಿಐ ಸುಪ್ರಿಂ ಕೋರ್ಟಿಗೆ ಡಿಸೆಂಬರ್ 10ರಂದು ಸಲ್ಲಿಸಿತ್ತು. ಅಲ್ಲದೆ, ಪ್ರಕರಣದಲ್ಲಿ ತ್ವರಿತ ಪ್ರಗತಿಯುಂಟಾಗಿದ್ದು, 81ರಲ್ಲಿ, 43 ಸಾಕ್ಷಿಗಳ ಹೇಳಿಕೆಗಳನ್ನು ಅದಾಗಲೇ ದಾಖಲಿಸಿಕೊಳ್ಳಲಾಗಿದೆ, ಆ ಇಬ್ಬರು ಆರೋಪಿಗಳ ಅಪರಾಧವನ್ನು ಸಾಬೀತು ಪಡಿಸುವ ಕೆಲವು ಪ್ರಮುಖ ಸಾಕ್ಷಿಗಳು ದೊರಕಿವೆ ಎಂದು ಸಿಬಿಐ ಹೇಳಿಕೊಂಡಿತ್ತು. ಆದರೆ, ಇಷ್ಟೆಲ್ಲ ಆದಮೇಲೂ, ಸಿಬಿಐ 90ದಿನಗಳ ಒಳಗಾಗಿ ಸಲ್ಲಿಸಬೇಕಿದ್ದ ಚಾರ್ಜ್ ಶೀಟನ್ನು ಸಲ್ಲಿಸಲಿಲ್ಲ! ಈ ಇಬ್ಬರು ಆರೋಪಿಗಳ ಜಾಮೀನಿಗೆ ವಿರೋಧವನ್ನೂ ಸಹ ವ್ಯಕ್ತಪಡಿಸದೆ, ಅವರಿಗೆ ಜಾಮೀನು ದೊರೆಯಲು ಪರೋಕ್ಷವಾಗಿ ಸಹಕಾರ ನೀಡಿತು. ಕಾಣದ ಕೈಗಳ ಪ್ರಭಾವ ಈ ಕೇಸಿನಲ್ಲಿ ಇದೆ ಎಂಬ ಗುಮಾನಿ ಆಗಲೇ ಮತ್ತಷ್ಟು ದಟ್ಟವಾಗಿತ್ತು. ಈಗ, ಕೆಲವೇ ದಿನಗಳ ನಂತರ, ತೀರ್ಪು ಹೊರ ಬಂದು ಕೇವಲ ಒಬ್ಬ ವ್ಯಕ್ತಿಯಷ್ಟೇ ಅಪರಾಧಿ ಎಂದು ಅವನಿಗೆ ನ್ಯಾಯಾಲಯವು ಶಿಕ್ಷೆ ವಿಧಿಸಿದೆ!

ಕೇಂದ್ರ ವಿಧಿ ವಿಜ್ಞಾನ ಪ್ರಯೋಗಾಲಯ (ಸೆಂಟ್ರಲ್ ಫೊರೆನ್ಸಿಕ್ ಸೈನ್ಸ್ ಲ್ಯಾಬೊರೇಟರಿ)ವೂ, ಸಂತ್ರಸ್ತೆಯ ಕಳೇಬರದ ಮೇಲೆ ಐದು ಜನರ ಡಿಎನ್‌ಎ ಇರುವುದರ ಬಗ್ಗೆ ನೀಡಿದ ವರದಿ, ಇದು ಗುಂಪು ಅತ್ಯಾಚಾರ ಎನ್ನುವ ಮಲ್ಟಿ ಇನ್‌ಸ್ಟಿಟ್ಯುಷನಲ್ ಮೆಡಿಕಲ್ ಬೋರ್ಡ್‌ನ ವರದಿ, ಸಾಕ್ಷ್ಯ ನಾಶಗಳ ಬಗ್ಗೆ ಲಭ್ಯವಿರುವ ಗಂಭೀರ ಆಧಾರಗಳ ಬಗ್ಗೆ ಮಾತ್ರ ಈ ತೀರ್ಪು ಮೌನವಾಗಿದೆ. ಹಾಗಾಗಿಯೇ, ವೈದ್ಯಕೀಯ ಸಮುದಾಯ ಹಾಗೂ ಜನತೆ, ಈ ತೀರ್ಪಿನ ಬಗ್ಗೆ ಆಕ್ರೋಶಗೊಂಡಿದ್ದಾರೆ.

### ಟಿಎಂಸಿ ರಾಜ್ಯ ಸರ್ಕಾರ ಹಾಗು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರಗಳ ನಡುವೆ ಹೊಂದಾಣಿಕೆ?

ಸಿಬಿಐ 90 ದಿನಗಳವರೆಗೂ ಚಾರ್ಜ್ ಶೀಟ್‌ಅನ್ನು ದಾಖಲಿಸದೇ ಇರುವುದನ್ನು ಗಮನಿಸಿದರೆ, ಕೇವಲ ಪಶ್ಚಿಮ ಬಂಗಾಳದ ಸರ್ಕಾರವಷ್ಟೇ ಅಲ್ಲ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಪಾತ್ರದ ಬಗೆಗೂ ಅನುಮಾನ ಬಾರದಿರದು. ಕೇಂದ್ರ ಗೃಹಸಚಿವ ಅಮಿತ್ ಶಾ, ಕೋಲ್ಕೊತ್ತಗೆ ಭೇಟಿ ನೀಡಿದರೂ 'ಅಭಯಾಳ' ಪೋಷಕರನ್ನು ಭೇಟಿಯಾಗದೇ ಇದ್ದದ್ದು, ಈ ವಿಷಯದ ಬಗ್ಗೆ ಚಕಾರ ಎತ್ತದೇ ಇದ್ದದ್ದು, ಏನನ್ನು ತೋರಿಸುತ್ತದೆ?

ಇಂದು ಇಡೀ ಕೊಳೆತ ಬಂಡವಾಳಶಾಹಿ ವ್ಯವಸ್ಥೆಯ ಬ್ರಹ್ಮಾಂಡ ಭ್ರಷ್ಟತೆ ಬಯಲಾಗುವ ಆತಂಕ ಬಂಡವಾಳ ವರ್ಗವನ್ನು ಕಂಗೆಡಿಸಿದೆ. ಹಾಗಾಗಿಯೇ, ಎರಡೂ ಸರ್ಕಾರಗಳ ನಡುವೆ ಹೊಂದಾಣಿಕೆ ಇರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಆಳುವ ವರ್ಗ ಹಾಗೂ ಅದರ ಅಡಿಯಾಳು ಸರ್ಕಾರಗಳು, ಇಂತಹ ಕುತಂತ್ರಗಳಿಂದ ಜನತೆಯನ್ನು ತಾತ್ಕಾಲಿಕವಾಗಿ ತೆಪ್ಪಗಾಗಿಸಬಹುದು, ಹೋರಾಟವು ತಂತಾನೆ ಸತ್ತುಹೋಗಬಹುದೆಂದು ನಿರೀಕ್ಷಿಸಿದ್ದರೆ, ಅದು ತಪ್ಪು ಲೆಕ್ಕಾಚಾರ. ನಿಜ, ಸಧ್ಯಕ್ಕೆ ನಿರಾಶೆ ಕವಿದಿದೆ. ಆದರೆ, ಜನಗಳ ಹೋರಾಟದ ಸ್ಫೂರ್ತಿಯಲ್ಲಿ ಕಿಂಚಿತ್ತೂ ಇಳಿಕೆ ಕಂಡುಬಂದಿಲ್ಲ. ಮತ್ತೊಮ್ಮೆ ಹೋರಾಟ ಭುಗಿಲೇಳುತ್ತಿದೆ ಮತ್ತು ಅಭಯಾಳಿಗೆ ನ್ಯಾಯ ದೊರಕುವವರೆಗೂ ಅದು ನಿಲ್ಲುವುದಿಲ್ಲ! ■

## ನ್ಯಾಯಾಲಯದ ತೀರ್ಪು: ಎಸ್‌ಯುಸಿಐ(ಸಿ) ಆಕ್ರೋಶ

**ಕೋಲ್ಕೊತ್ತದ ಆರ್.ಜಿ.ಕರ್ ಕಾಲೇಜಿನ ಮಹಿಳಾ ವೈದ್ಯೆಯ ಮೇಲಿನ ಘೋರ ಅತ್ಯಾಚಾರ ಹಾಗೂ ಕೊಲೆಯ ಪ್ರಕರಣದಲ್ಲಿ ಸಿಬಿಐ ವಿಶೇಷ ನ್ಯಾಯಾಲಯ ತೀರ್ಪು ನೀಡಿದ್ದು, ನಿರೀಕ್ಷಿಸಿದಂತೆ ಸಂಜಯ್ ಘೋಷ್ ಎನ್ನುವ ಪೌರ ಸ್ವಯಂಸೇವಕನನ್ನು ತಪ್ಪಿತಸ್ಥನೆಂದು ಘೋಷಿಸಿ, ಅವನಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಲಾಗಿದೆ. ಐದು ತಿಂಗಳ ವಿಚಾರಣೆ, ಸಿಬಿಐ ಸಲ್ಲಿಸಿದ ವರದಿಗಳ ಆಧಾರದ ಮೇಲೆ ಸಿಬಿಐ ನ್ಯಾಯಾಲಯ, ರಾಯ್ ಎಂಬ ವ್ಯಕ್ತಿಯೊಬ್ಬನೇ ಈ ಬರ್ಬರ ಅಪರಾಧದಲ್ಲಿ ಭಾಗಿ ಎನ್ನುವ ರಾಜ್ಯ ಸರ್ಕಾರದ ನಿಲುವನ್ನು ಅನುಮೋದಿಸಿದೆ. ಆದರೆ, ಈ ಅಪರಾಧದ ಉದ್ದೇಶವನ್ನು ಎಲ್ಲೂ ಉಲ್ಲೇಖಿಸಿಲ್ಲ. ಗಾಯಗಳ ಸ್ವರೂಪ, ಫೊರೆನ್ಸಿಕ್ ಮತ್ತು ಡಿಎನ್‌ಎ ವರದಿಗಳು, ಈ ಹೀನ ಅಪರಾಧದಲ್ಲಿ ಒಬ್ಬರಿಗಿಂತ ಹೆಚ್ಚು ಜನರು ಪಾಲ್ಗೊಂಡಿರುವ ಬಗ್ಗೆ ಸಾಕ್ಷಿಗಳು ಲಭ್ಯವಿದ್ದರೂ ಸಹ ತೀರ್ಪು ಇಲ್ಲಿ ಮೌನವಾಗಿದೆ.**

**ನಿಜವಾಗಿಯೂ, ಇದು ನ್ಯಾಯದಾನ ಪ್ರಕ್ರಿಯೆಯ ವಿಡಂಬನೆಯಾಗಿದ್ದು, ಇತರೆ ಅಪರಾಧಿಗಳನ್ನು ಉಳಿಸಿ, ಒಬ್ಬನನ್ನು ಮಾತ್ರ ಬಲಿಪಶು ಮಾಡುವಲ್ಲಿ ಕಾಣದ ಕೈಗಳ ಕೈವಾಡವಿದೆ ಎನ್ನುವುದಕ್ಕೆ ಸ್ಪಷ್ಟ ಸೂಚನೆ ಇದಾಗಿದೆ. ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ, ಸತ್ಯವನ್ನು ಮರೆಮಾಚಲು, ನಿಜವಾದ ಅಪರಾಧಿಗಳನ್ನು ಬಚಾವು ಮಾಡಲು ಸಿಬಿಐ ಸಹ ಇದರಲ್ಲಿ ನೆರವು ನೀಡಿದೆ.**

**ನ್ಯಾಯದ ವಿಡಂಬನೆಯಂತಿರುವ ಈ ತೀರ್ಪಿನ ವಿರುದ್ಧ ನಾವು ನಮ್ಮ ಆಕ್ರೋಶ ವ್ಯಕ್ತಪಡಿಸುತ್ತೇವೆ ಮತ್ತು ಜನತೆಗೆ, ವೈದ್ಯಕೀಯ ಸಮುದಾಯಕ್ಕೆ, ಚಳುವಳಿಯನ್ನು ಮತ್ತಷ್ಟು ತೀವ್ರಗೊಳಿಸಲು, ತನ್ಮೂಲಕ ಪ್ರಕರಣದ ಸತ್ಯವನ್ನು ಹೊರತರಲು ಸರ್ಕಾರವನ್ನು ಒತ್ತಾಯಿಸಲು ಕರೆ ನೀಡುತ್ತೇವೆ.**

# "90 ಗಂಟೆ ದುಡಿಯಬೇಕು"– ಇದು 'ಕರುಣಾಮಯಿ ಬಂಡವಾಳವಾದ'ದ ಒಣ ಉಪದೇಶ

ಫೆಬ್ರವರಿ 2023 ರಲ್ಲಿ ಇನ್ಫೋಸಿಸ್ ಸಂಸ್ಥಾಪಕ ಎನ್.ಆರ್.ನಾರಾಯಣಮೂರ್ತಿ, ಆಲ್ ಇಂಡಿಯಾ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್‌ನ (AIMA) ಸ್ಥಾಪನಾ ದಿನದ ಸಂದರ್ಭದಲ್ಲಿ, ಪ್ರತಿಭಾ ಪಲಾಯನದಿಂದ ಮಾನವ ಸಂಪನ್ಮೂಲಕ್ಕಾಗುತ್ತಿರುವ ನಷ್ಟದ ಕುರಿತಾದ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ, ಸಹಾನುಭೂತಿಯುಳ್ಳ ಬಂಡವಾಳಶಾಹಿ ವ್ಯವಸ್ಥೆಯನ್ನು ಜಾಗತಿಕವಾಗಿ ಅಪ್ಪಿಕೊಳ್ಳಬೇಕು ಎಂದು ಉಪದೇಶಿಸಿದರು. ಮುಂದುವರೆಯುತ್ತಾ, "ಕರುಣಾಮಯಿ ಬಂಡವಾಳವಾದ"(Compassionate Capitalism)ವು ಮುಕ್ತ ಮಾರುಕಟ್ಟೆಯ ಅತ್ಯುತ್ತಮ ಅಂಶಗಳ ಜೊತೆಗೆ ಉದಾರವಾದ ಹಾಗೂ ಸಮಾಜವಾದದಲ್ಲಿರುವ ಸಹಾನುಭೂತಿಯನ್ನು ಬೆರೆಸುತ್ತದೆ. ಹೀಗೆ ಮಾಡುವ ಮೂಲಕ ನಾವು ಜಗತ್ತಿಗೆ ಹೊಸ ಮಾದರಿಯೊಂದನ್ನು ಸೃಷ್ಟಿಸಬಲ್ಲೆವು – ಹೇಗೆ ಬಂಡವಾಳಶಾಹಿ ವ್ಯವಸ್ಥೆಯು ಸಮಾಜದ ಅತ್ಯಂತ ದುರ್ಬಲ ವರ್ಗದ ಜನರನ್ನೂ ಮೇಲೆತ್ತುತ್ತಾ ಯಶಸ್ಸನ್ನು ಪಡೆಯಬಹುದು ಎಂಬುದಕ್ಕೆ ಆಗ ಭಾರತವು ಉಜ್ವಲ ಉದಾಹರಣೆಯಾಗಿ ನಿಲ್ಲುತ್ತದೆ" ಎಂದರು. ಎಂತಹ ವಿನೂತನ ಪ್ರತಿಪಾದನೆ!! ಬಂಡವಾಳಶಾಹಿ ಜಾಗತೀಕರಣದ ನೀತಿಯಾದ ಮಾರುಕಟ್ಟೆ ಆರ್ಥಿಕತೆಯೊಂದಿಗೆ ಸಮಾಜವಾದದಲ್ಲಿರುವ ಆರ್ದ್ರತೆಯನ್ನು ಒಟ್ಟುಗೂಡಿಸುವುದು. ಅಂದರೆ ನೀರು ಹಾಗೂ ಎಣ್ಣೆಯನ್ನು ಒಟ್ಟಾಗಿ ಬೆರೆಸಿದಂತೆ!!

ಹೀಗೆ, ಎರಡು ವರ್ಷಗಳ ನಂತರ ಮತ್ತದೇ ಸಿದ್ಧಾಂತವನ್ನು ನಾರಾಯಣಮೂರ್ತಿ ಪುನರುಚ್ಚರಿಸಿದ್ದಾರೆ, ಆದರೆ ಸ್ವಲ್ಪ ನಿರ್ದಿಷ್ಟ ಸ್ವರೂಪದಲ್ಲಿ. ಕಳೆದ ಡಿಸೆಂಬರ್‌ನಲ್ಲಿ ಕೋಲ್ಕೊತ್ತಾದಲ್ಲಿ ನಡೆದ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್‌ನ ಶತಮಾನೋತ್ಸವ ಸಮಾರಂಭದಲ್ಲಿ ಅವರು, ಭಾರತವು ಜಾಗತಿಕವಾಗಿ ಉನ್ನತ ಸ್ಥಾನ ಪಡೆಯಲು, ಯುವ ಭಾರತೀಯರು ವಾರಕ್ಕೆ 70 ಗಂಟೆ ದುಡಿಮೆ ಮಾಡಲು ಮುಂದಾಗಬೇಕು ಎಂದು ಉಪದೇಶ ನೀಡಿದರು. ಭಾರತದ 80 ಕೋಟಿ ಜನ ಕಡು ಬಡತನಲ್ಲಿದ್ದು, ಇದನ್ನು ನಿವಾರಿಸಲು ಆದಾಯ ತಂದು ಕೊಡುವ ಉದ್ಯೋಗಗಳು ಸೃಷ್ಟಿಯಾಗಬೇಕು ಎಂದೂ ಹೇಳಿದರು. ಆದರೆ, ಸರಿಯಾದ ಆದಾಯ ತರುವ ಉದ್ಯೋಗಗಳನ್ನು ಸೃಷ್ಟಿಸದೆ ಇರುವವರು ಯಾರು? ಈ ಮೂಲಭೂತ ಪ್ರಶ್ನೆಗೆ ಪ್ರವೇಶ ಮಾಡುವ ಗೋಜಿಗೆ ಅವರು ಹೋಗಲಿಲ್ಲ. ಏಕೆಂದರೆ ಇಲ್ಲದ ಸಮಸ್ಯೆಗಳಿಗೆ ಆಹ್ವಾನ ನೀಡಿದಂತಾಗುತ್ತದೆ ಹಾಗೂ ಅದನ್ನೆಲ್ಲ ನುಂಗಿಕೊಳ್ಳಬೇಕಾಗುತ್ತದೆ. ನಂತರ ತುಂಬಾ ಕಲಾತ್ಮಕವಾಗಿ ಚರ್ಚೆಯನ್ನು 70 ತಾಸು ದುಡಿಮೆಯ ಕಡೆಗೆ ಅವರು ತಿರುಗಿಸಿದರು. ಆದರೆ 70 ತಾಸುಗಳ ದುಡಿಮೆ ಹೇಗೆ ಬಡತನವನ್ನು ನಿವಾರಣೆ ಮಾಡುತ್ತದೆ? ಹಾಗೂ ಬಂಡವಾಳವಾದವನ್ನು ಹೇಗೆ ಅದು 'ಸಹಾನಭೂತಿಯುಳ್ಳ ವ್ಯವಸ್ಥೆ'ಯನ್ನಾಗಿ ಮಾಡುತ್ತದೆ ಎಂಬುದನ್ನು ವಿವರಿಸಲಿಲ್ಲ. ತಮ್ಮ ಪ್ರಕಾರ ಕರುಣೆಯೇ ಇರದ ಬಂಡವಾಳವಾದವು, ಸಹಾನುಭೂತಿಯುಳ್ಳ ಗುಣಲಕ್ಷಣವನ್ನು ಹೇಗೆ ಪಡೆಯುತ್ತದೆ ಎನ್ನುವ ಕುರಿತು ಅವರು ವಿವರಿಸಲಿಲ್ಲ.

"ಚಳಿಗಾಲ ಬಂದ ಮೇಲೆ ವಸಂತಕಾಲ ಬರುವುದು ವಿಳಂಬವೇ?" ಲಾರ್ಸನ್ ಅಂಡ್ ಟ್ಯೂಬ್ರೊ (L&T) ಅಧ್ಯಕ್ಷ ಎಸ್.ಎನ್.ಸುಬ್ರಮಣ್ಯಂ, ಸ್ಪರ್ಧೆಯಲ್ಲಿರಬೇಕಾದರೆ 70 ಗಂಟೆಯಲ್ಲ, ವಾರದಲ್ಲಿ ಭಾನುವಾರವೂ ಒಳಗೊಂಡು 90 ಗಂಟೆ ಕೆಲಸ ಮಾಡಬೇಕು ಎಂದು ಉಪದೇಶ ನೀಡಿದ್ದಾರೆ. ಚೀನಾ–ಅಮೇರಿಕವನ್ನು ಹಿಂದಿಕ್ಕಲು ಸಾಧ್ಯವಾಗಿದ್ದೂ, ಅಮೇರಿಕದ ದುಡಿಮೆಯ ಅವಧಿ ವಾರದಲ್ಲಿ 50 ಗಂಟೆಗಳಿಗೆ ಹೋಲಿಸಿದರೆ ಚೀನಾದಲ್ಲಿ ವಾರದಲ್ಲಿ 90 ತಾಸುಗಳ ದುಡಿಮೆ ಇರುವುದರಿಂದ ಅಂತೆ! 2024ರ ಜುಲೈನಲ್ಲಿ ಅರ್ನಸ್ಟ್ ಅಂಡ್ ಯಂಗ್ (EY) ಕಂಪೆನಿಯ ಕನ್ಸಲ್ಟೆಂಟ್ ಆಗಿದ್ದ 26 ವರ್ಷದ ಯುವತಿಯೊಬ್ಬರ ಸಾವು, ದುಡಿಮೆಯ ಸಂಸ್ಕೃತಿ ಹಾಗೂ ಉದ್ಯೋಗ ಸಂಬಂಧಿ ಒತ್ತಡದ ಬಗ್ಗೆ ದೇಶದ ಗಮನ ಸೆಳೆಯಿತು. ಹೀಗಿದ್ದಾಗಲೂ, ಸುಬ್ರಹ್ಮಣ್ಯಂ, 'ಮನೆಯಲ್ಲಿ ಕುಳಿತು ಏನು ಮಾಡುವಿರಿ? ಎಷ್ಟು ಹೊತ್ತು ಹೆಂಡತಿಯ ಮುಖವನ್ನೇ ನೋಡುತ್ತಾ ಇರುವಿರಿ? ಅಥವಾ ಎಷ್ಟು ಹೊತ್ತು ಹೆಂಡತಿಯರು ಗಂಡಂದಿರನ್ನು ನೋಡುತ್ತಾ ಇರಬೇಕು? ಆಫೀಸಿಗೆ ಬನ್ನಿ ಕೆಲಸ ಮಾಡಿ' ಎಂದು ಬುದ್ಧಿವಾದ(?) ಹೇಳಿದರು. ಅವರ ಈ ಲೇವಡಿಗೆ ಸಾಮಾಜಿಕ ಮಾಧ್ಯಮಗಳಲ್ಲಿ ಜನ ತಕ್ಕ ಉತ್ತರವನ್ನೇ ಕೊಟ್ಟಿದ್ದಾರೆ. ನೌಕರರೊಬ್ಬರು ಈ ರೀತಿಯಾಗಿ ಛೀಮಾರಿ ಹಾಕಿದ್ದಾರೆ–"ದುಡಿಮೆ ಮತ್ತು ಬದುಕು, ಇವುಗಳ ನಡುವಿನ ಸಮತೋಲನದ ವಿಷಯದಲ್ಲಿ ಎಲ್‌ಅಂಡ್‌ಟಿ ಬಹಳ ಕೆಟ್ಟ ಸಂಸ್ಥೆಯಾಗಿದೆ. ಪುಡಿಗಾಸು ವೇತನ ನೀಡುತ್ತದೆ. ಒಬ್ಬ ಇಂಜಿನಿಯರ್, ವಾರದಲ್ಲಿ 6.5 ದಿನ ಕೆಲಸ ಮಾಡಿದರೆ, ಆತನಿಗೆ ಕೇವಲ ರೂ.35,000 ವೇತನ ಬರುತ್ತದೆ. ಕೆಲಸಕ್ಕೆ ಸೇರಿದ ಮೊದಲ 12 ತಿಂಗಳಲ್ಲಿ ಕೇವಲ 7 ಸಾಂದರ್ಭಿಕ ರಜೆಗಳನ್ನು ನೀಡಲಾಗುತ್ತದೆ. ಅಂದರೆ ಆತ ಒಂದು ಬಾರಿ ಕೂಡ ಮನೆಗೆ ಹೋಗಲು ಆಗುವುದಿಲ್ಲ. ಕ್ಯಾಂಪಸ್ ಸೆಲೆಕ್ಷನ್ ಮೂಲಕ ಆಯ್ಕೆಗೊಂಡ ಶೇ.90ರಷ್ಟು ನೌಕರರು 3 ವರ್ಷಗಳ ಒಳಗೆ ಕಂಪೆನಿಯಿಂದ ಹೊರಬರುತ್ತಾರೆ. ಶೇ.50–60 ನೌಕರರು ಒಂದು ವರ್ಷದಲ್ಲೇ ಕಂಪೆನಿಯನ್ನು ಬಿಡುತ್ತಾರೆ". ಈ ನಿರ್ದಿಷ್ಟ ಪ್ರಶ್ನೆಗೆ ಸುಬ್ರಮಣ್ಯಂ ಅವರ ಬಳಿ ಉತ್ತರವಿದೆಯೇ ಎಂಬುದನ್ನು, ಮಾಧ್ಯಮಗಳು ವರದಿ ಮಾಡಲಿಲ್ಲ.

ನಿರುದ್ಯೋಗ, ಕೆಲಸದಿಂದ ವಜಾ, ಕುಸಿಯುತ್ತಿರುವ ವೇತನ ಮುಂತಾದ ಸಮಸ್ಯೆಗಳನ್ನು ಸೃಷ್ಟಿಸಿ, ಜನ ಜೀವನವನ್ನು ನರಕ ಮಾಡಿರುವ ಶೋಷಕ

7ನೇ ಪುಟಕ್ಕೆ....

# ಯುಜಿಸಿ ಕರಡು ನಿಯಮಾವಳಿ-2024 "ಶಿಕ್ಷಣದ ಸರ್ವನಾಶಕ್ಕಾಗಿ ನೀಲನಕ್ಷೆ"

ಯುಜಿಸಿ ಪ್ರಸ್ತಾಪಿಸಿರುವ ಕರಡು ನಿಯಮಾವಳಿ-2024ನ್ನು ಡಿಸೆಂಬರ್ 5ರಂದು ಪ್ರಕಟಿಸಲಾಗಿದೆ. (1) ವರ್ಷಕ್ಕೆರಡು ಬಾರಿ ಪ್ರವೇಶಾತಿ, (2) ಏಕಕಾಲಕ್ಕೆ ಎರಡು ಪದವಿ ಮತ್ತು ಸ್ನಾತಕೋತ್ತರ ಪದವಿ, (3) ಪದವಿ ಮತ್ತು ಸ್ನಾತಕೋತ್ತರ ಪದವಿಯಿಂದ ಬಹು ಆಗಮನ - ನಿರ್ಗಮನ - ಇನ್ನು ಮುಂತಾದ ಯೋಜನೆಗಳನ್ನು ಘೋಷಿಸಲಾಗಿದೆ. ಉನ್ನತ ಶಿಕ್ಷಣದಲ್ಲಿ ಒಳಗೊಳ್ಳುವಿಕೆ ಮತ್ತು ಹೊಂದಿಕೊಳ್ಳುವಿಕೆ ಎಡೆಗೆ ಈ ಪ್ರಸ್ತಾಪಗಳು ಕ್ರಾಂತಿಕಾರಿ ಹೆಜ್ಜೆಗಳು ಎಂದು ಕೊಂಡಾಡಲಾಗುತ್ತಿದೆ. ಇದಲ್ಲದೆ, ಉನ್ನತ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಇನ್ನೂ ಹಲವು ಪ್ರಸ್ತಾವನೆಗಳನ್ನು ಮುಂದಿಡಲಾಗಿದೆ. ಅವುಗಳೆಂದರೆ,

**1) ದ್ವಿತೀಯ ಪಿಯುಸಿಯಲ್ಲಿ ಯಾವುದೇ ವಿಷಯ ಅಧ್ಯಯನ ಮಾಡಿದ್ದರೂ ಸರಿಯೇ, ಪದವಿಯಲ್ಲಿ ಇನ್ನಾವುದೇ ವಿಷಯವನ್ನು ಆಯ್ಕೆ ಮಾಡಿಕೊಳ್ಳಬಹುದು,**

**2) ಪದವಿಯಲ್ಲಿ ಯಾವುದೇ ಮೇಜರ್ ಅಥವಾ ಮೈನರ್ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದರೂ ಸರಿಯೇ, ಸ್ನಾತಕೋತ್ತರ ಪದವಿಯಲ್ಲಿ ಇಷ್ಟವಿಲ್ಲದ ವಿಷಯವನ್ನು ತ್ಯಜಿಸಬಹುದು**

**3) ಕನಿಷ್ಠ ಅವಶ್ಯಕ ಹಾಜರಾತಿಯಲ್ಲಿ ವಿನಾಯಿತಿ ಇದೆ**

**4) ಆದ್ಯತೆಯ ಕಲಿಕೆಗೆ ಮಾನ್ಯತೆ ಇದೆ**

**5) ತ್ವರಿತ ಪದವಿ ದೊರಕುತ್ತದೆ**

**6) ವಿಸ್ತೃತ ಪದವಿ ಲಭ್ಯವಿದೆ ಇತ್ಯಾದಿ.**

ಪ್ರಗತಿಶೀಲತೆಯ ಮುಖವಾಡವನ್ನು ಹೊತ್ತಿರುವ ಈ ನಿಯಮಾವಳಿಯ ಪರಿಷ್ಕರಣೆಯ ಹಿಂದೆ ವ್ಯವಸ್ಥಿತವಾಗಿ ಶಿಕ್ಷಣವನ್ನು ದುರ್ಬಲಗೊಳಿಸುವ ಮತ್ತು ಅದನ್ನು ವ್ಯಾಪಾರದ ಸರಕಾಗಿಸುವ ಆಘಾತಕಾರಿ ಹುನ್ನಾರ ಅಡಗಿದೆ. ಅಲ್ಲಿ ಖಾಸಗೀಕರಣದ ಯೋಜನೆ ಇದೆ. ಸಾರ್ವಜನಿಕ ಸಂಸ್ಥೆಗಳನ್ನು ನಾಜೂಕಾಗಿ ಲಾಭ ಗಳಿಕೆಯ ದಿಕ್ಕಿನೆಡೆಗೆ ದೂಡುವ ಗುಪ್ತ ಪುನರ್‌ರಚನೆಯ ನೀಲಿನಕ್ಷೆಯದು.

### ಮಾತು ಅಬ್ಬರ - ಕಳಪೆ ಮೂಲಸೌಕರ್ಯ

ಈಗಾಗಲೇ ಸಿಬ್ಬಂದಿ, ತರಗತಿ ಕೊಠಡಿ ಮತ್ತು ಮೂಲ ಸೌಕರ್ಯಗಳ ಕೊರತೆಯಿಂದ ಬಳಲುತ್ತಿರುವ ಉನ್ನತ ಶಿಕ್ಷಣ ಸಂಸ್ಥೆಗಳ ಮೇಲೆ ನಾಲ್ಕು ವರ್ಷ ಅವಧಿಯ ಪದವಿ ಕಾರ್ಯಕ್ರಮವನ್ನು ಹೇರಲಾಗಿದೆ. ನಾಲ್ಕನೇ ವರ್ಷದ ಪದವಿ ವಿಸ್ತರಣೆ ಮಾಡಲಾಗಿದೆಯೇ ವಿನ: ಅದಕ್ಕೆ ಅವಶ್ಯಕವಾದ ಆರ್ಥಿಕ ನೆರವು ನೀಡಲು ಮಾತ್ರ ಸರ್ಕಾರಗಳು ಸಿದ್ಧವಿಲ್ಲ. ಜೊತೆಗೆ, ಬಹು ಆಗಮನ-ನಿರ್ಗಮನ ಮತ್ತು ವರ್ಷಕ್ಕೆರಡು ಪ್ರವೇಶಾತಿಗಳ ಭಾರವನ್ನು ಹೊರಿಸಲಾಗಿದೆ. ಇನ್ನು ಮುಂದೆ, ಕನಿಷ್ಠ ಹಾಜರಾತಿಯ ಮಾನದಂಡವನ್ನು ಗಾಳಿಗೆ ತೂರಲಾಗುವುದು. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಕಂಡು ಕೇಳರಿಯದ ಯಾವುದೇ ರೀತಿಯಲ್ಲಿ ಅಧ್ಯಯನ ಮಾಡದ ನಿಯಮಗಳನ್ನು 'ವಿದ್ಯಾರ್ಥಿ ಕೇಂದ್ರಿತ ಶಿಕ್ಷಣ' ಎಂಬ ಹೆಸರಲ್ಲಿ ಈಗ ಪರಿಚಯಿಸಲಾಗುತ್ತಿದೆ. ಈ ಎಲ್ಲ ಬದಲಾವಣೆಗಳನ್ನು ಅಮೇರಿಕದ ಶಿಕ್ಷಣ ವ್ಯವಸ್ಥೆಯಿಂದ ಕುರುಡಾಗಿ ನಕಲು ಮಾಡಲಾಗಿದೆ.

ಈ ಯೋಜನೆಗಳ ಶೈಕ್ಷಣಿಕ ಕಾರ್ಯಸಾಧ್ಯತೆ ಕುರಿತು ಸಮಗ್ರವಾಗಿ ಚರ್ಚಿಸುವ ಮುನ್ನವೇ, ದೇಶದಾದ್ಯಂತ ಅದೆಷ್ಟು ಉನ್ನತ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಇಷ್ಟು ಅವಕಾಶಗಳನ್ನು ನೀಡುವ ಸಾಮರ್ಥ್ಯವನ್ನು ಹೊಂದಿವೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಕಳೆದ ಒಂದು ದಶಕದ ಬಿಜೆಪಿ ಆಳ್ವಿಕೆಯಡಿ ಶಿಕ್ಷಣಕ್ಕೆ ಅನುದಾನವು ವಿಪರೀತ ಕುಸಿದಿದೆ. ಈ ವರ್ಷ ಯುಜಿಸಿ ಬಜೆಟ್ಟನ್ನು ಶೇ.61 ರಷ್ಟು ಇಳಿಸಲಾಗಿದೆ. ಸರ್ಕಾರಗಳು ಬೋಧಕರ ಹುದ್ದೆಯನ್ನು ಹೊಸದಾಗಿ ಸೃಷ್ಟಿಸಿಲ್ಲ ಮತ್ತು ಖಾಲಿ ಇರುವ ಹುದ್ದೆಗಳನ್ನು ತುಂಬಲು ಸಿದ್ಧವಿಲ್ಲ.

### ಪ್ರಸ್ತಾವಿತ ಯೋಜನೆಗಳ ಕುರಿತು....

ದ್ವಿತೀಯ ಪಿಯುನಲ್ಲಿ ಯಾವುದೋ ವಿಷಯವನ್ನು ಅಧ್ಯಯನ ಮಾಡಿ, ಒಬ್ಬ ವಿದ್ಯಾರ್ಥಿಯು ಇನ್ನಾವುದೋ ವಿಷಯದಲ್ಲಿ ಪದವಿ ಪಡೆಯುವಂತಾದರೆ ಮತ್ತು ಯಾವುದೋ ವಿಷಯವನ್ನು ಪದವಿ ಮಟ್ಟದಲ್ಲಿ ಕಲಿತ ವಿದ್ಯಾರ್ಥಿಯು ಇನ್ನಾವುದೋ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರೆ, ಕಲಿಕೆಯ ಗುಣಮಟ್ಟ ಏನಾಗುತ್ತದೆ? ಒಂದು ಹಂತದಲ್ಲಿ ಇತಿಹಾಸ, ತತ್ವಶಾಸ್ತ್ರ ಮತ್ತು ರಾಜ್ಯಶಾಸ್ತ್ರದ ವಿಷಯ ಗುಚ್ಛವನ್ನು ಹೊಂದಿದ್ದ ವಿದ್ಯಾರ್ಥಿಯು ಪದವಿ ಹಂತದಲ್ಲಿ ಭೌತಶಾಸ್ತ್ರವನ್ನು ಪ್ರಮುಖ ವಿಷಯವಾಗಿ ಆಯ್ದುಕೊಂಡರೆ ವಿಷಯದ ಸಮಗ್ರ ತಿಳುವಳಿಕೆ ಏನಾಗಬೇಕು? ಅದೇ ರೀತಿ, ಪದವಿ ಹಂತದಲ್ಲಿ ಭೌತಶಾಸ್ತ್ರ, ರಾಸಾಯನಶಾಸ್ತ್ರ ಮತ್ತು ಗಣಿತವನ್ನು ಆಯ್ದುಕೊಂಡ ವಿದ್ಯಾರ್ಥಿಗೆ ಸ್ನಾತ-ಕೋತ್ತರ ಪದವಿಯಲ್ಲಿ ಅರ್ಥಶಾಸ್ತ್ರ ಅಧ್ಯಯನಕ್ಕೆ ಅವಕಾಶ ನೀಡಿದರೆ ಏನಾಗುತ್ತದೆ ಊಹಿಸಿ! ಇದರೊಂದಿಗೆ, ಒಬ್ಬ ವಿದ್ಯಾರ್ಥಿಯು ಏಕಕಾಲಕ್ಕೆ ಎರಡು ಸ್ನಾತಕೋತ್ತರ ಪದವಿ ಮಾಡುವ ಪರಿಸ್ಥಿತಿ ಭಯಾನಕ! ಅಷ್ಟೇ ಅಲ್ಲದೆ, ಬೇಕಾದಾಗ ಸೆಮಿಸ್ಟರ್ ತೊರೆಯಬಹುದು ಮತ್ತು ಬೇಕೆಂದಾಗ ಮರಳಿ ಪ್ರವೇಶ ಪಡೆಯಬಹುದು ಎಂಬ ಅವಕಾಶ ಬೇರೆ! ಔಪಚಾರಿಕ ಶಿಕ್ಷಣದ ಆಚೆಗಿನ ಕಲಿಕೆ ಅಥವಾ ಉದ್ಯೋಗದ ಸ್ಥಳದಲ್ಲಿನ ಕಲಿಕೆ ಹಾಗೂ ತರಬೇತಿಗೂ ಮೌಲ್ಯಾಂಕನ ನೀಡುವುದಾಗಿ ಯುಜಿಸಿ ನಿಯಮಾವಳಿ ಹೇಳುತ್ತದೆ. ಆಕರ್ಷಕವಾಗಿರುವ ಈ ಪ್ರಸ್ತಾವನೆಯಿಂದ ವಿದ್ಯಾರ್ಥಿಗಳು ಹೇಗೆ ಉನ್ನತ ಶಿಕ್ಷಣ ಸಂಸ್ಥೆಗೆ ಅರ್ಹತೆ ಗಳಿಸಿಕೊಳ್ಳಬಹುದು?

### ಸಾರ್ವಜನಿಕ ಸಂಸ್ಥೆಗಳ ಕಡೆಗಣನೆ - ಶಿಕ್ಷಣವು ಬಂಡವಾಳಶಾಹಿ ಮಾರುಕಟ್ಟೆ ಸರಕು

ಈಗಾಗಲೇ ಹಣಕಾಸಿನ ಕೊರತೆಯಿಂದ ಬಳಲುತ್ತಿರುವ ವಿಶ್ವವಿದ್ಯಾಲಯಗಳ ಮೇಲೆ ಈ ಎಲ್ಲ ಪ್ರಸ್ತಾವನೆಗಳ ಅನಗತ್ಯ ವಿತ್ತೀಯ ಭಾರವನ್ನು ಹೊರಿಸಲಾಗಿದೆ. ತಮ್ಮ ಲಾಭಗಳಿಕೆಯ ಉದ್ದೇಶದಿಂದ ಖಾಸಗಿ ಸಂಸ್ಥೆಗಳು ಈ ಬದಲಾವಣೆಯನ್ನು ಕೂಡಲೇ ಮೈಗೂಡಿಸಿಕೊಳ್ಳುತ್ತವೆ. ಆದರೆ, ಸಾರ್ವಜನಿಕ ಶಿಕ್ಷಣ ಸಂಸ್ಥೆಗಳ ಗತಿ ಏನು? ಈಗಾಗಲೇ ಶಿಕ್ಷಣವನ್ನು ಮಾರಾಟದ ಸರಕಾಗಿಸಿರುವ ಸರ್ಕಾರಗಳು ಅದನ್ನು ಉಳ್ಳವರ ಸ್ವತ್ತಾಗಿಸಿವೆ. ಸಾಕಷ್ಟು ಇತಿಮಿತಿಗಳ ಜೊತೆಗೂ ಸಹ, ಸಾರ್ವಜನಿಕ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಐತಿಹಾಸಿಕವಾಗಿ ವಿಮರ್ಶಾತ್ಮಕ ಚಿಂತನಾ ಪ್ರಕ್ರಿಯೆ, ತರ್ಕಬದ್ಧ ವಿಶ್ಲೇಷಣಾ ಪ್ರಕ್ರಿಯೆ ಮತ್ತು ಚಿಂತನೆಯಲ್ಲಿ ಏಕತೆಯನ್ನು ಕಲಿಸಿವೆ. ಜನತಾಂತ್ರಿಕ ಮತ್ತು ವೈಜ್ಞಾನಿಕ ಶಿಕ್ಷಣ ವ್ಯವಸ್ಥೆಯ ಬದಲಿಗೆ ಅಸಮಾನತೆಯನ್ನು ಪ್ರಶ್ನಿಸದ, ಸ್ವತಂತ್ರ ಆಲೋಚನಾ ಶಕ್ತಿಯನ್ನು ಗಳಿಸದ ಕೆಲಸಗಾರರನ್ನು ಸೃಷ್ಟಿಸುವ ಹುನ್ನಾರ ಈ ಕ್ರಮಗಳ ಹಿಂದೆ ದಟ್ಟವಾಗಿ ಕಾಣುತ್ತದೆ.

ಸಾರ್ವಜನಿಕ ಜೀವನದ ಎಲ್ಲ ರಂಗದಲ್ಲೂ ಲಾಭ ಕೇಂದ್ರಿತ ಮಾರುಕಟ್ಟೆ ಸಿದ್ಧಾಂತಗಳನ್ನು ಪ್ರತಿಪಾದಿಸುವ ಬಂಡವಾಳಶಾಹಿ ವ್ಯವಸ್ಥೆಯ ಜಾಗತೀಕರಣದ ಅಜೆಂಡಾಗಳೊಂದಿಗೆ ಯುಜಿಸಿ ನಿಯಮಾವಳಿ ಸ್ಪಷ್ಟವಾಗಿ ನಿಲ್ಲುತ್ತದೆ. ಕೇಂದ್ರೀಕರಣ ಮತ್ತು ಮಾರುಕಟ್ಟೆ ಕೇಂದ್ರಿತ ನೀತಿಗಳನ್ನು ತರುತ್ತಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು "ಜಾಗತೀಕ ಸ್ಪರ್ಧಾತ್ಮಕತೆ" ಮತ್ತು "ಆತ್ಮ ನಿರ್ಭರ" ಎಂಬ ಪದಪುಂಜಗಳನ್ನು ಹೊತ್ತಿರುವ ಯುಜಿಸಿಯ ನಿಮಾವಳಿಯನ್ನು ಖಾಸಗೀಕರಣದ ಅತಿಕ್ರಮಣಕ್ಕೆ ಪ್ರಗತಿಯ ಮುಖವಾಡವಾಗಿ ತೊಡಿಸಿದೆ.

### ಪ್ರವಾಹದ ಎದುರು ಈಜಬೇಕು

ಖಾಸಗೀಕರಣದ ಈ ಪ್ರವಾಹವನ್ನು ತಡೆಯಲು, ಚಾರಿತ್ರ್ಯ ನಿರ್ಮಾಣ ಮಾಡಲು ಬೇಕಾದ ಚಿಂತನಾ ಪ್ರಕ್ರಿಯೆಯನ್ನು ರೂಪಿಸುವ ಶಿಕ್ಷಣದ ಪಾತ್ರವನ್ನು ಈಗ ಮತ್ತೆ ಪ್ರತಿಪಾದಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ, ವಿಶ್ವವಿದ್ಯಾಲಯಗಳಿಗೆ ಹಣಕಾಸಿನ ನೆರವು ನೀಡುವುದಷ್ಟೇ ಅಲ್ಲವೇ ಮಾರುಕಟ್ಟೆ ಸಿದ್ಧಾಂತಗಳು ಶೈಕ್ಷಣಿಕ ವಲಯವನ್ನು ಪ್ರವೇಶಿಸದಂತೆ ತಡೆಯಬೇಕಿದೆ. ಮಾರುಕಟ್ಟೆಗಾಗಿ ಕೆಲಸಗಾರರನ್ನು ತಯಾರು ಮಾಡದೆ, ಶೋಷಕ ವ್ಯವಸ್ಥೆಗೆ ಸೆಡ್ಡು ಹೊಡೆದು ಸರಿಯಾಗಿ ಸತ್ಯ ಮತ್ತು ಸುಳ್ಳಿನ ನಡುವೆ ವ್ಯತ್ಯಾಸವನ್ನು ಗುರುತಿಸುವ ವಿಚಾರಶೀಲ ದೃಷ್ಟಿಕೋನವನ್ನು ಬೆಳೆಸಬಲ್ಲ ಸ್ವತಂತ್ರ ಹಾಗೂ ವಿಮರ್ಶನಾಶೀಲ ಚಿಂತಕರನ್ನು ರೂಪಿಸುವ ವ್ಯವಸ್ಥೆಯಾಗಿ ಶಿಕ್ಷಣ ಕ್ಷೇತ್ರವನ್ನು ಪರಿಗಣಿಸಬೇಕಿದೆ. ಹಲವಾರು ಸವಾಲುಗಳು ಇವೆಯಾದರೂ, ಸಾರ್ವಜನಿಕ ವಿಶ್ವವಿದ್ಯಾಲಯಗಳು ವೈಜ್ಞಾನಿಕ, ಧರ್ಮನಿರಪೇಕ್ಷ ಮತ್ತು ಸಾರ್ವತ್ರಿಕ ಶಿಕ್ಷಣವನ್ನು ಕಡೆಗಣಿಲಾಗದ ಕೇಂದ್ರಗಳಾಗಿ ಇನ್ನೂ ಉಳಿದಿವೆ. ಸಮರ್ಪಕ ಶಿಕ್ಷಣವನ್ನು ಒದಗಿಸುವ ಕೆಲಸಕ್ಕೆ ಅಡ್ಡಿಯಾಗುವ ಎಲ್ಲ ನೀತಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಬೇಕಿದೆ.

ಯುಜಿಸಿಯ ಕರಡು ನಿಯಮಾವಳಿ ಬಂಡವಾಳಶಾಹಿ ಜಾಗತೀಕರಣದ ಸ್ಪಷ್ಟ ಕಾರ್ಯಸೂಚಿಯಾಗಿದೆ. ಶಿಕ್ಷಣದ ಜನತಾಂತ್ರಿಕರಣವನ್ನು ಹಾಳುಗೆಡವಿ ಶೈಕ್ಷಣಿಕ ವ್ಯವಸ್ಥೆಯ ಒಳಗೆ ಬಂಡವಾಳಶಾಹಿ ಹಿತಾಸಕ್ತಿಯನ್ನು ತೂರಿಸುವ ಲೆಕ್ಕಾಚಾರವನ್ನು ಅದು ಹೊಂದಿದೆ.

ಗ್ರೀಕ್ ಮಿಥಕದ 'ಟ್ರೋಜನ್ ಕುದುರೆ'ಯಂತೆ, ಹೊರಗಿನಿಂದ 'ಮುಗ್ಧ, ಪ್ರಗತಿಕಾರಕ'ದಂತೆ ಕಾಣಿಸುವ ಯುಜಿಸಿ ನಿಯಮಾವಳಿ-2024 ಒಟ್ಟಾರೆ ಶೈಕ್ಷಣಿಕ ವ್ಯವಸ್ಥೆಯನ್ನೇ ಧ್ವಂಸ ಮಾಡುವ ತಿರುಳನ್ನು ಹೊಂದಿದೆ. ಈ ಪ್ರಸ್ತಾವಿತ ಪರಿಷ್ಕರಣೆಗಳನ್ನು ಕಟುವಾಗಿ ವಿರೋಧಿಸದಿದ್ದಲ್ಲಿ, ಅದು ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು ವಿರೂಪಗೊಳಿಸುವುದಷ್ಟೆ ಅಲ್ಲದೆ, ಶಿಕ್ಷಣದ ಉದ್ದೇಶವನ್ನೇ ಬುಡಮೇಲು ಮಾಡುತ್ತದೆ. ಅದಕ್ಕಾಗಿ, ಶಿಕ್ಷಣ ತಜ್ಞರು, ವಿವಿಧ ಕ್ಷೇತ್ರಗಳ ಬುದ್ಧಿಜೀವಿಗಳು, ಒಳಗೊಂಡಂತೆ ಶಿಕ್ಷಣ ಪ್ರೇಮಿ ಜನತೆಯನ್ನು ತೊಡಗಿಸಿಕೊಂಡು ಶಿಕ್ಷಣವನ್ನು ರಕ್ಷಿಸುವ ಹೋರಾಟವನ್ನು ತೀವ್ರಗೊಳಿಸುವ ಅವಶ್ಯಕತೆ ಇದೆ. ■

## ಅತಿಥಿ ಉಪನ್ಯಾಸಕರ ಪ್ರತಿಭಟನೆ



ಜನವರಿ 24ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಸರಕಾರಿ ಪದವಿ ಕಾಲೇಜುಗಳ ಯುಜಿಸಿಯೇತರ ಅತಿಥಿ ಉಪನ್ಯಾಸಕರು ಎಐಸಿಯುಟಿಎ-ಎನ್‌ಆರ್(ಆಲ್ ಇಂಡಿಯಾ ಕಾಲೇಜ್ ಅಂಡ್ ಯುನಿವರ್ಸಿಟಿ ಟೀಚರ್ಸ್ ಅಸೋಸಿಯೇಶನ್-ನಾನ್ ರೆಗ್ಯುಲರ್) ಸಂಘಟನೆಯ ಅಡಿಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿ ತಮ್ಮನ್ನು ಸೇವೆಯಲ್ಲಿ ಮುಂದುವರಿಸಬೇಕೆಂದು ಆಗ್ರಹಿಸಿ ಪ್ರತಿಭಟನಾ ಪ್ರದರ್ಶನ ನಡೆಸಿದರು.

## ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ (ಎಐಎಸ್‌ಇಸಿ)ಯ ನೇತೃತ್ವದಲ್ಲಿ ಯುಜಿಸಿ ನಿಯಮಾವಳಿ-2024 ಕುರಿತು ಮಾಜಿ ಉಪಕುಲಪತಿಗಳ ದುಂಡು ಮೇಜಿನ ಸಭೆ




ಸಭೆಯ ಅಧ್ಯಕ್ಷತೆಯನ್ನು ಹಂಪಿ ಕನ್ನಡ ವಿವಿ ಮಾಜಿ ಉಪಕುಲಪತಿಗಳಾದ ಪ್ರೊ. ಎ. ಮುರಿಗೆಪ್ಪ ವಹಿಸಿದ್ದರು. ಮಾಜಿ ಉಪಕುಲಪತಿಗಳಾದ ಡಾ॥ ಎಸ್.ಚಂದ್ರಶೇಖರ್ ಶೆಟ್ಟಿ (ಆರ್‌ಜಿಯುಹೆಚ್‌ಎಸ್), ಪ್ರೊ. ಎ.ಹೆಚ್. ರಾಜಾ ಸಾಬ್(ತುಮಕೂರು ವಿವಿ), ಶ್ರೀ ಆರ್.ಎಲ್. ಮೌರ್ಯನ್ (ಎಐಎಸ್‌ಇಸಿ), ಪ್ರೊ. ಅಲ್ಲಮಪ್ರಭು ಬೆಟ್ಟದೂರು, ಪ್ರೊ. ಟಿ.ಡಿ ಕೆಂಪರಾಜ್ (ಬಿಎನ್‌ಯು), ಡಾ॥ ವಿಕ್ಟರ್ ಲೋಬೋ(ಸೇ.ಜೋಸೆಫ್ಸ್ ವಿವಿ), ಡಾ॥ ಎಂ.ಎಸ್. ಆಶಾದೇವಿ, ಡಾ॥ ಎಲ್.ಜೆ. ಮೀರಾ, ಶ್ರೀ. ವಿ.ಎನ್. ರಾಜಶೇಖರ್(ಉಪಾಧ್ಯಕ್ಷರು, ಎಐಎಸ್‌ಇಸಿ) ಭಾಗವಹಿಸಿದ್ದರು.

# 'ಆರ್ಥಿಕತೆ ಬೆಳೆಯುತ್ತಿದೆ, ಜನರು ನಿರ್ಗತಿಕರಾಗುತ್ತಿದ್ದಾರೆ' – ಏನೀ ರಹಸ್ಯ???

ಪ್ರಧಾನಿ ಮೋದಿ ಮತ್ತು ಅವರ ಸಂಪುಟ ಸದಸ್ಯರು ಭಾರತವು 5 ಟ್ರಿಲಿಯನ್(ಶತಕೋಟಿ) ಡಾಲರ್ ಆರ್ಥಿಕತೆಯಾಗಿ ಹೊರಹೊಮ್ಮಿ, ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಲಿದೆ ಎಂದು ಕೆಲವು ವರ್ಷಗಳಿಂದ ಹೇಳಿಕೊಂಡು ಬರುತ್ತಲೇ ಇದ್ದಾರೆ. ಈ ಭಾರಿ ಬೆಳವಣಿಗೆಗೆ ರಾಜಕೀಯ ಸ್ಥಿರತೆ ಮತ್ತು ಆಡಳಿತದ ಪಾರದರ್ಶಕತೆ ಕಾರಣವೆಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಂಡಿದ್ದೂ ಆಗಿದೆ.

'ಭಾರತವು ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದೆ. ಸರ್ಕಾರವು ಕೈಗೊಂಡ ಬಡತನ ನಿರ್ಮೂಲನೆಯ ಯೋಜನೆಗಳ ಪರಿಣಾಮವಾಗಿ ಜನಸಾಮಾನ್ಯರ ಆರ್ಥಿಕಮಟ್ಟ ಸುಧಾರಣೆಯನ್ನು ಕಂಡಿದೆ. 60 ಕೋಟಿಗೂ ಅಧಿಕ ಜನರು ಆರ್ಥಿಕತೆಯ ಮುಖ್ಯವಾಹಿನಿಗೆ ಬಂದಿದ್ದಾರೆ. ಜನರ ಕೈಯಲ್ಲಿ ಹಣ ಇರುವುದರಿಂದ ಮಾರುಕಟ್ಟೆಗೆ ಬರುವವರ ಸಂಖ್ಯೆ 70 ಕೋಟಿಯಿಂದ 130 ಕೋಟಿಗೆ ಏರಿಕೆಯಾಗಿದೆ' ಎಂದು ಕಳೆದ ವರ್ಷ ಗುಜರಾತ್‌ನಲ್ಲಿ ನಡೆದ ಜಾಗತಿಕ ಶೃಂಗಸಭೆಯಲ್ಲಿ ಅಮಿತ್ ಶಾ ಹೇಳಿದ್ದರು. ಈ ಮಾತು ನಿಜವೇ ಆಗಿದ್ದಿದ್ದರೆ, ವಿವಿಧ ವಲಯಗಳಲ್ಲಿ ಆರ್ಥಿಕತೆಯು ಕುಸಿಯುತ್ತಿರುವ ಬಗ್ಗೆ ಹೊರಬರುತ್ತಿರುವ ವರದಿಗಳು ಏನು ಸುಳ್ಳೇ ಎಂಬ ಪ್ರಶ್ನೆ ಎದುರಾಗುತ್ತದೆ. ಸಾಮಾನ್ಯ ಜನರಿಗೆ ಒಂದು ಟ್ರಿಲಿಯನ್‌ನಲ್ಲಿ ಎಷ್ಟು ಸೊನ್ನೆಗಳು ಇರುತ್ತವೆ ಎಂಬ ಮಾಹಿತಿಯೂ ಇಲ್ಲ. ದಿನಸಿಯನ್ನು ಖರೀದಿಸಲು ಮಾರುಕಟ್ಟೆಗೆ ಹೋದಾಗ ಅವರ ಜೇಬನ್ನು ಶೋಧಿಸಿದರೆ 'ಆರ್ಥಿಕ ಅಭಿವೃದ್ಧಿ' ಎಂಬ ಮಾತು ಎಷ್ಟು ಹುಸಿ ಎಂಬುದು ನಿಚ್ಚಳವಾಗಿ ಅರಿವಾಗುತ್ತದೆ. ಸಾಕಷ್ಟು ಶ್ರಮಿಸಿ ಗಳಿಸಿದ ಅಲ್ಪದುಡ್ಡನ್ನು ಮಾರುಕಟ್ಟೆಗೆ ಒಯ್ದರೆ ವಾಪಸ್ಸಾಗುವಾಗ ಬಹುತೇಕ ಖಾಲಿ ಚೀಲವೇ ಇರುತ್ತದೆ!

### ಗೃಹಬಳಕೆ ವಸ್ತುಗಳ ಬಳಕೆ ಗಣನೀಯವಾಗಿ ಇಳಿದಿದೆ

ಇತ್ತೀಚೆಗೆ ಪ್ರಕಟವಾದ ಗೃಹಬಳಕೆ ವಸ್ತುಗಳ ವೆಚ್ಚದ ಸಮೀಕ್ಷೆಯಲ್ಲಿ ಬಹುತೇಕ ಮಧ್ಯಮ ವರ್ಗದ ಕುಟುಂಬಗಳು ಗೃಹಬಳಕೆಯ ವಸ್ತುಗಳ ಖರೀದಿಯನ್ನು ವ್ಯಾಪಕವಾಗಿ ಕಡಿಮೆ ಮಾಡಿರುವುದು ತಿಳಿದುಬರುತ್ತದೆ. ಜಿಡಿಪಿ(ಒಟ್ಟು ದೇಶೀಯ ಉತ್ಪನ್ನ)ಯ ಶೇ.57.2ರಷ್ಟು ಮಾತ್ರ ಇದಕ್ಕಾಗಿ ವೆಚ್ಚ ಮಾಡಲಾಗುತ್ತಿದೆ ಮತ್ತು ಅದು, 2020–21ರಲ್ಲಿ ಕೋವಿಡ್ ಸಾಂಕ್ರಾಮಿಕದ ಕಾಲಕ್ಕಿಂತ ಕಡಿಮೆ ಪ್ರಮಾಣದಲ್ಲಿ ಇದೆ ಎಂದು ಅಂಕಿ ಅಂಶಗಳು ಹೇಳುತ್ತವೆ. ಅಂದರೆ, ಜನರು ಕ್ರಮೇಣ ತಮ್ಮ 'ಖರೀದಿಯ ಸಾಮರ್ಥ್ಯ'ವನ್ನು ಕಳೆದುಕೊಳ್ಳುತ್ತಿದ್ದಾರೆ. ಇದೇಕೆ ಹೀಗಾಗುತ್ತಿದೆ? ಏಕೆಂದರೆ ಬೆಲೆ ಏರಿಕೆಯು ಗಗನಮುಖಿಯಾಗಿದ್ದರೆ, ವರಮಾನ ಗಣನೀಯವಾಗಿ ಕುಗ್ಗಿದೆ. ಇದರಿಂದಾಗಿ, ಕೆಲವೇ ಕೆಲವು ಉದ್ಯಮಪತಿಗಳ ಜೇಬು ಭರ್ತಿಯಾಗುತ್ತಿದ್ದು, ಲಕ್ಷೋಪಲಕ್ಷ ಮಧ್ಯಮವರ್ಗದ ಕುಟುಂಬಗಳು ಸಂಕಷ್ಟದ ಸ್ಥಿತಿಯನ್ನು ಎದುರಿಸಬೇಕಾಗಿದೆ.

ಕೋವಿಡ್ ನಂತರದ ಕಾಲದಲ್ಲಿ ಆರ್ಥಿಕತೆಯು ಹಳಿಯ ಮೇಲೆ ಮರಳಿ ಬಂದಿದೆ ಎಂದು ಸರ್ಕಾರಗಳು ಎಷ್ಟೇ ಪ್ರಚಾರ ಮಾಡಿದರೂ ಸಹ ನೈಜ ಪರಿಸ್ಥಿತಿಯು ಇನ್ನೂ ಸುಧಾರಿಸಿಲ್ಲ. ಜನರ ಖರೀದಿ ಸಾಮರ್ಥ್ಯವು ಸಮರ್ಪಕ ಮಟ್ಟಕ್ಕೆ ಬಂದಿಲ್ಲ. ಹೀಗಾಗಿ, ಉತ್ಪಾದನೆಯಾದ ವಸ್ತುಗಳಿಗೆ ಬೇಡಿಕೆ ಇಲ್ಲ. ಇದರಿಂದ ಹೆಚ್ಚಿನ ಹೂಡಿಕೆ ಸಾಧ್ಯವಾಗುತ್ತಿಲ್ಲ. ಉತ್ಪಾದನೆಯೇ ಕುಗ್ಗಿರುವುದರಿಂದ ಉದ್ಯೋಗ ಸೃಷ್ಟಿಯೂ ಆಗುತ್ತಿಲ್ಲ. ಒಟ್ಟು ನಿವ್ವಳ ಉತ್ಪನ್ನವು ಶೇ.7ರ ಪ್ರಮಾಣವನ್ನು ತಲುಪಿರುವಾಗ ಇರುವ ಪರಿಸ್ಥಿತಿ ಇದು.

ಮೋದಿಯವರು ಬಹು ಆಕರ್ಷಕವಾಗಿ ಕಾಣಿಸುವ 'ಅಪೂರ್ವ(?)'ವಾದ ಆರ್ಥಿಕ ಪರಿಕಲ್ಪನೆಯೊಂದನ್ನು ಮುಂದಿಟ್ಟಿದ್ದಾರೆ. 'ಕೇಕ್‌ನ ಗಾತ್ರವನ್ನು ಗಮನಿಸಬೇಕು. ಗಾತ್ರ ಹೆಚ್ಚಾದಷ್ಟೂ ಹೆಚ್ಚಿನ ಪ್ರಮಾಣದ ಕೇಕ್ ತುಂಡನ್ನು ಜನರು ಪಡೆಯುತ್ತಾರೆ. ಅದಕ್ಕಾಗಿಯೇ, ನಾವು 5 ಟ್ರಿಲಿಯನ್ ಡಾಲರ್ ಆರ್ಥಿಕತೆಯ ಗುರಿಯನ್ನು ಇರಿಸಿಕೊಂಡಿದ್ದೇವೆ. ಆರ್ಥಿಕತೆಯ ಗಾತ್ರ ಹೆಚ್ಚಾದಷ್ಟೂ ದೇಶ ಸಮೃದ್ಧಿಯ ದಿಕ್ಕಿನೆಡೆಗೆ ನಡೆಯುತ್ತದೆ. ನಿವ್ವಳ ತಲಾದಾಯದಲ್ಲಿ ಗಣನೀಯವಾಗಿ ಪ್ರಗತಿ ಹೊಂದಿರುವ ದೇಶಗಳು ಅಭಿವೃದ್ಧಿ ಹೊಂದುತ್ತಿರುವ ದೇಶದ ಪಟ್ಟಿಯಿಂದ ನಾಗಾಲೋಟದಲ್ಲಿ ಸಾಗಿ ಅಭಿವೃದ್ಧಿ ಹೊಂದಿದ ದೇಶಗಳಾಗಿವೆ. ಭಾರತವೂ ಹಾಗೇ ಮುಂಜಿಗಿಯುತ್ತದೆ ಎಂದು ಬಣ್ಣಿಸುತ್ತಾರೆ. ಆದರೆ, ಸಂಪತ್ತಿನ ಅಸಮಾನ ವಿತರಣೆ ಹೊಂದಿರುವ ಭಾರತದಂತಹ ದೇಶದಲ್ಲಿ ಇಂತಹ ಅಂಕಿಸಂಖ್ಯೆಗಳ ಸರಾಸರಿಯ ಲೆಕ್ಕಾಚಾರಕ್ಕೆ ಯಾವುದೇ ಅರ್ಥವಿರುವುದಿಲ್ಲ. ಐದು ಜನ ಸಿರಿವಂತರು ₹10 ಸಾವಿರ ಗಳಿಸಿ, ಐವರು ನಿರ್ಗತಿಕರು ₹100 ಗಳಿಸಿದರೆ, ಆಗ, ನಿವ್ವಳ ತಲಾದಾಯ ₹1010 ಎಂದಾಗುತ್ತದೆ. ಈ ಲೆಕ್ಕಾಚಾರ ಒಂದು ಸರಿಯಾದ ಮಾನದಂಡವೇ?

### ಭಾರತದ ಆರ್ಥಿಕತೆಯ ನಾಗಾಲೋಟದ ದಂತಕಥೆ

ಆಹಾರ ಸಾಮಗ್ರಿ ಸೇರಿದಂತೆ ಅತ್ಯಾವಶ್ಯಕ ವಸ್ತುಗಳ ಬೆಲೆ ಏರಿಕೆ ತೀವ್ರವಾಗಿ ಆಗಿದೆ. ಗ್ರಾಹಕ ದರಗಳ ಸೂಚ್ಯಂಕ(ಸಿಪಿಐ)ದ ಲೆಕ್ಕಾಚಾರದಲ್ಲಿ ಆಹಾರ ಸಾಮಗ್ರಿಗಳ ಖರೀದಿಯ ಪ್ರಮಾಣ ಶೇ 40ರಷ್ಟಿದೆ. ಆಹಾರ ಸಾಮಾಗ್ರಿಗಳ ಬೆಲೆಯಲ್ಲಿ ಹಣದುಬ್ಬರವನ್ನು ಹತೋಟಿಗೆ ತರದೆ, ಒಟ್ಟಾರೆ ಹಣದುಬ್ಬರದ ಪ್ರಮಾಣವನ್ನು ನಿಯಂತ್ರಿಸಲಾಗದು. 2023ರಿಂದ ಆಹಾರದ ಹಣದುಬ್ಬರವು ಭಾರತದ ಆರ್ಥಿಕತೆಯಲ್ಲಿ ಬಗೆಹರಿಯದ ಸಮಸ್ಯೆಯಾಗಿ ಉಳಿದಿದೆ. ಪ್ರತಿವರ್ಷವೂ, ಆಹಾರ ವಸ್ತುಗಳ ಬೆಲೆ ಏರುತ್ತಲೇ ಇರುವುದನ್ನು ಸರ್ಕಾರದ ಅಂಕಿಅಂಶಗಳೇ ಎತ್ತಿ ತೋರಿಸುತ್ತವೆ. ತರಕಾರಿಗಳ ಬೆಲೆ ಶೇ.28, ಬೇಳೆ ಕಾಳುಗಳ ಬೆಲೆ ಶೇ.17, ಧಾನ್ಯಗಳ ಬೆಲೆ ಶೇ.8.6, ಮಾಂಸ ಮತ್ತು ಮೀನಿನ ದರ ಶೇ.8.2, ಮಸಾಲೆ ಪದಾರ್ಥಗಳ ದರ ಶೇ.7.8 ಹಾಗೂ ಮೊಟ್ಟೆಯ ದರ ಶೇ.7.1ರಷ್ಟು ಹೆಚ್ಚಳವಾಗಿರುವುದು ದಾಖಲಾಗಿದೆ. ಟೊಮೆಟೊ ಮತ್ತು ಆಲೂಗಡ್ಡೆಯ ದರ ಶೇ.50ರಷ್ಟು ಹೆಚ್ಚಳವನ್ನು ದಾಖಲಿಸಿವೆ. ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ವಾಸಿಸುವವರೆಲ್ಲರೂ ಹಣದುಬ್ಬರದ ಬಿಸಿಯನ್ನು ಅನುಭವಿಸುತ್ತಿದ್ದಾರೆ.

ಸರ್ಕಾರದ ಅಧಿಕೃತ ಅಂಕಿಅಂಶಗಳು ಏನೇ ಹೇಳಲಿ ಅಥವಾ ಸಗಟು ಮಾರಾಟದ ದರ ಏನೇ ಹೇಳಲಿ, ಚಿಲ್ಲರೆ ಮಾರುಕಟ್ಟೆಯಲ್ಲಿ ವಸ್ತುಗಳ ದರ ಸಗಟು ಬೆಲೆ ಸೂಚ್ಯಂಕದ ಆಧಾರದಲ್ಲಿ ದುಪ್ಪಟ್ಟಾಗಿದೆ. ಇದರ ಅರ್ಥವೇನೆಂದರೆ, ವಸ್ತುಗಳ ಅಕ್ರಮ ದಾಸ್ತಾನು, ಕಳ್ಳ ಸಾಗಾಟ ಹಾಗೂ ಮಧ್ಯವರ್ತಿಗಳ ಹಾವಳಿಯು ವಿಪರೀತವಾಗಿದೆ ಎಂದು. ಸರ್ಕಾರವು ನಿರಂತರವಾಗಿ ಬೆಲೆಗಳ ಏರಿಕೆಯ ಮೇಲೆ ನಿಗಾ ಇಟ್ಟು, ವಸ್ತುಗಳ ಕೃತಕ ಅಭಾವ ಸೃಷ್ಟಿಸಿ ಬೆಲೆ ಹೆಚ್ಚಳ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಂಡಿದ್ದಿದ್ದರೆ ಇಂತಹ ಪರಿಸ್ಥಿತಿ ಎದುರಿಸಬೇಕಾಗುತ್ತಿರಲಿಲ್ಲ. ಇದಲ್ಲದೆ, ಭಾರತೀಯ ರಿಸರ್ವ್ ಬ್ಯಾಂಕು ಸಾಲದ ಮೇಲಿನ ಬಡ್ಡಿ ದರವನ್ನು ಇಳಿಕೆ ಮಾಡಿದರೂ ಹಣದುಬ್ಬರದ ಸ್ಥಿತಿ ಬದಲಾಗಿಲ್ಲ ಎಂದರೆ ಪರಿಸ್ಥಿತಿಯು ತೀವ್ರವಾಗಿ ಹದಗೆಟ್ಟಿರುವುದು ಅರ್ಥವಾಗಬೇಕು.

### ಸಾಲದ ಪ್ರಮಾಣದಲ್ಲಿ ಏರಿಕೆ

2022–23ನೇ ಸಾಲಿನಲ್ಲಿ, ಜನರಿಗೆ ಅದರಲ್ಲೂ ನಿರ್ದಿಷ್ಟವಾಗಿ ಮಧ್ಯಮ ವರ್ಗಕ್ಕೆ ಒಟ್ಟಾರೆ ₹15.8 ಲಕ್ಷ ಕೋಟಿ ಸಾಲವನ್ನು ಬ್ಯಾಂಕುಗಳು ವಿತರಿಸಿರುವುದೇ ಬಾಯ ಮೇಲೆ ಕೈಯಿಡುವಂತೆ ಮಾಡುತ್ತದೆ. ಗ್ರಾಹಕ ಸಾಮಾಗ್ರಿಗಳ ಕೈಗಾರಿಕೆಗಳಿಗೆ ಪ್ರಮುಖ ಆಧಾರವಾಗಿರುವ ಮಧ್ಯಮವರ್ಗದವರು ಸಾಲದ ಸುಳಿಯಲ್ಲಿ ಸಿಲುಕಿದ್ದಾರೆ ಎಂಬುದು ಇದರಿಂದಲೇ ವೇದ್ಯವಾಗುತ್ತದೆ. ಇತ್ತೀಚೆಗೆ, ಪ್ರಕಟವಾದ ಸಮೀಕ್ಷೆಯಲ್ಲಿ ಶೇ.77ರಷ್ಟು ಉದ್ಯೋಗಿಗಳು ತಮ್ಮ ಖರ್ಚುವೆಚ್ಚಗಳನ್ನು ಸರಿದೂಗಿಸಲು ವೈಯಕ್ತಿಕ ಸಾಲವನ್ನೂ ಪಡೆದಿದ್ದಾರೆ ಮತ್ತು ಪಡೆಯುತ್ತಿದ್ದಾರೆ ಎಂಬ ಸಂಗತಿಯೂ ಬೆಳಕಿಗೆ ಬಂದಿದೆ. ಹೀಗೆ ಭಾರಿ ಪ್ರಮಾಣದಲ್ಲಿ ಸಾಲದ ಮೊರೆ ಹೋಗುವ ಅವಶ್ಯಕತೆಯಾದರೂ ಏನು ಎಂಬ ಬಗ್ಗೆ ಪರಿಶೀಲನೆ ನಡೆಸಿದಾಗ 'ಯೋಜಿತವಲ್ಲದ ವೆಚ್ಚ' ಎಲ್ಲರಿಗೂ ಎದುರಾಗಿರುವುದು ಕಂಡು ಬರುತ್ತದೆ. ಉದಾಹರಣೆಗೆ, ಏಕಾಏಕಿ ಎದುರಾಗುವ ಅನಾರೋಗ್ಯದ ಸಮಸ್ಯೆ, ಆಸ್ಪತ್ರೆಗೆ ದಾಖಲಾಗಬೇಕಾದ ಅನಿವಾರ್ಯತೆ, ಅನಿರೀಕ್ಷಿತವಾಗಿ ಬಂದೆರಗಿದ ಕೌಟುಂಬಿಕ ವೆಚ್ಚಗಳು ಇತ್ಯಾದಿ. ದಿಢೀರ್ ಹೆಚ್ಚಳವಾದ ಆರೋಗ್ಯ ಸೇವೆಗಳು ಹಾಗೂ ದುಬಾರಿ ಶಿಕ್ಷಣದ ವೆಚ್ಚಗಳು ಇರುವುದರಿಂದ ಜನರ ವರಮಾನಕ್ಕೂ ಮತ್ತು ಅವರ ಖರ್ಚಿಗೂ ಸಾಕಷ್ಟು ಅಂತರ ಉಂಟಾಗುತ್ತಿದೆ. ಇಂತಹ ಸಾಲವನ್ನು ಮರುಪಾವತಿ ಮಾಡಲು ವಿಪರೀತ ಶ್ರಮವಹಿಸಿ, ಹೊಟ್ಟೆಬಟ್ಟೆ ಕಟ್ಟಿ, ಕೂಡಿಟ್ಟ ಠೇವಣಿ, ಜೀವ ವಿಮೆಯ ಹಣವನ್ನು ಮುರಿದು ವಾಪಸ್ ಪಡೆಯುವ ಸಂದರ್ಭ ಉಂಟಾಗುತ್ತಿದೆ. ಸಾಲದ ಪ್ರಮಾಣವು ಜಾಸ್ತಿಯಾಗಿದ್ದರೂ ಸಹ ಗೃಹಸಾಲ ಪಡೆದು ಕಷ್ಟಪಟ್ಟು ಕಟ್ಟಿಸಿರುವ ಮನೆಯನ್ನೂ, ಖರೀದಿಸಿದ ಜಮೀನನ್ನೂ ಜನರು ಕಳೆದುಕೊಳ್ಳಬೇಕಾಗುತ್ತದೆ. ಬ್ಯಾಂಕ್ ಠೇವಣಿಯ ಶೇ.35, ಭವಿಷ್ಯನಿಧಿಯ ಶೇ.22, ಜೀವ ವಿಮೆಯ ಶೇ.18 ಹಾಗೂ ಸಣ್ಣ ಉಳಿತಾಯದ ಶೇ.7ರಷ್ಟು ಮೊತ್ತವನ್ನು ತಮ್ಮ ಅವಶ್ಯಕತೆಗಳಿಗಾಗಿ ವಾಪಸ್ ಜನರು ಪಡೆದುಕೊಂಡಿರುವುದು ದಾಖಲಾಗಿದೆ. ಹೀಗಾಗಿ, ಸಾಮಾನ್ಯ ಗ್ರಾಹಕರ ಬಳಿ ಇರುವ ಸಂಪತ್ತಿನ ಮೌಲ್ಯ ಕರಗುತ್ತಿದ್ದು, ₹13.8 ಲಕ್ಷ ಕೋಟಿಯಷ್ಟು ಇಳಿಕೆಯನ್ನು ಕಂಡಿದೆ. ಆರ್‌ಬಿಐ ಇತ್ತೀಚೆಗೆ ಬಿಡುಗಡೆ ಮಾಡಿದ ಅಂಕಿಅಂಶಗಳ ಪ್ರಕಾರ 2022–23ರಲ್ಲಿ ಗೃಹಬಳಕೆಯ ವಸ್ತುಗಳ ಮೌಲ್ಯ ಜಿಡಿಪಿಯ ಶೇ.5.1ರಷ್ಟು ಕುಸಿತ ಕಂಡಿದೆ. ಹೆಚ್ಚುತ್ತಿರುವ ವೆಚ್ಚಗಳಿಂದಾಗಿ ಉಳಿತಾಯ ಪ್ರವೃತ್ತಿ ಕಡಿಮೆಯಾಗಿದೆ. ಅದು, ಕಳೆದ ಐದು ದಶಕದಲ್ಲೇ ಅತ್ಯಂತ ಕನಿಷ್ಠ ಎನ್ನಬಹುದಾದ ಜಿಡಿಪಿಯ ಶೇ.5.1ರಷ್ಟು ಇಳಿಕೆ ಕಂಡಿದೆ. ಸಾರ್ವಜನಿಕರ ಮೇಲಿದ್ದ ಸಾಲದ ಹೊಣೆಗಾರಿಕೆಯು ₹6 ಲಕ್ಷ ಕೋಟಿಯಿಂದ ₹83.65 ಲಕ್ಷ ಕೋಟಿಗೆ ಏರಿದೆ. ಇದರಿಂದಾಗಿ, ಸಹಜವಾಗಿಯೇ, ಜನರು ಕನಿಷ್ಠ ಅವಶ್ಯಕತೆಗಳಿಗೂ ಮತ್ತೆಮತ್ತೆ ಸಾಲ ಪಡೆಯಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಜೊತೆಗೆ ಹಳೆಯ ಸಾಲಗಳನ್ನು ತೀರಿಸುವುದೂ ಸಾಧ್ಯವಾಗುತ್ತಿಲ್ಲ.

### ವೈದ್ಯಕೀಯ ಸೇವೆಗಳಲ್ಲಿ ಹಣದುಬ್ಬರದ ಆಟ

ಆಹಾರ ವಸ್ತುಗಳ ಬೆಲೆ ಹೆಚ್ಚಳದಂತೆ ಜನರ ಕೈಗೆಟುಕದೇ ದೂರವಾಗುತ್ತಿರುವ ಮತ್ತೊಂದು ಕ್ಷೇತ್ರವೆಂದರೆ ವೈದ್ಯಕೀಯ ಸೇವಾ ಕ್ಷೇತ್ರ. ವೈದ್ಯಕೀಯ ಸೇವೆಗಳ ಖಾಸಗೀಕರಣದಿಂದ ಹಾಗೂ ವೈದ್ಯಕೀಯ ಸೇವಾ ಕ್ಷೇತ್ರವನ್ನು ಲಾಭದಾಯಕ ಉದ್ಯಮವನ್ನಾಗಿ ಪರಿಗಣಿಸಿರುವುದರಿಂದ ಜನರು ತಮ್ಮ ಆರೋಗ್ಯದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಭಾರಿ ಪ್ರಮಾಣದಲ್ಲಿ ಹಣವನ್ನು ವೆಚ್ಚ ಮಾಡಬೇಕಿದೆ. ಇದರಿಂದಾಗಿ, ಜನರ ಮೇಲೆ ವಿಪರೀತ ಹೊರೆ ಬೀಳುತ್ತಿದೆ. ಈ ನಿಟ್ಟಿನಲ್ಲಿ, ಹಣದುಬ್ಬರ ಪ್ರಮಾಣವು ಶೇ.14ರಷ್ಟಿದ್ದು, ಇದು ಏಷ್ಯಾ ಖಂಡದ ಯಾವುದೇ ರಾಷ್ಟ್ರಕ್ಕಿಂತ ಅತಿ ಹೆಚ್ಚಿನದು ಎಂಬುದು ಗಮನಾರ್ಹ. ಆರೋಗ್ಯ ತಪಾಸಣಾ ವೆಚ್ಚಗಳೂ ಮುಗಿಲೆತ್ತರಕ್ಕೆ ಏರಿವೆ. ಪ್ರತಿ ಸೆಕೆಂಡಿಗೆ ಇಬ್ಬರಂತೆ ದುಬಾರಿ ಆರೋಗ್ಯ ವೆಚ್ಚದಿಂದಾಗಿ ಇದುವರೆಗೆ 6.3 ಕೋಟಿ ಭಾರತೀಯರು ಬಡತನದ ರೇಖೆಯ ಕೆಳಗೆ ಕುಸಿದು ನರಳುತ್ತಿದ್ದಾರೆ. ಇದರ ಜೊತೆಯಲ್ಲಿಯೇ, ಶಿಕ್ಷಣದ ಖಾಸಗೀಕರಣದಿಂದ ಮತ್ತು ಸಾರ್ವಜನಿಕ ಶಿಕ್ಷಣದಿಂದ ಸರ್ಕಾರವು ಕಾಲ್ತೆಗೆಯುತ್ತಿರುವುದರಿಂದ ಶೈಕ್ಷಣಿಕ ವೆಚ್ಚದಲ್ಲಿಯೂ ಭಾರಿ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಶಿಕ್ಷಣದ ಹಣದುಬ್ಬರವು ಶೇ.8ರಿಂದ ಶೇ.10ರಷ್ಟಿದೆ. 6 ರಿಂದ 7 ವರ್ಷಗಳ ಕಾಲಾವಧಿಯಲ್ಲಿ ಶಿಕ್ಷಣದ ವೆಚ್ಚವು ದುಪ್ಪಟ್ಟಾಗುತ್ತಿದೆ.

ಶೇ.1ರಷ್ಟಿರುವ ಬಂಡವಾಳಶಾಹಿಗಳ ಬಳಿ ದೇಶದ ಒಟ್ಟು ಸಂಪತ್ತಿನ ಶೇ.40ರಷ್ಟು ಸಂಗ್ರಹವಾಗಿದ್ದರೆ, ಕೆಳಗಿನ ಶೇ.50ರಷ್ಟು ಜನರ ಬಳಿ ಶೇ.6.4ರಷ್ಟು ಮಾತ್ರ ಸಂಪತ್ತಿನ ಒಡೆತನವಿದೆ. ರಾಷ್ಟ್ರೀಯ ಆರೋಗ್ಯ ಸಮೀಕ್ಷೆಯ ಪ್ರಕಾರ ಪ್ರತಿದಿನ ದೇಶದ 19 ಕೋಟಿ ಭಾರತೀಯರು ರಾತ್ರಿ ಊಟವಿಲ್ಲದೇ ಖಾಲಿ ಹೊಟ್ಟೆಯಲ್ಲಿ ಮಲಗುತ್ತಾರೆ. ಹಸಿವು ಮತ್ತು ಅಪೌಷ್ಟಿಕತೆಯಿಂದಾಗಿ ಪ್ರತಿದಿನವೂ 5 ವರ್ಷಕ್ಕಿಂತ ಕೆಳಗಿನ 4,500 ಮಕ್ಕಳು ಸಾವಿಗೀಡಾಗುತ್ತಿದ್ದಾರೆ. 100 ಕೋಟಿ ಭಾರತೀಯರ ಪೈಕಿ ಶೇ.74ರಷ್ಟು ಜನರಿಗೆ ಗುಣಮಟ್ಟದ ಆಹಾರ ದೊರಕುತ್ತಿಲ್ಲ. ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ 125 ದೇಶಗಳ ಪೈಕಿ ಭಾರತಕ್ಕೆ 111ನೇ ಸ್ಥಾನವಿರುವುದು ಪರಿಸ್ಥಿತಿಯ ಗಂಭೀರತೆಗೆ ಹಿಡಿದ ಕನ್ನಡಿಯಾಗಿದೆ. ಇದು 5 ಟ್ರಿಲಿಯನ್ ಡಾಲರ್ ಆರ್ಥಿಕತೆಯತ್ತ ಮುನ್ನುಗ್ಗುತ್ತಿದೆ ಎಂದು ನಮ್ಮ ಆಳ್ವಿಕರು ಎದೆಯುಬ್ಬಿಸಿಕೊಂಡು ಅಬ್ಬರಿಸುತ್ತಿರುವ ಭಾರತದ ಪರಿಸ್ಥಿತಿಯಾಗಿದೆ!

## ಸಿಐಎ ನರಕದಲ್ಲಿ ಖೈದಿಗಳಿಗೆ ಚಿತ್ರಹಿಂಸೆ

**"ಬಲವಂತವಾಗಿ ಬೆತ್ತಲು ಮಾಡಿದರು, ನಿದ್ರೆ ಮಾಡಲು ಬಿಡಲಿಲ್ಲ"**

ಗ್ವಾಂಟನಾಮೊ(ಕ್ಯೂಬಾದ ಬಳಿ ಇರುವ ಅಮೇರಿಕ ನಿಯಂತ್ರಿತ ಬಂಧಿಖಾನೆ, ಅಕ್ಷರಶ: ಭೂಮಿಯ ಮೇಲಿನ ನರಕ–ಸಂ.)ದಲ್ಲಿ ಹಿಂದೆ ಬಂಧನದಲ್ಲಿ ನರಳಿದ ಖೈದಿಯೊಬ್ಬ, ತಾನು ಸಿಐಎ(ಅಮೇರಿಕದ ಗುಪ್ತಚರ ಸಂಸ್ಥೆ – ಸೆಂಟ್ರಲ್ ಇಂಟೆಲಿಜೆನ್ಸ್ ಏಜೆನ್ಸಿ)ಯಿಂದ ಅನುಭವಿಸಿದ ಚಿತ್ರಹಿಂಸೆಯನ್ನು ಸ್ವತ: ಚಿತ್ರೀಕರಿಸಿದ್ದದ್ದು ನ್ಯಾಯಾಲಯದ ಗೌಪ್ಯ ದಾಖಲೆಗಳಿಂದ ಇದೀಗ ಹೊರಬಿದ್ದಿದೆ. ವರ್ಷದ ಆರಂಭದಲ್ಲಿ ಕೋರ್ಟ್ ವಿಚಾರಣೆಯ ಸಂದರ್ಭದಲ್ಲಿ, ಮೊಹಮ್ಮದ್ ಫಾರಿಕ್ ಬಿನ್ ಅಮೀನ್ ಬಿಡಿಸಿರುವ ರೇಖಾಚಿತ್ರಗಳು, 9/11 ದಾಳಿಯ ನಂತರ ಬಂಧಿತರ ಮೇಲೆ ಪ್ರಯೋಗಿಸಲಾದ ವಿಚಾರಣಾ ವಿಧಾನಗಳು ಹೇಗಿದ್ದವು ಎನ್ನುವ ಎಳೆಎಳೆಯಾದ ವಿವರಗಳನ್ನು ಬಿಚ್ಚಿಟ್ಟಿವೆ.

ಮಲೇಷಿಯಾ ಪ್ರಜೆಯಾದ ಬಿನ್ ಅಮೀನ್, 2003ರಲ್ಲಿ ಬಂಧನಕ್ಕೊಳಗಾದ ನಂತರ ಸಿಐಎ ನಿಯಂತ್ರಣದಲ್ಲಿರುವ ಕರಾಳ ನೆಲೆಗಳಲ್ಲಿ ಮತ್ತು ನಂತರದ ದಿನಗಳಲ್ಲಿ ಗ್ವಾಂಟನಾಮೊ ಕೊಲ್ಲಿ ಎಂಬ ಪ್ರದೇಶದಲ್ಲಿ ಬಂಧನವನ್ನು ಅನುಭವಿಸಿದವ. ಜನವರಿ 2024ರಲ್ಲಿ ಮಿಲಿಟರಿ ಜ್ಯೂರಿ ಮುಂದೆ ಪ್ರಸ್ತುತಪಡಿಸಲಾದ ಅವರ ರೇಖಾಚಿತ್ರಗಳು, ಆ ಅವಧಿಯಲ್ಲಿ ಅವರು ಅನುಭವಿಸಿದ ದೌರ್ಜನ್ಯಗಳನ್ನು ಬಯಲು ಮಾಡುತ್ತವೆ. ಬಲವಂತವಾಗಿ ಬೆತ್ತಲು ಮಾಡುವುದು, ಒತ್ತಡವಿರುವ ಭಂಗಿಗಳಲ್ಲಿ ನಿಲ್ಲಿಸುವುದು, ನಿದ್ರೆ ಮಾಡದಂತೆ ತಡೆಯುವುದು ಮತ್ತು ಇತರ ಅಮಾನವೀಯ ವಿಚಾರಣೆ–ಯ ವಿಧಾನಗಳು ಇವುಗಳಲ್ಲಿ ಸೇರಿವೆ. ಒಂದು ರೇಖಾಚಿತ್ರವು ನಿಂತಿರುವ ಭಂಗಿಯಲ್ಲಿ ನಿದ್ರೆಯಿಂದ ವಂಚಿತನಾದ, ಸಂಕೋಲೆಯಿಂದ ಬಿಗಿಯಲ್ಪಟ್ಟ ಮತ್ತು ದೇಹದ ನೋವನ್ನು ನಿಭಾಯಿಸಲು ತನ್ನ ತೂಕವನ್ನು ಅತ್ತಿತ್ತ ಬದಲಾಯಿಸುತ್ತಲೇ ಇರುವ ಬಿನ್ ಅಮೀನ್‌ನ್ನು ತೋರಿಸುತ್ತದೆ. ಸಂಕೋಲೆ ತೊಡಿಸಿರುವಂತೆಯೇ ಮೊಣಕಾಲುಗಳ ಹಿಂದೆ ಪೊರಕೆಯಂತಹ ಕೋಲನ್ನು ಸಿಕ್ಕಿಸಿ ಕುಕ್ಕರಗಾಲಲ್ಲಿ ಕುಳ್ಳಿರಿಸುವ ಭಂಗಿಯಲ್ಲಿ ಇನ್ನೊಂದು ಚಿತ್ರವಿದೆ. ಒಂದು ಕೊರೆಯುತ್ತಿರುವ ಪ್ರತ್ಯೇಕ ಸೆಲ್‌ನಲ್ಲಿ ಆತನನ್ನು ಬೆತ್ತಲೆಯಾಗಿ, ಸರಪಳಿಯಿಂದ ಬಿಗಿದು, ಪ್ರತ್ಯೇಕ ಬಂಧನದಲ್ಲಿಟ್ಟು ಅವನನ್ನು ಗದ್ದಲಕ್ಕೆ(ವೈಟ್ ನಾಯ್ಸ್ ಎಂಬ ಎಲ್ಲ ಆವೃತ್ತಿಯ ಶಬ್ದಗಳು ಸಮಾನ ಮಟ್ಟದಲ್ಲಿರುವ ನಿರಂತರವಾದ ಸದ್ದು) ಒಡ್ಡುತ್ತಿರುವ ತಲೆಯ ಮೇಲೆ ಮುಸುಕು ಹಾಕಿರುವ ಏಕಾಂಗಿ ಬಂಧಿಯ ಚಿತ್ರವಿದೆ. ನಂತರ ಕತ್ತಲ ಕೊಳಕು ಕೋಣೆಯ ದೃಶ್ಯವೂ ಇದೆ, ಅದರಲ್ಲಿ ಅವನನ್ನು ಗೋಡೆಗೆ ಬಿಗಿಯಲಾಗಿದೆ ಮತ್ತು ತತ್ಪರಿಣಾಮವಾಗಿ ಅವನಿಗೆ ದೈಹಿಕ ಗಾಯಗಳಾಗಿ ಅವನು ಅಸ್ವಸ್ಥಗೊಂಡಿರುವಂತಿದೆ.

**(NDTVಯಲ್ಲಿ ಕಳೆದ ಡಿಸೆಂಬರ್ 23ರಂದು ವರದಿಯಾದದ್ದು)**

## ಕೃಷಿ ಮಾರುಕಟ್ಟೆಯ ಹೊಸ ರಾಷ್ಟ್ರೀಯ ನೀತಿಯ ರೂಪುರೇಷೆ

# ಮೂರು ಕರಾಳ ಕೃಷಿ ಕಾಯ್ದೆಗಳ ಹಿಂಬಾಗಿಲಿನಿಂದ ಪ್ರವೇಶ

ರೈತರು ದೆಹಲಿಯ ಗಡಿಯಲ್ಲಿ ಅತೀವ ಚಳಿ, ಸುಡುಬಿಸಿಲನ್ನು ಎದುರಿಸಿ ಕಾರ್ಪೊರೇಟ್ ಕಂಪೆನಿಗಳ ಪರವಾದ ಮೂರು ರೈತ ವಿರೋಧಿ ಕರಾಳ ಕೃಷಿ ಕಾಯ್ದೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಹಾಗೂ ರೈತರ ಉತ್ಪನ್ನಗಳಿಗೆ ನ್ಯಾಯಯುತವಾದ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸಬೇಕೆಂದು ಒತ್ತಾಯಿಸಿ ಹದಿಮೂರು ತಿಂಗಳುಗಳ ಕಟಿಬದ್ಧ ಐತಿಹಾಸಿಕ ಹೋರಾಟವನ್ನು ನಡೆಸಿದ್ದರು. ಈ ಹೋರಾಟದಲ್ಲಿ 735 ಅಮೂಲ್ಯ ಜೀವಗಳು ಹೋದವು. ಆದಾಗ್ಯೂ ರೈತರು ತಮ್ಮ ಹೋರಾಟದಲ್ಲಿ ದಿಟ್ಟವಾಗಿ ನಿಂತರು ಹಾಗೂ ಯಾವುದೇ ವಿಚಲತೆಯನ್ನು ತೋರಲಿಲ್ಲ. ಕಡೆಗೂ ರೈತರ ದಿಟ್ಟತನ ಹಾಗೂ ಹೋರಾಟದ ಸ್ಪೂರ್ತಿಯ ಮುಂದೆ ಕೇಂದ್ರ ಬಿಜೆಪಿ ಸರ್ಕಾರ ತಲೆಬಾಗಿ ಆ ಮೂರು ಕೃಷಿ ಕಾಯ್ದೆಗಳನ್ನು ಹಿಂತೆಗೆದುಕೊಂಡಿತು.

ಆದರೆ ಏಕಸ್ವಾಮ್ಯ ಬಂಡವಾಳಿಗರ ಹಾಗೂ ಬಹುರಾಷ್ಟ್ರೀಯ ಕಂಪೆನಿಗಳ ಸೇವೆಗೈಯಲು ಬಿಜೆಪಿ ಸರ್ಕಾರ ಈ ಮೂರು ಕಾನೂನುಗಳನ್ನು ಹಿಂಬಾಗಿಲಿನಿಂದ ಜಾರಿಗೆ ತರಲು ಹೊಸ ಹೊಸ ಕುಟಿಲೋಪಾಯಗಳನ್ನು ಹೆಣೆಯುತ್ತಿದೆ.

ಕಳೆದ ನವೆಂಬರ್ 25 ರಂದು ಹೊಸ ಬಾಟಲಿಯಲ್ಲಿ ಹಳೆ ಮದ್ಯವೆನ್ನುವಂತೆ ಕೃಷಿ ಮಾರುಕಟ್ಟೆಯ ಹೊಸ ರಾಷ್ಟ್ರೀಯ ನೀತಿಯ ರೂಪುರೇಷೆಯನ್ನು ಜಾರಿಗೊಳಿಸಿದೆ. ಆ ನೀತಿಯ ಉದ್ದೇಶವು, "ಎಲ್ಲಾ ವಿಭಾಗದ ರೈತರು ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆ ಪಡೆಯಲು ತಮ್ಮ ಆಯ್ಕೆಯ ಮಾರುಕಟ್ಟೆಯನ್ನು ಕಂಡುಕೊಳ್ಳಲು ಸ್ಪಂದನೆಯುಳ್ಳ ಮಾರುಕಟ್ಟೆಯ ವಾತಾವರಣವನ್ನು ಸೃಷ್ಟಿಸುವುದು." (ಅಧ್ಯಾಯ 2) ಅದನ್ನು "ಖಾಸಗಿ ಹಾಗೂ ಸಾರ್ವಜನಿಕ ವಲಯದ ಭಾಗವಹಿಸುವಿಕೆ"ಯ ಮೂಲಕ ಮಾಡುವುದು ಮತ್ತು "ಇದನ್ನು ಸಾಧಿಸಲು ಕೃಷಿ ಮಾರುಕಟ್ಟೆ ಕಾನೂನು ಹಾಗೂ ನೀತಿಗಳಲ್ಲಿ ಸುಧಾರಣೆ ತರಬೇಕಾಗುತ್ತದೆ." ಎಂದು ಸರ್ಕಾರ ಹೇಳಿದೆ (ಅಧ್ಯಾಯ 3.2)

ಆ ಸುಧಾರಣೆಗಳು ಸಂಕ್ಷಿಪ್ತವಾಗಿ ಹೀಗಿವೆ:

1. **ಖಾಸಗಿ ಸಗಟು ಮಾರುಕಟ್ಟೆಗಳನ್ನು ತೆರೆಯಲು ಅವಕಾಶ ಮಾಡಿಕೊಡುವುದು. (ಅಧ್ಯಾಯ 7.1.3.1)**
2. **ರೈತರ ಜಮೀನಿನಿಂದ ನೇರವಾಗಿ ಉತ್ಪನ್ನಗಳನ್ನು ಕೊಳ್ಳಲು ರಫ್ತು ಮಾಡುವವರಿಗೆ, ಸಂಘಟಿತ ವ್ಯಾಪಾರಿಗಳಿಗೆ, ದೊಡ್ಡ ಖರೀದಿದಾರರಿಗೆ, ಸಂಸ್ಕರಣೆ ಮಾಡುವವರಿಗೆ ಅನುಮತಿ ನೀಡುವುದು. (ಅಧ್ಯಾಯ 7.1.3.2)**
3. **ಖಾಸಗಿ ಈ-ಟ್ರೇಡಿಂಗ್ ನೆಲೆಗಟ್ಟನ್ನು ಸ್ಥಾಪಿಸಲು ಮತ್ತು ವ್ಯವಹರಿಸಲು ಅವಕಾಶ ಮಾಡಿ ಕೊಡುವುದು. (ಅಧ್ಯಾಯ 7.1.3.4)**
4. **ಮಾರುಕಟ್ಟೆ ಹಾಗೂ ಬೆಲೆ ಅಪಾಯಗಳನ್ನು ನಿರ್ವಹಿಸಲು ಒಪ್ಪಂದ ಕೃಷಿಯನ್ನು ಸಾಧನವಾಗಿ ಬಳಸುವುದು. (ಅಧ್ಯಾಯ 10.1.1)**
5. **ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ರೀತಿಯಲ್ಲೇ ಬೆಲೆ ವಿಮಾ ಯೋಜನೆ ಜಾರಿಗೊಳಿಸುವುದು. (ಅಧ್ಯಾಯ 10.1.3)**

ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಕಾಯ್ದೆಬದ್ಧಗೊಳಿಸುವ ವಿಚಾರವೇ ಈ ಹೊಸ ನೀತಿಯಲ್ಲಿ ಇಲ್ಲ! ಇದು ಒಂದು ದುರಂತವೇ ಸರಿ!

### ಸದ್ಯ ಈಗಿರುವ ವ್ಯವಸ್ಥೆ ಹಾಗೂ ಪ್ರಸ್ತಾಪಿತ ಸುಧಾರಣೆಗಳು

ಈ ಸುಧಾರಣೆಗಳ ಬಗ್ಗೆ ನಾವು ವಿಶ್ಲೇಷಣೆ ಮಾಡುವ ಮೊದಲು ಸದ್ಯ ಇರುವ ಕೃಷಿ ಉತ್ಪನ್ನಗಳ ಮಾರುಕಟ್ಟೆ ವ್ಯವಸ್ಥೆಯ ಬಗ್ಗೆ ತಿಳಿದುಕೊಳ್ಳೋಣ. ಪ್ರಸ್ತುತ ಎಪಿಎಂಸಿ ಕಾಯ್ದೆಯಡಿಯಲ್ಲಿ 7,057 ನಿಯಂತ್ರಿತ ಸಗಟು ಮಾರುಕಟ್ಟೆಗಳು, 500 ಅನಿಯಂತ್ರಿತ ಮಾರುಕಟ್ಟೆಗಳು ಹಾಗೂ ಸಣ್ಣ ಗ್ರಾಮೀಣ ಬಂಡವಾಳಗಾರರು ನಡೆಸುವ 22,931 ಸಂತೆಗಳು ದೇಶದಲ್ಲಿವೆ. ಎಪಿಎಂಸಿ ಕಾಯ್ದೆಯ ಪ್ರಕಾರ, ರೈತರು ಕೃಷಿ ಉತ್ಪನ್ನಗಳನ್ನು ಲೈಸೆನ್ಸ್ ಪಡೆದಿರುವ ವ್ಯಾಪಾರಸ್ಥರಿಗೆ ಎಪಿಎಂಸಿ ಪ್ರಾಂಗಣದಲ್ಲಿ ಮಾರಾಟ ಮಾಡಬೇಕು.

ಎಪಿಎಂಸಿ ರೈತರಿಂದ ಚುನಾಯಿತವಾದ ಒಂದು ಸಂಸ್ಥೆ. ರೈತರ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಅದು ನಿರೀಕ್ಷಿತ ಫಲ ನೀಡಿಲ್ಲವೆಂಬುದು ನಿಜವಾದರೂ ಎಪಿಎಂಸಿಯಲ್ಲಿ ಲೈಸೆನ್ಸ್ ಹೊಂದಿರುವ ವ್ಯಾಪಾರಸ್ಥರ ಮೇಲೆ ಅದಕ್ಕೆ ಸ್ವಲ್ಪ ಹಿಡಿತವಿತ್ತು. ಹಾಗಾಗಿ ಒಂದು ರೀತಿಯ ನ್ಯಾಯಯುತ ಬೆಲೆ ವ್ಯವಸ್ಥೆಯನ್ನು ಸ್ವಲ್ಪವಾದರೂ ಜಾರಿಗೆ ತರಲು ಅವಕಾಶವಿದ್ದು ಒಂದಿನಿತಾದರೂ ನಿಯಂತ್ರಣವಿರುತ್ತದೆ.

ಆದರೆ ಅಂದಿನ ಕಾಂಗ್ರೆಸ್ ಸರ್ಕಾರ ಬಂಡವಾಳಶಾಹಿ ಜಾಗತೀಕರಣದ ನೀತಿಯನ್ನು ಜಾರಿಗೊಳಿಸಿದ ನಂತರ ಎಪಿಎಂಸಿ ಮಾರುಕಟ್ಟೆಗಳ ಜೊತೆಜೊತೆಗೆ ಖಾಸಗಿ ಮಾರುಕಟ್ಟೆಗಳನ್ನು ಸ್ಥಾಪಿಸಲು ನಿರ್ಧರಿಸಿತು. ಆಗ ಅದನ್ನು ಜಾರಿಗೊಳಿಸುವ ಸಮಯದಲ್ಲಿ, ರೈತರು ಸರ್ಕಾರಿ ಖರೀದಿ ಏಜೆನ್ಸಿ ಅಥವಾ ಖಾಸಗಿ ವ್ಯಾಪಾರಿಗಳಲ್ಲಿ ಯಾರಿಗಾದರೂ ಮಾರಾಟ ಮಾಡಬಹುದು, ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಮತ್ತು ಈ ಮಾರುಕಟ್ಟೆ ಆಧಾರಿತ ಮಾರಾಟ ಪ್ರಕ್ರಿಯೆಯಿಂದ ಅವರಿಗೆ ಅತ್ಯುತ್ತಮ ಬೆಲೆ ಸಿಗುತ್ತದೆ ಎಂದು ವಾದಿಸಿತು.

ಅಂತೆಯೇ 2004ರಲ್ಲಿ ಎಪಿಎಂಸಿ ಕಾಯಿದೆಯನ್ನು ತಿದ್ದುಪಡಿ ಮಾಡಿ ಪರ್ಯಾಯ ಮಾರುಕಟ್ಟೆಗಳನ್ನು ಸ್ಥಾಪಿಸಿತು ಮತ್ತು ಕೃಷಿ ಉತ್ಪನ್ನ ಮಾರುಕಟ್ಟೆಗಳಿಗೆ ಏಕಸ್ವಾಮ್ಯ ಕೃಷಿ ದೈತ್ಯರು ಹಾಗೂ ಬಹುರಾಷ್ಟ್ರೀಯ ಕಂಪೆನಿಗಳು ಸೇರಿದಂತೆ ಎಲ್ಲಾ ಬಗೆಯವರಿಗೂ ಮುಕ್ತ ಪ್ರವೇಶ ನೀಡಿತು. ಮೊದಮೊದಲಿಗೆ, ಏಕಸ್ವಾಮ್ಯ ಮನೆತನಗಳು ಈ ಲಾಭದಾಯಕ ಮಾರುಕಟ್ಟೆಯಲ್ಲಿ ನೆಲೆಯೂರಲು ಸರ್ಕಾರ ನಡೆಸುತ್ತಿದ್ದ ಎಪಿಎಂಸಿ ಮಾರುಕಟ್ಟೆಯ ದರಕ್ಕಿಂತ ಸ್ವಲ್ಪ ಹೆಚ್ಚಿನ ಬೆಲೆಯನ್ನು ರೈತರಿಗೆ ನೀಡಿದವು; ಇದರ ಉದ್ದೇಶ ಕೃಷಿ ಉತ್ಪನ್ನಗಳನ್ನು ಸಂಗ್ರಹಿಸಿಕೊಳ್ಳುವುದಷ್ಟೇ ಅಲ್ಲದೆ, ಎಪಿಎಂಸಿ ವ್ಯಾಪಾರಿಗಳನ್ನು ದೂರ ತಳ್ಳಿ ರೈತರು ತಮ್ಮೆಡೆಗೆ ಆಕರ್ಷಿತರಾಗಲಿ ಎಂಬದಾಗಿತ್ತು. ಇದನ್ನು ಸಾಧಿಸಿದ ಮೇಲೆ ಅಂದರೆ ಎಪಿಎಂಸಿ ಮಾರುಕಟ್ಟೆ ನಿಷ್ಕ್ರಿಯವಾದ ಮೇಲೆ, ಎಪಿಎಂಸಿಯ ಲೈಸೆನ್ಸ್ ಪಡೆದ ವ್ಯಾಪಾರಿಗಳು ನಿರ್ನಾಮವಾದರು. ಇದನ್ನು ಸರ್ಕಾರಗಳು "ವಿತರಣಾ ಸರಪಳಿಯ ಕಡಿತ" ಎಂದು ಕರೆದವು. ಇದರಿಂದ ಇಡೀ ಕೃಷಿ ಉತ್ಪನ್ನ ಖರೀದಿ ವ್ಯವಸ್ಥೆಯು ಖಾಸಗಿಯವರ ಪಾಲಾಯಿತು.

ತದನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ದೈತ್ಯ ಹೆಜ್ಜೆಗಳನ್ನು ಹಾಕುತ್ತಾ ಇದೇ ದಾರಿಯಲ್ಲಿ ಸಾಗಿತು; ಇದರ ಪರಿಣಾಮವಾಗಿ ರೈತರ ಜೀವನವು ಮತ್ತಷ್ಟು ಬಿಗಡಾಯಿಸಿದೆ. ಈಗ ಈ 'ಕೃಷಿ ಮಾರುಕಟ್ಟೆಯ ಹೊಸ ರಾಷ್ಟ್ರೀಯ ನೀತಿಯ ರೂಪುರೇಷೆ'ಯ ಮೂಲಕ ಇಡೀ ಕೃಷಿ ಉತ್ಪನ್ನಗಳನ್ನು – ಅಕ್ಕಿ, ಗೋಧಿ, ಬೇಳೆಕಾಳು, ತರಕಾರಿ, ಎಣ್ಣೆಕಾಳು, ಹಾಲು, ಮಾಂಸದ ಉತ್ಪನ್ನಗಳ ಮಾರಾಟವನ್ನು ಸಂಪೂರ್ಣವಾಗಿ ಖಾಸಗೀಕರಣಗೊಳಿಸಲು ಹೊರಟಿದೆ. ಅಷ್ಟು ಮಾತ್ರವಲ್ಲದೆ, ಆಧುನೀಕರಣದ ಹೆಸರಿನಲ್ಲಿ ಎಪಿಎಂಸಿ ಮೂಲಕ ನಡೆಯುವ ಮಾರುಕಟ್ಟೆ ವ್ಯವಸ್ಥೆಯನ್ನು ಏಕಸ್ವಾಮ್ಯ ಬಂಡವಾಳಿಗರ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಕೈಗಿಡುವ ಮತ್ತು 29,000 ಕ್ಕೂ ಅಧಿಕ ಗ್ರಾಮೀಣ ಸಂತೆಗಳ ಇಡೀ ಮಾರುಕಟ್ಟೆ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ.

### ಸ್ವಾತಂತ್ರ್ಯ ಬಂದಾಗಿನಿಂದಲೂ ರೈತ ಪರವಾದ ಖರೀದಿ ವ್ಯವಸ್ಥೆಯು ಮರೀಚಿಕೆಯಾಗಿದೆ

ಸ್ವಾತಂತ್ರ್ಯ ಬಂದಾಗಿನಿಂದಲೂ ರೈತರು ಎದುರಿಸಿದ ಪ್ರಮುಖ ಸಮಸ್ಯೆಯೆಂದರೆ, ಅವರು ಬೆಳೆದ ಬೆಳೆಗೆ ನ್ಯಾಯಯುತವಾದ ಬೆಲೆಯನ್ನು ಪಡೆಯುವ ಸರಿಯಾದ ಮಾರ್ಗ ಸಿಗದೇ ಇರುವುದು. ಪಂಚಾಯಿತಿಗಳ ನೇತಾರರು, ಭ್ರಷ್ಟ ಅಧಿಕಾರಿಗಳು, ಕಂಟ್ರಾಕ್ಟರ್‌ಗಳು, ಬೆಳೆಗಳನ್ನು ತಿರುಚುವವರು,

8ನೇ ಪುಟಕ್ಕೆ....

## COP- 29

# ಮತ್ತೊಂದು ಹವಾಮಾನ ಶೃಂಗಸಭೆ ವಿಫಲ

ಹವಾಮಾನದಲ್ಲಿ ಉಂಟಾಗುತ್ತಿರುವ ಆತಂಕಕಾರಿ ಬದಲಾವಣೆಗಳನ್ನು ತಡೆಗಟ್ಟಲು ಜಾಗತಿಕ ಹೋರಾಟಕ್ಕೆ ತಿರುವು ನೀಡುವಂತಹ ಒಂದು ಸಾಮಾಜಿಕ ಯತ್ನವಾಗುತ್ತದೆ, ಈ ಸಿಓಪಿ 29–(ಕಾನ್ಫರೆನ್ಸ್ ಆಫ್ ದಿ ಪಾರ್ಟಿಸ್ 29) ಹವಾಮಾನ ಶೃಂಗಸಭೆ, ಎಂಬ ಅಪೇಕ್ಷೆಯಿತ್ತು. ಆದರೆ ಹಿಂದಿನ ಅನೇಕ ಶೃಂಗಸಭೆಗಳಂತೆಯೇ ಇದು ನಿರಾಶದಾಯಕವಾಯಿತು. ಪಳೆಯುಳಿಕೆ ಇಂಧನಗಳ ಅನಿಯಂತ್ರಿತ ಸುಡುವಿಕೆಯಿಂದಾಗಿ ಬೇಕಾಬಿಟ್ಟಿಯಾಗಿ ಇಂಗಾಲವು ಹೊರ ಸೂಸುವುದರಿಂದ ಹಸಿರು ಮನೆ ಅನಿಲಗಳಾದ ಇಂಗಾಲದ ಡೈಯಾಕ್ಸೈಡ್ ಹಾಗೂ ಮೀಥೇನ್ ಬಿಡುಗಡೆಯಾಗುತ್ತವೆ, ಇದು ಜಾಗತಿಕ ತಾಪಮಾನ ಏರಿಕೆಗೆ ಕಾರಣವಾಗುತ್ತದೆ. ಇದನ್ನು ತಡೆಗಟ್ಟಲು, ಅಜರ್‌ಬೈಜಾನ್ ದೇಶದ ಬಕುವಿನಲ್ಲಿ ನಡೆದ ಈ ಶೃಂಗಸಭೆಯಲ್ಲಿ ಭಾಗವಹಿಸಿದ ರಾಷ್ಟ್ರಗಳು ಒಮ್ಮತಕ್ಕೆ ಬರಲು ಸೋತಿವೆ.

ಸಿಓಪಿ 29 ರ ಮುಂದೆ ಇದ್ದ ಮುಖ್ಯ ಪ್ರಶ್ನೆ ಎಂದರೆ–ಬಲಿಷ್ಠ ಸಾಮ್ರಾಜ್ಯಶಾಹಿ ಬಂಡವಾಳಶಾಹಿ ರಾಷ್ಟ್ರಗಳಾದ ಅಮೆರಿಕ ಮುಂತಾದವು ಇಂಗಾಲ ಬಿಡುಗಡೆಯ ಪ್ರಮಾಣದಲ್ಲಿ ಕಡಿತ ಮಾಡಿವೆಯೇ ಮತ್ತು ಕಡಿಮೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಹಸಿರು ಇಂಧನ ಬಳಕೆ ಮಾಡಲು ಅವಶ್ಯಕ ಹಣ ಬಿಡುಗಡೆ ಮಾಡುತ್ತಿವೆಯೇ ಎಂಬುದಾಗಿತ್ತು. ಪ್ರಧಾನವಾಗಿ ಮುಂದುವರೆದ ಸಾಮ್ರಾಜ್ಯಶಾಹಿ ಬಂಡವಾಳಶಾಹಿ ದೇಶಗಳಲ್ಲಿ ಶಕ್ತಿ ಉತ್ಪಾದನೆ ಹಾಗೂ ಸಾರಿಗೆ ಕ್ಷೇತ್ರಗಳಲ್ಲಿ ಹಸಿರು ಮನೆ ಅನಿಲಗಳು ಬಿಡುಗಡೆಯಾಗುತ್ತವೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಆದರೂ ಈ ದೊಡ್ಡಣ್ಣಗಳು ಇವುಗಳ ಬಗ್ಗೆ ಕ್ರಮ ಕೈಗೊಳ್ಳಲು ನಿರಾಸಕ್ತರು.

ಅಮೆರಿಕಾದಲ್ಲಿ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಫ್ಲೋರಿಡಾದ ಬಿಗ್‌ಬೆಂಡ್ ಎಂಬ ಪ್ರದೇಶದಲ್ಲಿ 150 ಜನರ ಸಾವಿಗೆ ಕಾರಣವಾದ ಭೀಕರವಾದ ಹೆಲಿನ್ ಎಂಬ ಚಂಡಮಾರುತ ಜಾಗತಿಕ ತಾಪಮಾನದಿಂದ ಉಂಟಾದದ್ದು ಎಂದು ಸಂಶೋಧನೆಗಳು ಹೇಳುತ್ತವೆ. ಆದರೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹವಾಮಾನದ ಬಿಕ್ಕಟ್ಟನ್ನು ನಿರಾಕರಿಸುತ್ತಲೇ ಇದ್ದಾರೆ. ಅವರು ನೆರೆಹಾವಳಿಯ ನಿಯಂತ್ರಣ ಅಥವಾ ಹವಾಮಾನದ ನೀತಿಗಳನ್ನು ಪರಿಗಣಿಸುತ್ತಾರೆಯೇ ಎಂಬುದರ ಬಗ್ಗೆ ಪರಿಸರವಾದಿಗಳಿಗೆ ಆತಂಕವಿದೆ. ಇವುಗಳ ಪರಿಣಾಮವನ್ನು ತಡೆಗಟ್ಟಲು ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿಶೀಲ ದೇಶಗಳು ಹೊರಬೇಕಾದ ಜವಾಬ್ದಾರಿ, ಆರ್ಥಿಕ ಹೊರೆ ಇವುಗಳ ಕುರಿತು ಘರ್ಷಣೆಗಳಿವೆ.

### ಕಾರ್ಬನ್ ಮಾರುಕಟ್ಟೆಗಳ ವೈಫಲ್ಯ

ಹವಾಮಾನ ವಿಜ್ಞಾನಿಗಳು ಹೇಳಿರುವಂತೆ ಸಿಓಪಿ–29 ಹವಾಮಾನ ಬದಲಾವಣೆಯ ಸಮಸ್ಯೆಗಳಿಗೆ ಮೂಲಭೂತ ಪರಿಹಾರವನ್ನು ಯೋಚಿಸುವ ಬದಲು ಮಾರುಕಟ್ಟೆ ಆಧಾರಿತ ಪರಿಹಾರಗಳತ್ತ ಗಮನವನ್ನು ಕೇಂದ್ರೀಕರಿಸಿತು. ಈ ಮಾರುಕಟ್ಟೆ ಆಧಾರಿತ ಪರಿಹಾರಗಳೆಂದರೆ, ಕಾರ್ಬನ್ ಮಾರುಕಟ್ಟೆ ಎಂಬುದಾಗಿದೆ. ಎಂದರೆ ಇದರ ಅಡಿಯಲ್ಲಿ ಕಾರ್ಬನ್ ಕ್ರೆಡಿಟ್‌ನ್ನು ಮಾರಲಾಗುವುದು ಹಾಗೂ ಕೊಳ್ಳಲಾಗುವುದು.

ಈ ಕಾರ್ಬನ್ ಕ್ರೆಡಿಟ್‌ಗಳೆಂದರೇನು? ಪ್ರತಿಯೊಂದು ದೇಶ ಅಥವಾ ಸಂಸ್ಥೆಗೆ ಅದರ ಹಿಂದಿನ ಕಾರ್ಯಾಚರಣೆಯನ್ನು ಆಧರಿಸಿ ಕಾರ್ಬನ್ ಕ್ರೆಡಿಟ್ ನೀಡಲಾಗುತ್ತದೆ. ಕೆಲವು ಯೋಜನೆಗಳ ಮೂಲಕ, ಉದಾಹರಣೆಗೆ, ಸಸಿಗಳನ್ನು ನೆಡುವುದು, ಪರ್ಯಾಯ ಇಂಧನಗ ಬಳಕೆ ಇತ್ಯಾದಿಗಳ ಮೂಲಕ ಹಸಿರು ಮನೆ ಅನಿಲಗಳ ಹೊರಸೂಸುವಿಕೆಯಿಂದ ವಾತಾವರಣದಲ್ಲಿ ಹೆಚ್ಚಾಗಿರುವ ಇಂಗಾಲವನ್ನು ಕಡಿಮೆ ಮಾಡಬಹುದು ಅಥವಾ ತಡೆಗಟ್ಟಬಹುದು. ಈ ರೀತಿ ಮಾಡಿದಾಗ ಅಂತಹ ದೇಶ/ಸಂಸ್ಥೆಗಳ ಇಂಗಾಲ ಬಿಡುಗಡೆ ಕಡಿತವಾಗುವ ಕಾರಣ ಅವುಗಳ ಕಾರ್ಬನ್ ಕ್ರೆಡಿಟ್ ಉಳಿತಾಯವಾಗುತ್ತದೆ. ಜಾಗತಿಕ ತಾಪಮಾನಕ್ಕೆ ಕಾರಣವಾಗುವ ಸಂಸ್ಥೆಗಳು ಅಥವಾ ಸರ್ಕಾರಗಳು ಇವನ್ನು ಖರೀದಿಸಬಹುದು.

ಆದರೆ ದುರಂತವೆಂದರೆ ಈ ಕಾರ್ಬನ್ ಟ್ರೇಡಿಂಗ್ ನಲ್ಲಿ ಹಲವಾರು ಸಾಮ್ರಾಜ್ಯಶಾಹಿ ದೇಶಗಳು ಕೆಲವು ಬಡ ರಾಷ್ಟ್ರಗಳಿಂದ ಅಗ್ಗವಾದ ಕಾರ್ಬನ್ ಕ್ರೆಡಿಟ್ ಗಳನ್ನು ಕೊಂಡುಕೊಳ್ಳುತ್ತಿದ್ದಾರೆ. ಇದು ಇಂಗಾಲದ ಪ್ರಮಾಣದ ನೈಜವಾದ ತಡೆಗಟ್ಟುವಿಕೆಯಾಗುವುದಿಲ್ಲ. ಈ ಪದ್ಧತಿಯು ಕಾರ್ಪೊರೇಷನ್‌ಗಳ, ಶ್ರೀಮಂತ ರಾಷ್ಟ್ರಗಳ ಹವಾಮಾನದೆಡೆಗಿನ ಜವಾಬ್ದಾರಿಯನ್ನು ಪಕ್ಕಕ್ಕೆ ಸರಿಸುವ ವಿಧಾನವಾಗಿದೆ. ಇದು ಒಂದು ರೀತಿಯಲ್ಲಿ ನಿಸರ್ಗದ ಸರಕೀಕರಣ, ಹವಾಮಾನದ ವಿಷಯಗಳನ್ನು ಆರ್ಥಿಕ ವ್ಯವಹಾರದ ಮಟ್ಟಕ್ಕೆ ಇಳಿಸಿದಂತೆ. ಇದು ಮುಂದುವರೆದ ಸಾಮ್ರಾಜ್ಯಶಾಹಿ ದೇಶಗಳು ಬಡರಾಷ್ಟ್ರಗಳ ಮೇಲೆ ಮಾಡುವ ಸವಾರಿಯಾಗಿದೆ.

ವೈಜ್ಞಾನಿಕವಾಗಿಯೂ ಕಾರ್ಬನ್ ಮಾರ್ಕೆಟ್‌ಗಳು ಹೊರಸೂಸುವಿಕೆಯನ್ನು ಯಶಸ್ವಿಯಾಗಿ ತಡೆಗಟ್ಟುವ ಸಾಮರ್ಥ್ಯ ಹೊಂದಿಲ್ಲವೆಂದು ಟೀಕೆಗೊಳಪಟ್ಟಿವೆ. ಇವು ಅಭಿವೃದ್ಧಿಯ ಬಗ್ಗೆ ತಪ್ಪು ಭಾವನೆಯನ್ನು ಮೂಡಿಸುತ್ತವೆ. ಈ ಕಾರ್ಬನ್ ಮಾರ್ಕೆಟ್‌ಗಳ ಯತ್ನವು ಕಳೆದ ಕೆಲವು ದಶಕಗಳಲ್ಲಿ ಜಾಗತಿಕ ತಾಪಮಾನವನ್ನು 1.5 ಡಿಗ್ರಿ ಸೆಂಟಿಗ್ರೇಡಿಗೆ ಸೀಮಿತಗೊಳಿಸುವಲ್ಲಿ ಸೋತಿವೆ ಎಂಬುದನ್ನು ಹವಾಮಾನದ ಬದಲಾವಣೆಗೆ ಸಂಬಂಧಿಸಿದ ಅಂತರ ಸರ್ಕಾರಗಳ ತಜ್ಞರ ಸಮಿತಿ ಸ್ಪಷ್ಟಪಡಿಸಿದೆ. ಆದರೂ ಇದರ ಕುರಿತು ಸಿಓಪಿ 29 ರಲ್ಲಿ ಯಾವುದೇ ಚರ್ಚೆಯಾಗಿಲ್ಲ. ಬದಲಿಗೆ ಹವಾಮಾನ ಬಿಕ್ಕಟ್ಟಿಗೆ ಇದೇ ಪರಿಹಾರವೆಂಬಂತೆ ಹೇಳುತ್ತಾ, ಆದ್ದರಿಂದ ಈ ಮಾರ್ಕೆಟ್‌ಗಳನ್ನು ವಿಸ್ತರಿಸಬೇಕು ಎಂಬ ಚರ್ಚೆಗಳಿಗೆ ಒತ್ತು ನೀಡಲಾಯಿತು. ಇದನ್ನು ಜಾಗತೀಕರಣ–ಉದಾರೀಕರಣ ನೀತಿಗಳಿಗೆ ಅನುಗುಣವಾಗಿ ಮಾಡಲಾಗಿದೆ. ಇದು ಬಂಡವಾಳಶಾಹಿ ವ್ಯವಸ್ಥೆಯು ಮಾನವನನ್ನು ಹಾಗೂ ನೈಸರ್ಗಿಕ ಸಂಪನ್ಮೂಲಗಳನ್ನು ನಿರ್ದಯವಾಗಿ ಶೋಷಿಸುತ್ತದೆ ಎಂಬ ಅಹಿತಕರವಾದ ಸತ್ಯವನ್ನು ಮರೆಮಾಚಲು ಯತ್ನಿಸುತ್ತದೆ.

### ಹವಾಮಾನ ನ್ಯಾಯ ಹಾಗೂ ಪರಿಹಾರಗಳ ವಿಷಯ

ಸಿಓಪಿ 29, ವಿವಿಧ

8ನೇ ಪುಟಕ್ಕೆ....

# ಕರ್ನಾಟಕದಲ್ಲಿ ವಕ್ಫ್ ವಿವಾದ: ಏನು? ಏಕೆ?

ರಾಜ್ಯದಲ್ಲಿ ಕೆಲವು ತಿಂಗಳ ಹಿಂದೆ ಏಕಾಏಕಿಯಾಗಿ ಒಂದು ವಿವಾದ ಭುಗಿಲೆದ್ದಿತು. ಅದೆಂದರೆ ರಾಜ್ಯದೆಲ್ಲೆಡೆ ವಕ್ಫ್ ಮಂಡಳಿಯು ರೈತರಿಗೆ ಸೇರಿದ ಸಾವಿರಾರು ಎಕರೆ ಭೂಮಿಯನ್ನು ತನ್ನದೆಂದು ನೋಟಿಸ್ ನೀಡಿ ಕಬಳಿಸಲು ಹುನ್ನಾರ ನಡೆಸಿದೆ, ಹೀಗೇ ಮುಂದುವರಿದರೆ ನಾಳೆ ವಿಧಾನ ಸೌಧವೂ ವಕ್ಫ್ ಮಂಡಳಿಗೆ ಸೇರಿದ್ದು ಎಂದಾಗಬಹುದು ಎಂಬ ಬೊಬ್ಬೆ ಕೇಳಿ ಬಂತು. ಇಂತಹ ವಿವಾದದ ಬೆಂಕಿಗೆ ತುಪ್ಪ ಸುರಿದು ತಮ್ಮ ಟಿಆರ್‌ಪಿ ಹೆಚ್ಚಿಸಿಕೊಳ್ಳುವ ಟಿವಿ ಮಾಧ್ಯಮಗಳು ಕೂಡ ಇದಕ್ಕೆ ತಮ್ಮ 'ಅಮೂಲ್ಯ' ಕೊಡುಗೆ ನೀಡಿದವು. ಉಪ ಚುನಾವಣೆಯ ಫಲಿತಾಂಶ ಬರುವವರೆಗೆ ಉರಿಯುತ್ತಿದ್ದ ಈ ಬೆಂಕಿ ಆಮೇಲೆ ಒಮ್ಮಿಂದೊಮ್ಮೆಲೆ ನಂದಿ ಹೋಗಿದೆ. ಏನು ಈ ವಿವಾದ, ಅದಕ್ಕೆ ಕಾರಣಗಳು ಏನಿರಬಹುದು ಎಂಬ ಸ್ಥೂಲ ವಿಶ್ಲೇಷಣೆ ಮಾಡುವ ಪ್ರಯತ್ನವನ್ನು ಕಾರ್ಮಿಕ ದೃಷ್ಟಿಕೋನ ಪತ್ರಿಕೆಯು ನಮ್ಮ ಓದುಗರ ತಿಳುವಳಿಕೆಗಾಗಿ ಇಲ್ಲಿ ಮಾಡಿದೆ.

### ನಡೆದದ್ದೇನು?

ಕಳೆದ ಅಕ್ಟೋಬರ್ ತಿಂಗಳಲ್ಲಿ ವಿಜಯಪುರ ಜಿಲ್ಲೆಯ ತಿಕೋಟಾ ತಾಲೂಕಿನ ಹೊನವಾಡ ಗ್ರಾಮದಲ್ಲಿ ರೈತರಿಗೆ ನೋಟಿಸ್ ನೀಡುವ ಮೂಲಕ 1500 ಎಕರೆಯಷ್ಟು ಭೂಮಿಯನ್ನು ವಶಪಡಿಸಿಕೊಳ್ಳಲು ವಕ್ಫ್ ಹವಣಿಸುತ್ತಿದೆ ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಆಪಾದನೆ ಮಾಡುವುದರೊಂದಿಗೆ ಈ ವಿವಾದ ಮುನ್ನೆಲೆಗೆ ಬಂತು. ವಿಜಯಪುರದ ಇನ್ನೋರ್ವ ಬಿಜೆಪಿ ನಾಯಕ ಬಸವನಗೌಡ ಯತ್ನಾಳ್ ಕೂಡ ಇದಕ್ಕೆ ಧುಮುಕಿದರು.

ಆಗ ವಿಜಯಪುರದ ಜಿಲ್ಲಾ ಉಸ್ತುವಾರಿ ಸಚಿವರಾದ ಎಂ.ಬಿ. ಪಾಟೀಲ್ ಅವರು ಇದಕ್ಕೆ ಸ್ಪಷ್ಟೀಕರಣ ನೀಡಿ, ಇಂತಹ ನೋಟೀಸನ್ನು ಹೊನವಾಡದಲ್ಲಿ ನೀಡಿಲ್ಲ, ಬೇರೆ ಕೆಲವು ಕಡೆಗಳಲ್ಲಿ ನೀಡಲಾಗಿದೆ ಎಂಬುದು ನಿಜ ಎಂದರು. ರೈತರು ಒಮ್ಮೆ ಇಂತಹ ನೋಟಿಸ್ ಪಡೆದರೆ, ಆ ವ್ಯಾಜ್ಯ ತೀರ್ಮಾನ ಆಗುವವರೆಗೂ ಅದರ ಮೇಲೆ ಸಾಲ ಪಡೆಯುವುದಾಗಲೀ, ಮಾರಾಟ ಮಾಡುವುದಾಗಲೀ ಸಾಧ್ಯವಾಗುವುದಿಲ್ಲ. ಸಹಜವಾಗಿ ರೈತರಿಗೆ ಇದು ದೊಡ್ಡ ಆರ್ಥಿಕ ಹೊಡೆತವಾಗುತ್ತದೆ.

ಆನಂತರ ಕರ್ನಾಟಕದ ಬಿಜೆಪಿ ನಾಯಕರು ಇದನ್ನು ಒಂದು ದೊಡ್ಡ ಹೋರಾಟದ ವಿಷಯವನ್ನಾಗಿ ಮಾಡಿದರು. ಇದು ಭೂ ಜಿಹಾದ್ ಎಂದು ಜರಿದರು. ವಿವಿಧ ಜಿಲ್ಲೆಗಳಲ್ಲಿ ಹಿಂದೂ ರೈತರನ್ನು ಮುಸ್ಲಿಂರ ವಿರುದ್ಧ ಎತ್ತಿ ಕಟ್ಟುವ ಪ್ರಯತ್ನ ಕೂಡ ನಡೆಯಿತು. ಪರಿಣಾಮವಾಗಿ ವಿಜಯಪುರ, ಚಿಕ್ಕಬಳ್ಳಾಪುರದ ಕೆಲವು ಹಳ್ಳಿಗಳಲ್ಲಿ ಸಣ್ಣಪುಟ್ಟ ಘರ್ಷಣೆಗಳು ವರದಿಯಾದವು. ಬೇರೆ ಬೇರೆ ನಾಯಕರು ಪ್ರಚೋದನಕಾರಿ ಭಾಷಣಗಳನ್ನು ಕೂಡ ಮಾಡಿ ಜನರನ್ನು ಕೆರಳಿಸಲು ಪ್ರಯತ್ನಿಸಿದರು.

ಇದರಿಂದ ಗಾಬರಿಗೊಂಡ ಬೇರೆ ಬೇರೆ ಜಿಲ್ಲೆಗಳ ರೈತರು ತಮ್ಮ ಪಹಣಿಗಳಲ್ಲಿ ಏನು ನಮೂದಿಸಲಾಗಿದೆ ಎಂದು ತಿಳಿಯಲು ಪ್ರಯತ್ನಿಸಿದರು. ಪಹಣಿ ಅಥವಾ ಆರ್‌ಟಿಸಿಯ ಕಾಲಂ 9ರಲ್ಲಿ ಭೂಮಿಯ ಇಂದಿನ ಮಾಲೀಕರು ಯಾರು ಎಂಬ ಮಾಹಿತಿ ಇದ್ದರೆ, 11ರಲ್ಲಿ ಭೂಮಿಯ ಮೇಲಿನ ಋಣ, ಭೂಮಿ ಯಾರಿಂದ ಬಂತು ಇತ್ಯಾದಿ ಮಾಹಿತಿ ಇರುತ್ತದೆ. ಎಷ್ಟೋ ರೈತರ ಪಹಣಿಯ ಕಾಲಂ 9ರಲ್ಲಿ ತಮ್ಮ ಕುಟುಂಬಸ್ಥರ ಹೆಸರಿದ್ದರೂ, ಕಾಲಂ 11ರಲ್ಲಿ ವಕ್ಫ್ ಹೆಸರಿರುವುದು ಕಂಡು ಅವರು ಗಾಬರಿಗೊಂಡರು.

### ವಕ್ಫ್ ಎಂದರೇನು?

ವಕ್ಫ್ ಎಂಬುದು ಇಸ್ಲಾಂ ಧರ್ಮದ ಒಂದು ಪರಿಕಲ್ಪನೆಯಾಗಿದ್ದು, ಧಾರ್ಮಿಕ ಉದ್ದೇಶಗಳಿಗಾಗಿ ಯಾರೇ ಆದರೂ ಭೂಮಿ ಅಥವಾ ಚರಾಸ್ತಿಗಳನ್ನು ದಾನ ಮಾಡಬಹುದಾಗಿದೆ. ಈ ಆಸ್ತಿಗಳನ್ನು ಧಾರ್ಮಿಕ ಮತ್ತು ದತ್ತಿ ಉದ್ದೇಶಗಳಿಗಾಗಿಯೇ ಬಳಸಬೇಕು. ವಕ್ಫ್‌ಗೆ ಒಮ್ಮೆ ನೀಡಿದ ಆಸ್ತಿಯನ್ನು ಅನ್ಯರಿಗೆ ಪರಭಾರೆ ಮಾಡುವಂತಿಲ್ಲ. ಇದು ವಕ್ಫ್ ಕಾಯಿದೆಗೆ ಒಳಪಟ್ಟಿದ್ದು, ಸರ್ಕಾರಗಳು ನೇಮಕ ಮಾಡಿದ ಕೇಂದ್ರ ಮತ್ತು ರಾಜ್ಯ ವಕ್ಫ್ ಮಂಡಳಿಗಳು ಈ ಆಸ್ತಿಗಳನ್ನು ನಿರ್ವಹಣೆ ಮಾಡುತ್ತವೆ. ಕರ್ನಾಟಕದ ಭೂ ಪ್ರದೇಶವನ್ನು ಚಾರಿತ್ರಿಕವಾಗಿ ಮೊಗಲರು, ಬಿಜಾಪುರದ ಆದಿಲ್ ಶಾಗಳು, ಹೈದರಾಬಾದಿನ ನಿಜಾಮರು, ಮೈಸೂರಿನ ಟಿಪ್ಪು ಮೊದಲಾದ ರಾಜರು ಆಳ್ವಿಕೆ ನಡೆಸಿರುವುದರಿಂದ ದೊಡ್ಡ ಪ್ರಮಾಣದ ಭೂಮಿ ವಕ್ಫ್ ಮಂಡಳಿಗೆ ಧಾರ್ಮಿಕ ಉದ್ದೇಶಕ್ಕಾಗಿ ದಾನವಾಗಿ ಬಂದಿರುವ ಸಾಧ್ಯತೆ ಇದೆ. ಇದು ಹಿಂದೂ ದೇವಾಲಯಗಳ, ಮಠಗಳ ವಿಚಾರದಲ್ಲೂ ಅಷ್ಟೇ ಸತ್ಯ. ಇಡೀ ದೇಶದಲ್ಲಿ ದೇವಾಲಯ, ಮಠಗಳ ಹೆಸರಿನಲ್ಲಿ ಇಂದಿಗೂ ಲಕ್ಷಾಂತರ ಎಕರೆ ಭೂಮಿ ಇದೆ. ಇತ್ತೀಚೆಗೆ ತೀರ್ಥಹಳ್ಳಿಯ ಆಲಗೇರಿ ಗ್ರಾಮದಲ್ಲಿ ಭೀಮನಕಟ್ಟೆ ಮಠದ ವಿರುದ್ಧ ತಮ್ಮ ಭೂಮಿಯನ್ನು ಕಬಳಿಸುತ್ತಿರುವುದಾಗಿ ಆರೋಪಿಸಿ ರೈತರು ಪ್ರತಿಭಟನೆ ನಡೆಸಿರುವುದು ವರದಿಯಾಗಿದೆ. ಆಂಧ್ರಪ್ರದೇಶದಲ್ಲೂ ಇಂತಹ ವಿವಾದ ಕೆಲವು ವರ್ಷಗಳ ಹಿಂದೆ ಕೇಳಿ ಬಂದಿತ್ತು.

### ವಿವಾದಕ್ಕೆ ಕಾರಣಗಳೇನು?

ಮೊದಲನೆಯದಾಗಿ, ಕರ್ನಾಟಕವೂ ಸೇರಿದಂತೆ ಇಡೀ ದೇಶದಲ್ಲಿ ಸ್ವಾತಂತ್ರ್ಯಾನಂತರ ಭೂ ದಾಖಲೆಗಳನ್ನು ಸರಿಯಾಗಿ ನಿರ್ವಹಣೆ ಮಾಡಿಲ್ಲ, ಕಾಲಕಾಲಕ್ಕೆ ನವೀಕರಣ ಮಾಡಿಲ್ಲ. ಹಾಗಾಗಿ ಮಾಲೀಕತ್ವ ಬದಲಾದರೂ ಅದು ಸರ್ಕಾರಿ ದಾಖಲೆಗಳಲ್ಲಿ ಸಮರ್ಪಕವಾಗಿ ನಮೂದಾಗಿಲ್ಲ.

ಎರಡನೆಯದಾಗಿ, 1974ರಲ್ಲಿ ಭೂ ಸುಧಾರಣಾ ಕಾಯ್ದೆ ಜಾರಿಯಾಗಿ, ಉಳುವವನೇ ಭೂಮಿಯ ಒಡೆಯ ಎಂದು ಘೋಷಿಸಲಾಯಿತು. ಆ ಸಂದರ್ಭದಲ್ಲಿ ಖಾಸಗಿ, ಸರ್ಕಾರಿ ಮತ್ತು ಧಾರ್ಮಿಕ ಸಂಸ್ಥೆಗಳ ಭೂಮಿಯನ್ನು ಕೂಡ ಸರ್ಕಾರ ವಶಕ್ಕೆ ಪಡೆದು ಗೇಣಿಗೆ ಕೃಷಿ ಮಾಡುತ್ತಿದ್ದ ರೈತರಿಗೆ ವಿತರಣೆ ಮಾಡಿತು. ಅಂತಹ ಸಂದರ್ಭದಲ್ಲಿ ಭೂಮಿಯ ಪಹಣಿಗಳಲ್ಲಿ ಕಾಲಂ 11ನ್ನು ಬದಲಾಯಿಸಿ, ಕಂದಾಯ ಇಲಾಖೆ ಎಂದು ನಮೂದು ಮಾಡಬೇಕಾಗಿತ್ತು. ಆದರೆ ಇದನ್ನು ಮಾಡಿಲ್ಲ. ನಂತರದಲ್ಲಿ ಸರಿಯಾಗಿ ಸರ್ವೇ ಮಾಡಿ ಪ್ರತಿ ರೈತನ ಭೂಮಿಯ ಗಡಿಗಳನ್ನು ಗುರುತಿಸಿ, ಅದಕ್ಕೆ ಸೂಕ್ತ ಹಿಸ್ಸೆ ನಂಬರ್ ನೀಡಿ, (ದುರಸ್ತಿ, ಪೋಡು), ಇಂಡೀಕರಣದ ಮೂಲಕ ಬ್ರಿಟಿಷರ ಅಥವಾ ರಾಜರ ಕಾಲದ ಪಹಣಿಗಳ ಜಾಗದಲ್ಲಿ ಹೊಸ ಪಹಣಿ, ಭೂನಕ್ಷೆ ಮಾಡಬೇಕಾಗಿತ್ತು. ಆದರೆ ಅಧಿಕಾರಕ್ಕೆ ಬಂದ ಯಾವ ಸರ್ಕಾರಗಳೂ ಈ ಕೆಲಸವನ್ನು ಪೂರೈಸಲಿಲ್ಲ. ಭೂವ್ಯಾಜ್ಯಗಳು ಬಂದಾಗ ಮಾತ್ರವೇ ಸರ್ವೇ ಮಾಡುವ ಚಾಳಿಯನ್ನು ಕಂದಾಯ ಇಲಾಖೆ ಪಾಲಿಸುತ್ತಾ ಬಂದಿದೆ. ಇದರಿಂದಾಗಿ ಭೂದಾಖಲೆಗಳಲ್ಲಿ ಮೂಲ ಯಾವುದು ಎಂಬ 11ನೇ ಕಾಲಮಿನಲ್ಲಿ ಹಳೆಯ ಮಾಹಿತಿ ಹಾಗೆಯೇ ಉಳಿದುಕೊಂಡಿದೆ. ಇಂತಹ ಸಮಸ್ಯೆ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಗಳ ನಡುವೆಯೂ ಇದೆ. ರೈತರು ಕಂದಾಯ ಕಟ್ಟಿ ಐದಾರು ದಶಕಗಳಿಂದ ಬೇಸಾಯ ಮಾಡುತ್ತಿರುವ ಭೂಮಿಗಳಿಗೆ ಕೂಡ ಅರಣ್ಯ ಇಲಾಖೆ ನೋಟಿಸ್ ಜಾರಿ ಮಾಡುತ್ತಿದೆ. ಈ ಉದ್ದೇಶಪೂರ್ವಕ ದಿವ್ಯ ನಿರ್ಲಕ್ಷ್ಯದ ಮೊದಲ ಆರೋಪಿ, ಹಿಂದಿನಿಂದ ರಾಜ್ಯವನ್ನು ಆಳುತ್ತಾ ಬಂದ ಕಾಂಗ್ರೆಸ್ ಸರ್ಕಾರಗಳೇ. ಆದರೆ, ರಾಜ್ಯವನ್ನು ಆಳಿದ ಜೆಡಿಎಸ್, ಬಿಜೆಪಿಗಳಿಗೆ ಕ್ಲೀನ್ ಚಿಟ್ ನೀಡಲು ಖಂಡಿತ ಸಾಧ್ಯವಿಲ್ಲ.

ಇನ್ನೂ ಒಂದು ಕಾರಣವೆಂದರೆ, 1998ರಲ್ಲಿ ಒಂದು ವ್ಯಾಜ್ಯದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಪ್ರಕಾರ ವಕ್ಫ್ ಮಂಡಳಿಗೆ ಸೇರಿದ ಎಲ್ಲ ಆಸ್ತಿಗಳನ್ನು ಯಾವುದೇ ಅನ್ಯರಿಗೆ ಪರಭಾರೆ ಮಾಡುವಂತಿಲ್ಲ, ಅವುಗಳನ್ನು ಗುರುತಿಸಿ, ತನ್ನ ಸುಪರ್ದಿಗೆ ಪಡೆಯಬೇಕು ಎಂದಿದೆ. ಹಾಗಾಗಿ ಕೇಂದ್ರ ಮತ್ತು ರಾಜ್ಯ ಅಲ್ಪಸಂಖ್ಯಾತ ಕಲ್ಯಾಣ ಸಚಿವಾಲಯಗಳು ಈ ಕುರಿತು ವರದಿ ಕೇಳುತ್ತಾ ಬಂದಿವೆ. ಈ ಕಾರಣದಿಂದಲೇ ಹಿಂದೆ ಬಿಜೆಪಿ ಸರ್ಕಾರ ಇದ್ದಾಗ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾಗಿದ್ದ ಅನ್ವರ್ ಮಾಣಿಪ್ಪಾಡಿಯವರ ಮೂಲಕ ತನಿಖೆ ನಡೆಸಲಾಗಿತ್ತು. 2012ರಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ಸದಾನಂದ ಗೌಡರಿಗೆ ಸಲ್ಲಿಕೆಯಾದ ಈ ವರದಿಯಲ್ಲಿ ಲಕ್ಷಾಂತರ ಕೋಟಿ ಬೆಲೆ ಬಾಳುವ 27,000 ಎಕರೆಯಷ್ಟು ವಕ್ಫ್ ಮಂಡಳಿಗೆ ಸೇರಿದ ಭೂಮಿ ಪ್ರಭಾವಿಗಳಿಂದ ಒತ್ತುವರಿಯಾಗಿದೆ ಎಂದು ನಮೂದಿಸಲಾಗಿತ್ತು. ಕಳೆದ 2023ಕ್ಕಿಂತ ಹಿಂದಿನ ಬಿಜೆಪಿ ಸರ್ಕಾರವು ಕೂಡ ವಕ್ಫ್ ಭೂಮಿಗೆ ಸಂಬಂಧಿಸಿ 4,000ಕ್ಕೂ ಹೆಚ್ಚು ನೋಟಿಸುಗಳನ್ನು ನೀಡಿದ್ದು, ಇದು ಕಾಂಗ್ರೆಸ್ ಸರ್ಕಾರ ನೀಡಿದ ನೋಟೀಸ್‌ಗಳ ಸಂಖ್ಯೆಗಿಂತ ಹೆಚ್ಚು ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಈ ಹಿನ್ನೆಲೆಯಲ್ಲಿ, ವಕ್ಫ್ ಎಂದು ನಮೂದಿಸಲಾದ ಭೂಮಿಗಳ ಮಾಲೀಕರಿಗೆ ನೋಟಿಸ್ ಜಾರಿ ಆಗಿರಬಹುದು. ವಿವಾದ ಬೆಳೆಯುತ್ತಿದ್ದಂತೆ ಎಚ್ಚೆತ್ತುಕೊಂಡ ರಾಜ್ಯದ ಮುಖ್ಯಮಂತ್ರಿಗಳು, ಅಕ್ಟೋಬರ್ ಕೊನೆಯ ವಾರದಲ್ಲಿ, ರೈತರಿಗೆ ನೀಡಿದ ಎಲ್ಲಾ ನೋಟಿಸ್‌ಗಳನ್ನು ವಾಪಸ್ ಪಡೆಯುವುದಾಗಿ ಮತ್ತು ರೈತರನ್ನು ಯಾವುದೇ ಕಾರಣಕ್ಕೂ ಒಕ್ಕಲೆಬ್ಬಿಸುವುದಿಲ್ಲ ಎಂದೂ ಘೋಷಿಸಿದರು. ಆದರೆ ಅದು ಈ ಸಮಸ್ಯೆಗೆ ಹಾಕಿದ ಅಲ್ಪ ವಿರಾಮವೇ ಹೊರತು ಪೂರ್ಣ ವಿರಾಮವಲ್ಲ ಎಂಬುದು ಅವರಿಗೆ ಕೂಡ ಖಂಡಿತ ಅರಿವಿರುತ್ತದೆ.

### ಬಿಜೆಪಿಯ ಕೋಮುವಾದಿ ರಾಜಕೀಯ

ಅಪ್ಪಟ ಕಾರ್ಪೋರೇಟ್ ಬಂಡವಾಳಶಾಹಿ ಪಕ್ಷವಾಗಿರುವ ಬಿಜೆಪಿಗೆ ರೈತರ ಬಗ್ಗೆ ನಿಜವಾದ ಕಾಳಜಿ ಇದೆ ಎಂದು ನಂಬಲು ಸಾಧ್ಯವೇ? ರೈತ ವಿರೋಧಿ ಮೂರು ಕಾಯಿದೆಗಳನ್ನು ತರಲು ಮುಂದಾಗಿದ್ದು ಕೇಂದ್ರ ಬಿಜೆಪಿ ಸರ್ಕಾರವೇ ಅಲ್ಲವೇ? ಅವುಗಳ ವಿರುದ್ಧ ದೆಹಲಿಯಲ್ಲಿ ಹೋರಾಡುತ್ತಿರುವ ರೈತರನ್ನು ಬಿಜೆಪಿ ಹೇಗೆ ನಡೆಸಿಕೊಂಡಿತು ಎಂಬುದನ್ನು ಇಡೀ ದೇಶವೇ ನೋಡಿದೆ. ರೈತರು ಒಂದು ವರ್ಷ ಹೋರಾಡಿ, 700ಕ್ಕೂ ಹೆಚ್ಚು ಮಂದಿ ಜೀವ ಕಳೆದುಕೊಳ್ಳಬೇಕಾಯಿತು. ಮೋದಿ ಸರ್ಕಾರ ರೈತರನ್ನು ದೇಶದ್ರೋಹಿಗಳಂತೆ ನಡೆಸಿಕೊಂಡಿತು. ಈಗ ವಕ್ಫ್ ವಿಷಯದಲ್ಲಿ ಬಿಜೆಪಿಗೆ ಇದ್ದಕ್ಕಿದ್ದಂತೆ ರೈತರ ಬಗ್ಗೆ ಪ್ರೇಮ ಉಕ್ಕಿ ಹರಿಯಿತೆಂದರೆ ಅದನ್ನು ನಂಬಬಹುದೇ?

ಭೂಮಿ ಮತ್ತು ನಂಬಿಕೆಯಂತಹ ಎರಡು ಅತ್ಯಂತ ಸೂಕ್ಷ್ಮ ಅಂಶಗಳನ್ನು ಒಳಗೊಂಡಿರುವ, ಜಟಿಲವಾದ ಈ ವಿಷಯವನ್ನು ಬಿಜೆಪಿಯು ತನ್ನ ಕೋಮುವಾದಿ ರಾಜಕೀಯ ಉದ್ದೇಶಕ್ಕಾಗಿ ಅಸಹ್ಯಕರವಾಗಿ ಬಳಸಿಕೊಂಡು ಗುಲ್ಲೆಬ್ಬಿಸಿತು. ತಾನೇ ಹಿಂದೂ ರೈತರ ರಕ್ಷಕ ಎಂಬಂತೆ ಚಿತ್ರಿಸಿ ಕೊಂಡಿತು. ಆದರೆ ಮೂರು ಕ್ಷೇತ್ರಗಳ ಉಪ ಚುನಾವಣೆಯ ಫಲಿತಾಂಶ ಬರುತ್ತಿದ್ದಂತೆ ಸುಮ್ಮನಾಗಿದೆ ಏಕೆ?

ಇತ್ತೀಚೆಗೆ, ಕೇಂದ್ರ ಸರ್ಕಾರವು ವಕ್ಫ್ ಕಾಯಿದೆಗೆ ತಿದ್ದುಪಡಿ ತರಲು ಮುಂದಾಗಿದೆ. ಇದರಲ್ಲಿ ಮುಸ್ಲಿಂ ಸಮುದಾಯ ಒಪ್ಪಿಕೊಳ್ಳಲು ಸಾಧ್ಯವಿಲ್ಲದ ಹಲವಾರು ಅಂಶಗಳಿವೆ ಎಂದು ವಿವಿಧ ಪಕ್ಷಗಳಿಂದ ವಿರೋಧ ವ್ಯಕ್ತವಾಗಿದೆ. ಇದಕ್ಕಾಗಿ ಈ ಮಸೂದೆಯಲ್ಲಿ ಬದಲಾವಣೆ ತರಲು ಬಿಜೆಪಿ ಸಂಸದ ಜಗದಾಂಬಿಕಾ ಪಾಲ್ ನೇತೃತ್ವದಲ್ಲಿ ಒಂದು ಜಂಟಿ ಸಂಸದೀಯ ಸಮಿತಿಯು ನೇಮಕವಾಗಿದೆ. ರಾಜ್ಯದಲ್ಲಿ ವಕ್ಫ್ ವಿವಾದ ಮುನ್ನೆಲೆಗೆ ಬರುತ್ತಿದ್ದಂತೆ, ಇವರು ಕರ್ನಾಟಕಕ್ಕೆ ದೌಡಾಯಿಸಿ, ನೋಟಿಸ್ ಪಡೆದ ರೈತರನ್ನು ಭೇಟಿ ಮಾಡಿದರು. ಈ ತಿದ್ದುಪಡಿ ಮಸೂದೆಯ ಬಗ್ಗೆ ಜನರಲ್ಲಿ ಸಮ್ಮತಿ ಮೂಡಿಸಲು, ವಕ್ಫ್ ಜನರ ಮೇಲೆ ದಬ್ಬಾಳಿಕೆ ನಡೆಸುತ್ತಿದೆ ಎಂದು ಚಿತ್ರಿಸಲು ಬಿಜೆಪಿ ಈ ಅವಕಾಶವನ್ನು ಬಳಸಿಕೊಂಡಿತೇ?

ಅಥವಾ, ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯನವರ ವಿರುದ್ಧ ಹೋರಾಟ ಮಾಡುತ್ತಿದ್ದ ಬಿಜೆಪಿಗರನ್ನು ದಿಕ್ಕು ತಪ್ಪಿಸಲು ಇದು ಕಾಂಗ್ರೆಸ್ ಹೆಣೆದ ಜಾಲವೇ? ಇವೆಲ್ಲ ಉತ್ತರ ಸಿಗದ ಪ್ರಶ್ನೆಗಳು.

### ಹಾಗಾದರೆ ಪರಿಹಾರ ಏನು?

ಶ್ರೀಮಂತ ಪ್ರಭಾವಿ ವ್ಯಕ್ತಿಗಳು ವಕ್ಫ್ ಆಸ್ತಿಗಳನ್ನು ಒತ್ತುವರಿ ಮಾಡಿಕೊಂಡಿರುವುದಕ್ಕೂ ಮತ್ತು ಸಣ್ಣ ರೈತರು ಹಲವಾರು ತಲೆಮಾರುಗಳಿಂದ ಉಳುಮೆ ಮಾಡಿಕೊಂಡು ಅದೇ ಭೂಮಿಯನ್ನೇ ನಂಬಿ ಬದುಕುವುದಕ್ಕೂ ವ್ಯತ್ಯಾಸವಿದೆ. ಎರಡು ಸಂದರ್ಭಗಳನ್ನು ಪ್ರತ್ಯೇಕವಾಗಿ ನೋಡಬೇಕಾಗುತ್ತದೆ. ಇಂತಹ ಉದಾಹರಣೆಗಳು ದೇವಾಲಯ, ಮಠ, ಚರ್ಚುಗಳ ಆಸ್ತಿಯ ವಿಷಯದಲ್ಲೂ ಬರುತ್ತದೆ. ಹಾಗಾಗಿ ಈ ಕುರಿತು ಸರ್ಕಾರಗಳು ಸಂಬಂಧಪಟ್ಟ ಎಲ್ಲರನ್ನೂ ತೊಡಗಿಸಿಕೊಂಡು ಸೂಕ್ತ ನಿಲುವನ್ನು ತಳೆಯಬೇಕು. ಧಾರ್ಮಿಕ ಹಕ್ಕುಗಳು ಮತ್ತು ರೈತರ ಹಕ್ಕುಗಳು ಪರಸ್ಪರ ಎದುರಾಳಿ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ಪ್ರಜ್ಞಾವಂತ ಜನರ ಮೇಲಿದೆ.

## 90 ಗಂಟೆಗಳ ದುಡಿಮೆ

...3ನೇ ಪುಟದಿಂದ

ಬಂಡವಾಳಶಾಹಿ ವ್ಯವಸ್ಥೆಯ ಸಮರ್ಥಕರು, ಈಗ ತಮ್ಮ ವಕ್ತಾರರನ್ನು ಬಿಟ್ಟು, ಅವರ ಮೂಲಕ ಮಾತನಾಡಿಸುತ್ತಿದ್ದಾರೆ. ಸಾಯುವ ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ಇಲ್ಲ ಸಲ್ಲದ ಭರವಸೆ ಮೂಡಿಸಲು ಮುಂದಾಗಿದ್ದಾರೆ. ನೌಕರರನ್ನು ನಿಷ್ಠಾವಂತ ವೇತನ ಗುಲಾಮರನ್ನಾಗಿ ಮಾಡಿ, ತಮ್ಮ ಲಾಭವನ್ನು ಹಿಗ್ಗಿಸಿಕೊಳ್ಳುವುದಕ್ಕೆ, ದೈತ್ಯ ಏಕಸ್ವಾಮ್ಯಾಧಿಪತಿಗಳು 90 ಗಂಟೆಯ ದುಡಿಮೆಯ ಕುರಿತು ಬೋಧನೆ ಮಾಡುತ್ತಿದ್ದಾರೆ.

ದೇಶವು ಅಭಿವೃದ್ಧಿಯಾಗುವುದೆಂದರೆ, ಜನರ ಜೀವನ ಮಟ್ಟದಲ್ಲಿ ನಿರಂತರ ಸುಧಾರಣೆಯಾಗುವುದು. ಮಿಲಿಯಾಂತರ ಜನರು ಹಾಗೂ ಅತಿ ಶ್ರೀಮಂತರ ನಡುವೆ ಕಂದರವು ಇನ್ನಷ್ಟು ದೊಡ್ಡದಾಗುವುದಲ್ಲ. ಸಮಾಜವಾದಿ ಸೋವಿಯತ್ ದೇಶದಲ್ಲಿ ದುಡಿಮೆಯ ಅವಧಿಯನ್ನು ಕ್ರಮೇಣವಾಗಿ 8 ರಿಂದ 6 ಗಂಟೆಗಳಿಗೆ ಇಳಿಸಲಾಯಿತು. ಇದನ್ನು 5 ಗಂಟೆಗಳಿಗೆ ಇಳಿಸುವ ಯೋಜನೆ ಕೂಡ ಇತ್ತು. ಈ ಮೂಲಕ ನೌಕರರಿಗೆ ತಮ್ಮ ಮನೆಯವರು, ಸ್ನೇಹಿತರು, ನೆರೆಹೊರೆಯವರೊಂದಿಗೆ ಬೆರೆಯಲು, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ, ಬೌದ್ಧಿಕ ಚರ್ಚೆಗಳಲ್ಲಿ ಭಾಗವಹಿಸಿ, ಆನಂದಿಸಲು ಸಾಕಷ್ಟು ಸಮಯಾವಕಾಶ ದೊರೆಯುತ್ತಿತ್ತು. ನಾರಾಯಣಮೂರ್ತಿ, ಸುಬ್ರಹ್ಮಣ್ಯಂ ಮತ್ತವರ ಸ್ನೇಹಿತರಿಗೆ ಒಂದು ವಿಷಯ ಚೆನ್ನಾಗಿಯೇ ತಿಳಿದಿದೆ. ಅದೇನೆಂದರೆ, ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟು ನಿತ್ಯ, ನಿರಂತರ. ಸಾಯುವ ಸ್ಥಿತಿಯಲ್ಲಿರುವ ಈ ಬಂಡವಾಳಶಾಹಿ ವ್ಯವಸ್ಥೆಯು ಭ್ರಷ್ಟ, ಅಮಾನವೀಯ, ಜನ ವಿರೋಧಿ, ನೌಕರ ವಿರೋಧಿಯಾಗಿದೆ. ಹಾಗಾಗಿ ಸಹಾನುಭೂತಿಯುಳ್ಳ ಬಂಡವಾಳಶಾಹಿ ವ್ಯವಸ್ಥೆ ಅಥವಾ ಮಾನವೀಯ ಮುಖವುಳ್ಳ ಬಂಡವಾಳಶಾಹಿ ವ್ಯವಸ್ಥೆಯ ಕುರಿತ ಮಾತುಗಳು ಈ ಕಾರ್ಪೋರೇಟ್ ಮಾಲೀಕರಿಂದ ಬರುತ್ತಿವೆ. ಚಿಂತೆ ಬೇಡ, ಮಹಾನುಭಾವರೇ, ತಮ್ಮ ಗುರಿಯೊಂದಿಗೆ ತಾವು ಮುಂದುವರೆಯಿರಿ!! ದುಡಿಯುವ ಜನರಿಗೆ ತಮ್ಮ ಕುತಂತ್ರಗಳ ಬಗ್ಗೆ ಚೆನ್ನಾಗಿಯೇ ಅರಿವಿದೆ!!

## ಮೂರು ಕರಾಳ ಕೃಷಿ ಕಾಯ್ದೆಗಳ ಹಿಂಬಾಗಿಲ ಪ್ರವೇಶ

...6ನೇ ಪುಟದಿಂದ

ಕಾಳಸಂತೆಕೋರರು, ಖಾಸಗಿ ವ್ಯಕ್ತಿಗಳು, ಮಧ್ಯವರ್ತಿಗಳು ಇಂದು ಕೃಷಿ ಉತ್ಪನ್ನಗಳ ಖರೀದಿಯನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡಿದ್ದಾರೆ. ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ಬೆಲೆಗೆ ತಮ್ಮ ಉತ್ಪನ್ನಗಳನ್ನು ಮಾರುವಂತೆ ಬಲವಂತದ ಪರಿಸ್ಥಿತಿಯನ್ನು ನಿರ್ಮಿಸುತ್ತಾರೆ. ಇದರಿಂದ ರೈತರು ತೀವ್ರ ನಷ್ಟ ಅನುಭವಿಸುತ್ತಾರೆ. ತಮ್ಮ ಬೆಳೆಗಳನ್ನು ಮಾರಾಟ ಮಾಡಿ ಸ್ವಲ್ಪವಾದರೂ ವರಮಾನ ಪಡೆಯುವುದಿರಲಿ, ತಮ್ಮ ಬೆಳೆಯನ್ನು ಬೆಳೆಯುವ ಖರ್ಚನ್ನೂ ಪಡೆಯದೆ ರೈತರು, ವ್ಯವಸಾಯ ಮಾಡಲು ಮುಖ್ಯವಾಗಿ ಖಾಸಗಿ ವ್ಯಕ್ತಿಗಳಲ್ಲಿ ಮಾಡಿದ ಸಾಲವನ್ನು ತೀರಿಸಲಾಗದೆ ಒದ್ದಾಡುತ್ತಿದ್ದಾರೆ. ಮೈಮೇಲೆ ಏರುತ್ತಿರುವ ಸಾಲದ ಹೊರೆಯನ್ನು ತಡೆದುಕೊಳ್ಳಲಾಗದೆ, ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

### ರೈತರ ಜೀವ ಹಿಂಡುತ್ತಿರುವ ಬಿರುಸಿನ ಖಾಸಗೀಕರಣ

ಈ ರೀತಿಯ ಕೃಷಿ ಮಾರುಕಟ್ಟೆ ವ್ಯವಸ್ಥೆಯ ಖಾಸಗೀಕರಣವನ್ನು ರೈತರು ಬಯಸುತ್ತಿದ್ದಾರೆಯೇ? ಇಲ್ಲ, ಇದು ಅವರ ಜೀವನವನ್ನು ಹಾಳು ಮಾಡುತ್ತದೆ ಎಂಬುದು ಅವರಿಗೆ ಗೊತ್ತು. ಕೃಷಿಗೆ ಬಳಸುವ ಒಳಸುರಿಗಳಾದ ರಸಗೊಬ್ಬರ, ಬೀಜ, ಕೀಟನಾಶಕ ಇತ್ಯಾದಿಗಳ ಖಾಸಗೀಕರಣದಿಂದಾಗಿ ಅವುಗಳ ಬೆಲೆಗಳು ಮುಗಿಲು ಮುಟ್ಟಿವೆ. ಅತೀವ ಲಾಭದ ಆಸೆಬುರುಕರಾದ ದೈತ್ಯ ಕಂಪೆನಿಗಳು ಹಾಗೂ ಬಹುರಾಷ್ಟ್ರೀಯ ಸಂಘಟನೆಗಳು ತಮ್ಮ ಸ್ನೇಹಿತರಲ್ಲ, ಶತ್ರುಗಳು ಎಂಬುದನ್ನು ರೈತರು ಅರಿತಿದ್ದಾರೆ. ರೈತರ ರಕ್ತದ ಕಡೆ ಹನಿಯನ್ನೂ ಬಿಡದೆ ಸಂಪೂರ್ಣವಾಗಿ ಹಿಂಡಿ ಲಾಭ ಹೆಚ್ಚಿಸಿಕೊಳ್ಳುವುದು ಅವರ ಗುರಿಯಾಗಿದೆ. ಆದ್ದರಿಂದಲೇ ರೈತರು ಖಾಸಗೀಕರಣವನ್ನು ಅಡಿಯಿಂದ ಮುಡಿಯವರೆಗೂ ವಿರೋಧಿಸುತ್ತಿದ್ದಾರೆ.

### ಹೊಸ ಎಪಿಎಂಸಿ ಕಾಯ್ದೆಯಲ್ಲಿ ರೈತ ವಿರೋಧಿ ಅಂಶಗಳು, ಹೊಸ ಕರಡು ನೀತಿಯ ಕೆಲವೊಂದು ಮುಖ್ಯ ಅಂಶಗಳು

ನಾವು ಈಗಾಗಲೇ ಬಂಡವಾಳಿಗರು, ಪುಡಾರಿಗಳು ಹಾಗು ಅಧಿಕಾರಿಗಳ ದುಷ್ಟ ಜಾಲದಿಂದ ರೈತರು ನ್ಯಾಯಬದ್ಧ ಬೆಲೆಯಿಂದ ವಂಚಿತರಾಗಿದ್ದಾರೆ ಎನ್ನುವುದನ್ನು ಗಮನಿಸಿದ್ದೇವೆ. ಯಾವುದೇ ಸರ್ಕಾರಕ್ಕೆ ರೈತರಿಗೆ ನ್ಯಾಯಯುತ ಬೆಲೆಯನ್ನು ಕೊಡಬೇಕೆಂದಿದ್ದರೆ, ಈ ದುಷ್ಟಜಾಲವನ್ನು ಒಡೆಯಬೇಕು. ಆದರೆ ಆ ದುಷ್ಟಜಾಲವನ್ನು ಒಡೆಯುವುದಿರಲಿ, ಕರಡು ನೀತಿಯು ಈ ಜಾಲವನ್ನು ಮತ್ತಷ್ಟು ಬಲಪಡಿಸುವ ಸಲಹೆ ನೀಡಿದೆ.

ಎರಡನೆಯದಾಗಿ, ಜಮೀನಿನಿಂದ ದಾಸ್ತಾನು, ದಾಸ್ತಾನಿನಿಂದ ಆಹಾರ ಸಂಸ್ಕರಣಾ ಕೇಂದ್ರದವರೆಗೆ ಇಡೀ ಆಹಾರ ಸರಪಳಿ ವ್ಯವಸ್ಥೆಯಲ್ಲಿ ಖಾಸಗಿ ಹಾಗೂ ಸಾರ್ವಜನಿಕ ಸಹಬಾಗಿತ್ವವನ್ನು ತರಬೇಕೆಂದು ಸುಧಾರಣೆ ಹೇಳುತ್ತಿದೆ. ಇದರ ಸಲಹೆಯ ಪ್ರಕಾರ, ಇಡೀ ಆಹಾರ ವಸ್ತುಗಳ ವ್ಯಾಪಾರವನ್ನು ಬಹುರಾಷ್ಟ್ರೀಯ ಹಾಗೂ ಕಾರ್ಪೋರೇಟ್ ಸಂಸ್ಥೆಗಳ ಕಪಿಮುಷ್ಟಿಗೆ ಕೊಡುವುದು. ಅದರರ್ಥ ಇಡೀ ಆಹಾರ ಸರಪಳಿಯನ್ನು ಅತ್ಯಧಿಕ ಲಾಭದ ಆಧಾರದ ಮೇಲೆ ನಡೆಸುವುದು. ಇದು ರೈತರನ್ನು ಮತ್ತಷ್ಟು ಕಷ್ಟಕ್ಕೆ ದೂಡುತ್ತದೆ ಹಾಗೂ ಚಿಲ್ಲರೆ ವ್ಯಾಪಾರದಲ್ಲಿ ಕೃಷಿ ಉತ್ಪನ್ನಗಳ ಬೆಲೆಗಳನ್ನು ಹೆಚ್ಚಿಸುತ್ತದೆ.

ಮೂರನೆಯದಾಗಿ, ಈ ಸುಧಾರಣೆಗಳು ಸಂಪೂರ್ಣ ಅನಿಯಂತ್ರಣವನ್ನು ಪ್ರತಿಪಾದಿಸುತ್ತವೆ. ಅಂದರೆ ಉತ್ಪಾದನೆ, ಸಂಸ್ಕರಣೆ ಮತ್ತು ಮಾರುಕಟ್ಟೆಯ ಮೇಲೆ ಖಾಸಗಿ ವಲಯದ, ವಿಶಿಷ್ಟವಾಗಿ ದೈತ್ಯ ಕೃಷಿ–ಕಾರ್ಪೊರೇಟ್ ಕಂಪೆನಿಗಳ ಪ್ರಾಬಲ್ಯವನ್ನು ಸ್ಥಾಪಿಸಲು ಅನುವು ಮಾಡಿಕೊಡುವುದನ್ನು ಪ್ರಸ್ತಾಪಿಸುತ್ತಿವೆ. ಕಾರ್ಪೊರೇಟ್ ಕೈಗಾರಿಕೆಗಳಿಗೆ, ವ್ಯಾಪಾರಕ್ಕೆ ಮತ್ತು ರಫ್ತಿಗೆ ಅಗತ್ಯವಾದ ಕಚ್ಚಾ ಪದಾರ್ಥಗಳನ್ನು ನೇರವಾಗಿ ಹಾಗೂ ಸರಾಗವಾಗಿ ಸರಬರಾಜು ಮಾಡುವ ಕೆಲಸವನ್ನು ಮಧ್ಯವರ್ತಿ ಹಾಗೂ ವ್ಯಾಪಾರಿಗಳನ್ನು ಬದಿಗೊತ್ತಿ ರೈತ ಉತ್ಪಾದಕರ ಸಂಘಕ್ಕೆ (ಎಫ್‌ಪಿಓ) ಕೊಡಬೇಕೆಂದು ಹೇಳುತ್ತದೆ. ಇದು ಮತ್ತೆ ಬೃಹತ್ ಸಂಸ್ಥೆಗಳು ತಮ್ಮ ಹಿಡಿತವನ್ನು ಬಿಗಿಗೊಳಿಸಲು, ಸಣ್ಣ ಉತ್ಪಾದಕರನ್ನು ಮತ್ತಷ್ಟು ಕೆಳಕ್ಕೆ ತಳ್ಳಲು ಮತ್ತು ಬೆಳೆಗಾರರ ಚೌಕಾಸಿ ಶಕ್ತಿಯನ್ನು ದುರ್ಬಲಗೊಳಿಸಲು ಸಹಾಯ ಮಾಡುತ್ತದೆ; ಅಲ್ಲದೆ ಸಣ್ಣ ವ್ಯಾಪಾರಿಗಳನ್ನು, ಅಂಗಡಿ ಮಾಲೀಕರನ್ನು ಮಾರುಕಟ್ಟೆಯಿಂದ ಹೊರಹಾಕುತ್ತದೆ. ಅವರು ದಿವಾಳಿಯಾಗುತ್ತಾರೆ.

ನಾಲ್ಕನೆಯದಾಗಿ, ಈ ಕರಡು, ಬಂಡವಾಳಶಾಹಿ ಮಾರುಕಟ್ಟೆಯಲ್ಲಿ ಭವಿಷ್ಯದ ವ್ಯಾಪಾರದ ಬಗ್ಗೆ ಊಹಾಪೋಹ ಮಾಡುವುದರಲ್ಲಿ ರೈತ ಉತ್ಪಾದಕ ಸಂಘಗಳು (ಎಫ್‌ಪಿಓ) ಭಾಗವಹಿಸಬೇಕೆಂದು ಬಯಸುತ್ತದೆ. ಇದು ಸ್ಥಳಿಯ ಕೃಷಿ ಮತ್ತು ಆಹಾರ ಮಾರುಕಟ್ಟೆಯ ಮೇಲೆ ಸಂಪೂರ್ಣವಾಗಿ ಕಾರ್ಪೊರೇಟ್ ಹಿಡಿತವನ್ನು ಸಾಧಿಸಲು ಅವಕಾಶ ಮಾಡಿಕೊಡುವುದಷ್ಟೇ ಅಲ್ಲದೆ, ಕೃಷಿ ಉತ್ಪನ್ನಗಳ ಬೆಲೆಗಳನ್ನು ತಿರುಚಲು ಅವಕಾಶ ಮಾಡಿ ಕೊಡುತ್ತದೆ. ಇದರ ಪರಿಣಾಮ ತೀವ್ರವಾಗಿರುತ್ತದೆ: ರೈತರಿಗೆ ಸಿಗಬೇಕಾಗಿರುವ ಸರಿಯಾದ ಬೆಲೆಯು ಸಿಗದೆ ಸಾಲ ವಿಪರೀತವಾಗಿ ನಿರ್ಗತಿಕ ರೈತರು ಪರ್ಯಾಯ ಜೀವನೋಪಾಯ ಹುಡುಕಿಕೊಂಡು ವಲಸೆ ಹೋಗುವುದು, ತೀವ್ರ ನಿರುದ್ಯೋಗ ಸಮಸ್ಯೆ, ನಂತರದಲ್ಲಿ ಹೆಚ್ಚುವ ಆತ್ಮಹತ್ಯೆ. ಇದರಿಂದ ರೈತರ, ಕೃಷಿ ಕಾರ್ಮಿಕರ ಹಾಗೂ ಇತರ ವಿಭಾಗದ ಜನರ ಸಮಸ್ಯೆಗಳು ಮತ್ತಷ್ಟು ಉಲ್ಬಣಗೊಳ್ಳುತ್ತವೆ.

ಐದನೆಯದಾಗಿ, "ಮಾರುಕಟ್ಟೆ ಮತ್ತು ಬೆಲೆ ಅಪಾಯದ ನಿಯಂತ್ರಣಕ್ಕೆ ಒಪ್ಪಂದ ಕೃಷಿಯನ್ನು ಸಾಧನ"ವಾಗಿ ಬಳಸುವ ಪ್ರಸ್ತಾಪವಿದೆ. (ಅಧ್ಯಾಯ 10.1.1)

ಇದೇನು ಹೊಸ ವಿಷಯವಲ್ಲ. ಬಂಡವಾಳಶಾಹಿಯ ಜಾಗತೀಕರಣ ನೀತಿಯನ್ನು ಪ್ರಾರಂಭಿಸಿದಾಗಿನಿಂದಲೂ ನಮ್ಮ ದೇಶದಲ್ಲಿ ಒಪ್ಪಂದ ಕೃಷಿ ಜಾರಿಗೊಳಿಸಲು ಬಹುರಾಷ್ಟ್ರೀಯ ಕಂಪನಿಗಳು ಪ್ರಯತ್ನಿಸುತ್ತಲೇ ಬಂದಿವೆ. ಆದರೆ ಮೂಲ ಪ್ರಶ್ನೆಯೆಂದರೆ, ಯಾರ ನಡುವೆ ಒಪ್ಪಂದ? ಒಂದು ಕಡೆ, ಭಾರಿ ಹಣಕಾಸಿನ ಶಕ್ತಿಯನ್ನು ಹೊಂದಿರುವ ಮತ್ತು ಸರ್ಕಾರಿ ಯಂತ್ರದ ಮೇಲೆ ತಮ್ಮ ಹಿಡಿತವನ್ನು ಸಾಧಿಸಿರುವ ದೈತ್ಯ ಬಹುರಾಷ್ಟ್ರೀಯ ಕಂಪನಿಗಳು; ಮತ್ತೊಂದೆಡೆ, ಬಡ ಹಾಗೂ ಅಸಹಾಯಕ ರೈತರು. ಈ ಇಬ್ಬರೂ ಅಸಮಾನರು. ಇಬ್ಬರು ಅಸಮಾನರ ನಡುವೆ ಒಪ್ಪಂದ ಏರ್ಪಟ್ಟರೆ ಖಂಡಿವಾಗಿಯೂ ಬಲಾಢ್ಯರಾದ ಬಹುರಾಷ್ಟ್ರೀಯ ಕಂಪೆನಿಗಳ ಕಪಿಮುಷ್ಟಿಗೆ ಸಿಕ್ಕಿದ ರೈತರು ನಲುಗಿ ಹೋಗುತ್ತಾರೆ ಅವರಿಗೆ ನ್ಯಾಯ ಸಿಕ್ಕುವುದಿಲ್ಲ.

ಆರನೆಯದಾಗಿ, ಸುಧಾರಣೆಯ ಪ್ರಸ್ತಾಪವು, "ಫಸಲ್ ಬಿಮಾ ಯೋಜನೆಯ ರೀತಿಯಲ್ಲೇ ಬೆಲೆ ವಿಮಾ ಯೋಜನೆ" ಇರುತ್ತದೆ ಎಂದು ಘೋಷಿಸಿದೆ. ಆದರೆ ಇಲ್ಲಿಯವರೆಗೂ ಬಹಳ ಪ್ರಚಾರ ಪಡೆಯುತ್ತಿರುವ ಫಸಲ್ ಬಿಮಾ ಯೋಜನೆಯ ಉಪಯೋಗವನ್ನು ಪಡೆದವರು ಯಾರು? ವಾಸ್ತವವೇನೆಂದರೆ ಇದು ಖಾಸಗಿ ವಿಮಾ ಕಂಪೆನಿಗಳಿಗೆ ಹಬ್ಬದೂಟ; ಅವುಗಳು ಇದರ ಪ್ರೀಮಿಯಂ ಲಾಭದಲ್ಲಿ ಶೇ.97 ರಷ್ಟನ್ನು ನುಂಗಿವೆ; ಇಲ್ಲಿಯವರೆಗೂ ಕೇವಲ ಶೇ.6.61 ಮಾತ್ರ ಪರಿಹಾರವಾಗಿ ಕೊಟ್ಟಿದೆ. ಕೆಲವೊಂದು ಕಡೆಗಳಲ್ಲಿ ರೈತರಿಗೆ ದೊರಕಿರುವ ಮೊತ್ತ ಕೇವಲ ರೂ.12 ಮಾತ್ರ. ಹೀಗಿರುವಾಗ ಹೊಸದಾಗಿ ಘೋಷಿಸಿರುವ ಮತ್ತೊಂದು ಯೋಜನೆ ಏನಾದರೂ ಬೇರೆಯಾಗಿರುತ್ತದೆಯೇ?

ಹೀಗೆ ಈಗ ಜಾರಿಯಾಗುತ್ತಿರುವ ಕರಡು ಕೃಷಿ ಮಾರುಕಟ್ಟೆಯ ಹೊಸ ನೀತಿಯ ರೂಪು ರೇಷೆಯು ಇಡೀ ಕೃಷಿ ಮಾರುಕಟ್ಟೆ ವ್ಯವಸ್ಥೆಯನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಬಹುರಾಷ್ಟ್ರೀಯ ಕಂಪೆನಿಗಳಿಗೆ ಅನುಕೂಲ ಮಾಡಿಕೊಡುವ ನೀಲಿನಕ್ಷೆಯಾಗಿದೆ. ಇದು ಅತ್ಯಂತ ಅಪಾಯಕಾರಿಯಾಗಿದ್ದು, ದೇಶದ ಸಮಸ್ತ ರೈತರನ್ನು ದಿವಾಳಿಯ ಅಂಚಿಗೆ ಕೊಡೊಯ್ಯುತ್ತದೆ. ಈ ಬಗ್ಗೆ ಸಮಸ್ತ ಜನತೆ ಜಾಗೃತರಾಗಬೇಕು. ಆದ್ದರಿಂದ ಈ ಕಾಯ್ದೆಯ ವಿಧ್ವಂಸಕ ಪರಿಣಾಮಗಳ ಕುರಿತು ಹಾಗೂ ರೈತರ ಮುಂದಿರುವ ಜವಾಬ್ದಾರಿಗಳ ಬಗ್ಗೆ ನಾವು ವಿವರವಾಗಿ ಚರ್ಚಿಸಬೇಕಾಗಿದೆ. ಅದನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ...

## ಲಾಲ್ ಸಲಾಮ್ ಕಾಮ್ರೇಡ್ ಎಚ್.ಆರ್.ಚಂದ್ರಶೇಖರ್




ನಮ್ಮ ಪಕ್ಷ ಎಸ್‌ಯುಸಿಐ(ಸಿ) ಸದಸ್ಯರಾಗಿದ್ದು, 4 ದಶಕಗಳ ಕಾಲ ಪಕ್ಷದ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದ ಕಾ. ಎಚ್.ಆರ್.ಚಂದ್ರಶೇಖರ್, 2024ರ ಡಿಸೆಂಬರ್ 16 ರಂದು ನಿಧನರಾಗಿದ್ದು, ಅವರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡುತ್ತಿರುವವರು, ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯರಾದ ಕಾ. ಕೆ.ರಾಧಾಕೃಷ್ಣ. ವೇದಿಕೆಯಲ್ಲಿ, ಎಡದಿಂದ: ಕಾ. ಎಂ.ಎನ್ ಶ್ರೀರಾಮ್, ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ, ಕಾ. ಕೆ.ಉಮಾ, ರಾಜ್ಯ ಕಾರ್ಯದರ್ಶಿ, ಕಾ. ವಿ.ಜ್ಞಾನಮೂರ್ತಿ, ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ

## 'ಬಳ್ಳಾರಿ ನಾಗರಿಕ ಹೋರಾಟ ಸಮಿತಿ'ಯಿಂದ ಪ್ರತಿಭಟನೆ




ಜನವರಿ 28ರಂದು ದುರುಗಮ್ಮನ ಗುಡಿ ಕೆಳ ಸೇತುವೆಯನ್ನು ಜನ ಸಂಚಾರಕ್ಕೆ ಈ ಕೂಡಲೆ ತೆರವುಗೊಳಿಸಲು ಆಗ್ರಹಿಸಿ ಬಳ್ಳಾರಿ ನಾಗರಿಕ ಹೋರಾಟ ಸಮಿತಿ (BNHS) ವತಿಯಿಂದ ಈಡಿಗ ಹಾಸ್ಟೆಲ್ ಬಳಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

## ಹವಾಮಾನ ಶೃಂಗಸಭೆ

...6ನೇ ಪುಟದಿಂದ

ಅಭಿವೃದ್ಧಿ ಹೊಂದಿದ, ಅಭಿವೃದ್ಧಿಶೀಲ ದೇಶಗಳ ನಡುವಿನ ತೀವ್ರವಾದ ತಿಕ್ಕಾಟಕ್ಕೆ ಸಾಕ್ಷಿಯಾಯಿತು. ಮಾನವ ನಾಗರಿಕತೆಯ ಅಳಿವು ಉಳಿವಿನ ಪ್ರಶ್ನೆಯು ಜಾಗತಿಕ ಏಕಸ್ವಾಮ್ಯ ತಿಮಿಂಗಿಲಗಳಿಗೆ, ಬಹು ರಾಷ್ಟ್ರೀಯ ಕಂಪನಿಗಳಿಗೆ ಯಾವುದೇ ಕಾಳಜಿಯ ವಿಷಯವಾಗಿರಲಿಲ್ಲ. ಹವಾಮಾನ ಕಾರ್ಯಕರ್ತರ ಪ್ರಕಾರ, ಸಿಓಪಿ 29 ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಿಗೆ ಅಥವಾ ಅಭಿವೃದ್ಧಿಶೀಲ ದೇಶಗಳಿಗೆ ಮಾರಕವಾಗಿದೆ. ಸಣ್ಣ ದ್ವೀಪ ದೇಶಗಳಿಗೆ ವಾರ್ಷಿಕವಾಗಿ 39 ಬಿಲಿಯನ್ ಡಾಲರ್ ಹಾಗೂ ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಿಗೆ 220 ಬಿಲಿಯನ್ ಡಾಲರ್‌ನ ಪರಿಹಾರಗಳು ನೀಡಬೇಕಾಗಿದ್ದು ಅವುಗಳು ಕಡೆಗಣಿಸಲ್ಪಟ್ಟಿವೆ. ಹವಾಮಾನ ಬದಲಾವಣೆಗೆ ಕಡಿಮೆ ಪ್ರಮಾಣದಲ್ಲಿ ಕಾರಣವಾಗಿರುವ ಈ ದೇಶಗಳು ಹೆಚ್ಚು ಭಾರವನ್ನು ಹೊರುತ್ತಿವೆ, ಆದರೆ ಅಮೆರಿಕಾದಂತಹ ಶ್ರೀಮಂತ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಪಳೆಯುಳಿಕೆ ಇಂಧನಗಳ ಬಳಕೆ ಕಡಿಮೆ ಮಾಡುವುದಾಗಲಿ ಅಥವಾ ಕಡಿಮೆ ಅಭಿವೃದ್ಧಿ ಹೊಂದಿದ ಅಥವಾ ಅಭಿವೃದ್ಧಿಶೀಲ ರಾಷ್ಟ್ರಗಳು ಇಂಗಾಲದ ಹೊರ ಸೂಸುವಿಕೆಯನ್ನು ಕಡಿಮೆ ಮಾಡಲು ಆರ್ಥಿಕ ನೆರವನ್ನು ನೀಡುವುದಾಗಲಿ ಮಾಡದೆ ತಮ್ಮ ಲಾಭ ಹೆಚ್ಚಿಸಿಕೊಳ್ಳುವ ದುರಾಸೆಯನ್ನು ಕಾಪಾಡಿಕೊಂಡಿವೆ. ಈ ಪರಿಹಾರ ನೀಡುವುದು ಕೇವಲ ಆರ್ಥಿಕ ಪ್ರಶ್ನೆಯಲ್ಲ, ಇದು ಈ ಹವಾಮಾನ ಬಿಕ್ಕಟ್ಟಿಗೆ ಕಾರಣವಾಗಿರುವ ತಮ್ಮ ನಡವಳಿಕೆಗೆ ಈ ಶ್ರೀಮಂತ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಜವಾಬ್ದಾರಿ ಹೊರುವುದಾಗಿದೆ.

ಈ ಹವಾಮಾನ ಬಿಕ್ಕಟ್ಟಿನಿಂದ ಅತ್ಯಂತ ಸಂಕಷ್ಟಕ್ಕೊಳಪಡುವವರು ಬಡಜನರು. ಶ್ರೀಮಂತರು ಹವಾ ನಿಯಂತ್ರಣ ಮುಂತಾದ ರಕ್ಷಣಾ ಕ್ರಮಗಳನ್ನು ಕೈಗೊಳ್ಳುತ್ತಾರೆ. ಇಂಗಾಲದ ಹೊರ ಸೂಸುವಿಕೆಗೆ ಪ್ರಮುಖ ಕಾರಣವಾಗಿರುವ ಪ್ರವಾಸೋದ್ಯಮವನ್ನು ಮರೆಯಲಾಗದು. ಇದರ ಪರಿಣಾಮಗಳ ನಿಯಂತ್ರಣದ ಕುರಿತು ಶೃಂಗಸಭೆ ದನಿಯೆತ್ತಿಲ್ಲ. ಪ್ರವಾಸೋದ್ಯಮ ಅಗ್ಗದ ವಿಮಾನಯಾನ, ವೈಭೋಗದ ಪ್ರಯಾಣವನ್ನು ಬೇಡುತ್ತದೆ. ಲಾಭಕಾಗಿ ಇತರ ಪ್ರಮುಖ ಅಂಶಗಳನ್ನು ಕಡೆಗಣಿಸುತ್ತದೆ. ಬಿಲಿಯಾಂತರ ರೂಪಾಯಿಗಳ ಅಲ್ಪಾವಧಿಯ ಆರ್ಥಿಕ ಲಾಭಕ್ಕಾಗಿ ಪ್ರವಾಸೋದ್ಯಮವು ಸೃಷ್ಟಿಸುತ್ತಿರುವ ದೀರ್ಘಕಾಲೀನ ಪರಿಸರದ ನಷ್ಟ, ನಗರಗಳ ಅಧಿಕ ಜನಸಂಖ್ಯೆ, ಕುಸಿಯುತ್ತಿರುವ ಸಂಪನ್ಮೂಲಗಳು ಮತ್ತು ಮಲಿನವಾದ ಪರಿಸರ ವ್ಯವಸ್ಥೆಗಳು ಇತ್ಯಾದಿ ಎಲ್ಲವೂ ಲೆಕ್ಕಕ್ಕೆ ಇಲ್ಲದಂತಾಗಿದೆ. ಪ್ರವಾಸೋದ್ಯಮವನ್ನು ಒಳಗೊಂಡಂತೆ ಕೈಗಾರಿಕೆಗಳಿಗೆ ನಿಯಂತ್ರಣವಿಲ್ಲದಿದ್ದರೆ ಜಾಗತಿಕ ತಾಪಮಾನವನ್ನು ತಡೆಗಟ್ಟುವುದು ಮೇಲ್ನೋಟದ ಕ್ರಮಗಳಾಗುತ್ತವೆ.

### ಮಾನವ ನಿರ್ಮಿತ ಹವಾಮಾನ ಬಿಕಟ್ಟಿನ ಕುರಿತು ಮಾರ್ಕ್ಸ್‌ವಾದಿ ವಿಶ್ಲೇಷಣೆ

ಲಾಭಕ್ಕಾಗಿ ಮನುಷ್ಯನ ಶ್ರಮದ ಮೇಲೆ ನಿಂತಿರುವ ಬಂಡವಾಳವಾದವು ನೈಸರ್ಗಿಕ ಸಂಪನ್ಮೂಲಗಳ ಶೋಷಣೆಗೆ ಎಡೆ ಮಾಡಿಕೊಡುತ್ತದೆ. ಕಾರ್ಬನ್ ಮಾರುಕಟ್ಟೆಗೆ ಮೊರೆ ಹೋಗಿರುವುದು ಇದಕ್ಕೆ ಜ್ವಲಂತ ಉದಾಹರಣೆ. ನೈಸರ್ಗಿಕ ವಿಷಯವನ್ನು ಕೆಲವೊಂದು ವ್ಯವಹಾರಗಳಿಗೆ ಇಳಿಸಲಾಗಿದೆ. ಶ್ರೀಮಂತ ರಾಷ್ಟ್ರಗಳು ಜಾಗತಿಕ ಸಂಪನ್ಮೂಲಗಳ ಮೇಲೆ ಸವಾರಿ ಮಾಡುತ್ತಿವೆ, ಬಡ ರಾಷ್ಟ್ರಗಳು ಅದರ ಬೆಲೆ ತೆರುತ್ತಿವೆ. ಸಿಓಪಿ 29 ಮತ್ತೊಂದು ಸುಳ್ಳು ಭರವಸೆಯನ್ನೇ ನೀಡಿದೆ. ಪರಿಸರ ಬಿಕ್ಕಟ್ಟನ್ನು ಪರಿಹರಿಸಬೇಕು ಎಂದರೆ ನಾವು ಬಂಡವಾಳಶಾಹಿ ವ್ಯವಸ್ಥೆಯ ಆಂತರಿಕ ದ್ವಂದ್ವಗಳ ವಿರುದ್ಧ ನೇರವಾಗಿ ಹೋರಾಡಬೇಕಾಗಿದೆ. ಆದರೆ ಅಲ್ಲಿಯವರೆಗೂ ಸಾಮ್ರಾಜ್ಯಶಾಹಿ ರಾಷ್ಟ್ರಗಳು ತಮ್ಮ ಆಟವನ್ನು ಮುಂದುವರೆಸುತ್ತಲೇ ಇರುತ್ತವೆ.

# ಲೆನಿನ್ ಮರಣ ವಾರ್ಷಿಕ ಸಂದರ್ಭದಲ್ಲಿ ಅವರ ಬೋಧನೆಗಳ ನೆನಕೆ

## ನವೆಂಬರ್ ಮಹಾಕ್ರಾಂತಿಯ 3ನೇ ವರ್ಷಾಚರಣೆಯ ಸಂದರ್ಭದಲ್ಲಿ ಮಹಾನ್ ಲೆನಿನ್ ನುಡಿಗಳು

(ನವೆಂಬರ್ 6, 1920)



ಜನನ: 22 ಏಪ್ರಿಲ್ 1870 ಮರಣ: 21 ಜನವರಿ 1924

ಕಾಮ್ರೇಡರೇ,

ನಾವಿಂದು ನಮ್ಮ ಕಾರ್ಮಿಕರ ಹೋರಾಟದ ಆ ದಿನಗಳನ್ನು ಮತ್ತು ನಮ್ಮ ಕ್ರಾಂತಿಕಾರಿ ಸಾಧನೆಗಳನ್ನು ಸ್ಮರಿಸಲು ಇಲ್ಲಿ ಸೇರಿದ್ದೇವೆ. ನಾವು ಇಂದು ನಮ್ಮ ಗೆಲುವನ್ನು ಸಂಭ್ರಮಿಸಬಹುದು. ಬದುಕಿನ ಅಸದೃಶ ಸಂಕಷ್ಟಗಳಿದ್ದರೂ, ನಮ್ಮ ವೈರಿಗಳ ಅಸದೃಶ ಯತ್ನಗಳಿದ್ದರೂ ಸಹ ಕೂಡ ನಾವು ಗೆದ್ದಿದ್ದೇವೆ. ನಾವು ಕಳೆದ ಮೂರು ವರ್ಷಗಳಿಂದ ಗೆಲುವು ಸಾಧಿಸುತ್ತಾ ಬಂದಿದ್ದೇವೆ... ಈಗ ಮೂರು ವರ್ಷಗಳ ನಂತರ, ನಾವು ಹಿಂದಿಗಿಂತಲೂ ಅಪರಿಮಿತ ಶಕ್ತಿಯನ್ನು ಪಡೆದುಕೊಂಡಿದ್ದೇವೆ; ಆದರೆ ಬಂಡವಾಳಶಾಹಿಯೂ ಸಹ ಇನ್ನೂ ತುಂಬಾ ಬಲಿತ್ತಿದ್ದಾರೆ;...ಅವರು ನಮಗಿಂತ ಹೆಚ್ಚು ಬಲಿಷ್ಟರಾಗಿದ್ದರೂ ಸಹ ನಾವು ಗೆದ್ದಿದ್ದೇವೆ ಎಂದು ಹೇಳಬಹುದು. ಬಂಡವಾಳಶಾಹಿಯನ್ನು ವಿಘಟಿಸಲು ನಾವು ನಮ್ಮೆಲ್ಲಾ ಶಕ್ತಿಯನ್ನು ಆ ದಿಕ್ಕಿನೆಡೆಗೆ ತಿರುಗಿಸಿದ್ದೇವೆ ಮತ್ತು ಆ ವಿಷಯದಲ್ಲಿ ನಮ್ಮ ಶ್ರಮ ವ್ಯರ್ಥವಾಗಲಿಲ್ಲ....ಸಾಮ್ರಾಜ್ಯಶಾಹಿ ಯುದ್ಧದ(ಮೊದಲ ವಿಶ್ವಯುದ್ಧ–ಸಂ.) ನಂತರ ಎಲ್ಲವೂ ಹಿಂದಿನಂತೆ ನಡೆಯುವುದಿಲ್ಲ, ಏಕೆಂದರೆ, ಹಳೆಯ ಆರ್ಥಿಕ ಹಾಗೂ ಕಾನೂನಾತ್ಮಕ ಸಂಬಂಧಗಳೂ ಸೇರಿದಂತೆ ಹಿಂದಿನ ವ್ಯವಸ್ಥೆಯ ಆಧಾರದಂತಿದ್ದ ಬದುಕಿನ ಎಲ್ಲ ಪರಿಸ್ಥಿತಿಯನ್ನು ಆ ಸಾಮ್ರಾಜ್ಯಶಾಹಿ ಯುದ್ಧವು ನಾಶ ಮಾಡಿತ್ತು. ಅಂತಹ ವಿನಾಶವನ್ನು ತರಲು ಆ ಸಾಮ್ರಾಜ್ಯಶಾಹಿ ಯುದ್ಧವು ನಮಗಿಂತ ಸಾವಿರ ಪಟ್ಟು ಹೆಚ್ಚು ಪ್ರಚಾರ ಮಾಡಿರುವ ಇಂತಹ ಸಮಯದಲ್ಲಿ, ಯಾವುದೇ ಒಂದು ದೇಶದಲ್ಲಿ ಕಾರ್ಮಿಕವರ್ಗವು ಅಂತಿಮವಾಗಿ ವಿಜಯಕ್ಕಾಗಿ ಸಿದ್ಧವಾದ್ದದೇ ಆದರೆ, ಅದು ವಿಶ್ವ ಬಂಡವಾಳವಾದದ ಶಕ್ತಿಯನ್ನು ಕುಗ್ಗಿಸಲು ಬೇಕಾದಷ್ಟಾಗುತ್ತದೆ.

ಈಗ, ನಾವು ಯಾವಾಗಲೂ ವಿಷಯಗಳನ್ನು ಅಂತರರಾಷ್ಟ್ರೀಯ ದೃಷ್ಟಿಕೋನದಿಂದ ನೋಡುವಂತೆ ಪರಿಸ್ಥಿತಿಯ ಮೇಲೆ ಕಣ್ಣು ಹಾಯಿಸಿದಾಗ ಮತ್ತು ಸೋವಿಯತ್ ಒಕ್ಕೂಟದ ವಿರುದ್ಧ ನಡೆದಿರುವ ಯುದ್ಧಗಳ ಇತಿಹಾಸವನ್ನು ಪರಿಶೀಲಿಸಿದಾಗ, ಬೋಲ್ಷೆವಿಕರನ್ನು ಹಿಂಸಿಸಿದ್ದ ಮತ್ತು ಕೊಂದು ಹಾಕಿದ್ದ ನಮ್ಮ ಗಡಿಭಾಗಗಳಲ್ಲಿನ ಎಲ್ಲಾ ಸಣ್ಣಪುಟ್ಟ ಬೂರ್ಜ್ವಾ ಪ್ರಭುತ್ವಗಳ ಜೊತೆಯಲ್ಲಿ ನಾವು ಹೆಚ್ಚುಕಡಿಮೆ ಶಾಂತಿ ಸಾಧಿಸಿರುವುದನ್ನು ಗಮನಿಸಬಹುದು. ಈ ಪ್ರಭುತ್ವಗಳು 'ಅಂಟಾಂಟ್'(ಮೈತ್ರಿಕೂಟ – ಫ್ರೆಂಚ್ ಭಾಷೆಯಲ್ಲಿ 'ಟ್ರಿಪಲ್ ಎಂಟೆಟೆ– ಫ್ರಾನ್ಸ್, ರಷ್ಯಾ ಮತ್ತು ಇಂಗ್ಲೆಂಡ್ ಕೂಟ)ದ ಚಾಕರಿ ಮಾಡುವ ಗುಲಾಮರು ಮತ್ತು ಅವು ಸೋವಿಯತ್ ರಷ್ಯಾ ದೇಶವನ್ನು ಹಾಳುಗೆಡವಬೇಕು, ಅದನ್ನು ನಾಶ ಮಾಡಬೇಕು ಎಂದು ಬಯಸುತ್ತವೆ; ಹಾಗಿದ್ದರೂ ಸಹ – ಅಂಟಾಂಟ್‌ನ ಆಶಯಗಳಿಗೆ ವಿರುದ್ಧವಾಗಿ ನಾವು ಅವುಗಳೊಂದಿಗೆ ಶಾಂತಿ ಒಪ್ಪಂದವನ್ನು ಮಾಡಿಕೊಂಡಿದ್ದೇವೆ. ಬ್ರಿಟನ್, ಫ್ರಾನ್ಸ್ ಮತ್ತು ಅಮೆರಿಕಾಗಳಂತಹ ಮೂರು ದೈತ್ಯ ಶಕ್ತಿಗಳಿಗೆ ನಮ್ಮ ವಿರುದ್ಧ ಒಂದಾಗಲು ಸಾಧ್ಯವಾಗಲಿಲ್ಲ ಮತ್ತು ತಮ್ಮ ಜಂಟಿ ಶಕ್ತಿಯೊಂದಿಗೆ ನಮ್ಮ ವಿರುದ್ಧ ಆರಂಭಿಸಿದ ಯುದ್ಧದಲ್ಲಿ ಅವು ಸೋತುಹೋದವು. ಹಾಗಾಗಲು ಕಾರಣವೆಂದರೆ, ಆ ದೇಶಗಳಲ್ಲಿ ಆರ್ಥಿಕತೆ ಹಾಗೂ ಜನಜೀವನವನ್ನು ಕಡೆಗಣಿಸಲಾಗಿದೆ;...ಆಳ್ವಿಕ ವರ್ಗವು ಮರಣಾಸನ್ನವಾಗಿದೆ. ಆ ವರ್ಗವು ಒಂದು ಕೋಟಿ ಜನರನ್ನು ಸಾಮ್ರಾಜ್ಯಶಾಹಿ ಯುದ್ಧ ಮತ್ತು ವಿನಾಶಕ್ಕೆ ತಳ್ಳಿದೆ. ಯಾವ ಘನಂದಾರಿ ಉದ್ದೇಶಕ್ಕಾಗಿ! ಕೈಬೆರಳೆಣಿಕೆಯಷ್ಟು ಬಂಡವಾಳಿಗರ ನಡುವೆ ವಿಶ್ವವನ್ನು ಹಂಚಿಕೆ ಮಾಡಿಕೊಳ್ಳುವ ಉದ್ದೇಶಕ್ಕಾಗಿ.... ಹಾಗೆ ಮಾಡುತ್ತಾ ಅದು ತನ್ನ ಅಂತ್ಯವನ್ನು ಸಮೀಪಿಸಿದೆ ಮತ್ತು ತನ್ನ ಅಸ್ತಿತ್ವದ ಅಡಿಪಾಯವನ್ನೇ ಶಿಥಿಲಗೊಳಿಸಿಕೊಂಡಿದೆ. ಆಳ್ವಿಕ ವರ್ಗವು ಮಿಲಿಟರಿ ದೃಷ್ಟಿಯಿಂದ ಅದೆಷ್ಟೇ ಬಲಿಷ್ಠವಾಗಿ ಕಾಣಿಸಿದರೂ ಸಹ ಅದು ಆಂತರಿಕವಾಗಿ ನಿರ್ವೀರ್ಯವೇ....ಅದೆಷ್ಟೇ ಶ್ರೀಮಂತ ಮತ್ತು ಬಲಶಾಲಿ ವರ್ಗವಾಗಿದ್ದರೂ ಕೂಡ ಅದರ ಕಥೆ ಮುಗಿದಿದೆ; ಆದರೆ ನಮ್ಮದು ವಿಜಯದತ್ತ ಮುನ್ನುಗ್ಗುತ್ತಿರುವ ವರ್ಗ. ನಮ್ಮ ವೈರಿಗಳಿಗಿಂತ ನಾವು ದುರ್ಬಲರಾಗಿದ್ದರೂ ಕೂಡ ನಾವು ಕಳೆದ ಮೂರು ವರ್ಷಗಳಿಂದ ಗೆಲ್ಲುತ್ತಾ ಸಾಗಿಬಂದಿದ್ದೇವೆ ಮತ್ತು ಸ್ವಲ್ಪವೂ ಅಹಂಕಾರವಿಲ್ಲದೆ ನಾವು ಗೆದ್ದಿದ್ದೇವೆಂದು ಹೇಳಿಕೊಳ್ಳುವ ಹಕ್ಕು ನಮಗಿದೆ.

...ನಾವು ಗೆಲುವು ಸಾಧಿಸಲು ಕಾರಣವೇನೆಂದರೆ, ನಮಗಿಂತ ಬಲಿಷ್ಠವಾದ ಪ್ರಭುತ್ವಗಳ ವಿರುದ್ಧ ನಾವೆದ್ದು ನಿಲ್ಲಲು ಸಾಧ್ಯವಾದ್ದದ್ದರಿಂದ.....ನಮ್ಮದು ಅಂತರರಾಷ್ಟ್ರೀಯ ಕಾರ್ಯ ಮತ್ತು ಅತ್ಯಂತ ಶ್ರೀಮಂತ ಹಾಗೂ ಅತ್ಯಂತ ನಾಗರಿಕ ಎನ್ನಿಸಿಕೊಂಡಿರುವ ಪ್ರತಿಯೊಂದು ನೆಲದಲ್ಲೂ ಕ್ರಾಂತಿಯಾಗುವವರೆಗೆ ನಮ್ಮ ಗೆಲುವು ಅರ್ಧಂಬರ್ಧದಷ್ಟೇ, ಬಹುಶಃ ಇನ್ನೂ ಕಡಿಮೆಯೇ. ಆದರೆ ವಿಶ್ವ ಬಂಡವಾಳಶಾಹಿಯ ಗೆಲುವಿನ ಸಂಭವಗಳು ನಗಣ್ಯ ಎನ್ನುವುದು ನಮಗೆ ಗೊತ್ತಿದೆ ಮತ್ತು ನಮ್ಮ ಮಿಲಿಟರಿ ಶಕ್ತಿಗಳು ಬೇರೆ ಯಾವುದೇ ದೇಶಕ್ಕಿಂತ ಹೆಚ್ಚು ಬಲಿಷ್ಠವಾಗಿವೆ ಎನ್ನುವುದೂ ಸಹ ನಮಗೆ ಅರಿವಿದೆ.....ಅಷ್ಟಾದರೂ ಸಹ ಅಪಾಯವಿನ್ನೂ ಕೊನೆಯಾಗಿಲ್ಲ;..........ಒಂದು ಅಥವಾ ಹಲವಾರು ಮುಂದುವರೆದ ರಾಷ್ಟ್ರಗಳಲ್ಲಿ ಕ್ರಾಂತಿಯಾಗುವವರೆಗೂ ಅಪಾಯವಿದ್ದೇ ಇರುತ್ತದೆ.

....ಕಮ್ಯುನಿಸಂ ಬೆಳೆದಿದೆ, ಬಲಿಷ್ಠವಾಗಿ ಬೆಳೆಯುತ್ತಿದೆ ಮತ್ತು ಎಲ್ಲಾ ಮುಂದುವರೆದ ರಾಷ್ಟ್ರಗಳಲ್ಲಿ ಪಕ್ಷಗಳನ್ನು ಸೃಷ್ಟಿಸಿದೆ. ಇದೇ ಸಂದರ್ಭದಲ್ಲಿ, ಅಂತರರಾಷ್ಟ್ರೀಯ ಕ್ರಾಂತಿಯ ಹಿತಾಸಕ್ತಿಯು ಕೆಲವು ಚಿಕ್ಕರಾಷ್ಟ್ರಗಳಲ್ಲಿ ಸೋಲನ್ನು ಅನುಭವಿಸಿದೆ; ಅಲ್ಲಿ ಜರ್ಮನಿಯಂತಹ ದೈತ್ಯ ಭಕ್ಷಕರಿಂದ ಚಳುವಳಿಯನ್ನು ಹತ್ತಿಕ್ಕಲು ಸಹಾಯ ಬಂದಾಗ ಫಿನ್ನಿಶ್ ಕ್ರಾಂತಿಯನ್ನು ಸದೆಬಡಿಯಲಾಯಿತು ಅಥವಾ ಬ್ರಿಟನ್, ಫ್ರಾನ್ಸ್ ಮತ್ತು ಆಸ್ಟ್ರಿಯಾದಂತಹ ಬಂಡವಾಳವಾದದ ದೈತ್ಯರ ಬೆಂಬಲ ಹಂಗೆರಿಯಲ್ಲಿ ಕ್ರಾಂತಿಯನ್ನು ಹೊಸೆದು ಹಾಕಿತು. ......ಅವರು ಹಾಗೆ ಮಾಡುತ್ತಾ ತಮ್ಮ ದೇಶದೊಳಗೆ ಕ್ರಾಂತಿಯ ಶಕ್ತಿಗಳನ್ನು ಸಾವಿರ ಪಟ್ಟು ಹೆಚ್ಚಿಸಿದ್ದಾರೆ. ಇಂದು ಅವರು ಹೋರಾಟದಿಂದ ದುರ್ಬಲರಾಗಲು ಮುಖ್ಯ ಕಾರಣವೆಂದರೆ, ಅವರಿಗೆ ತಮ್ಮ ಹಿಂದಿರುವ ದಳಗಳ ಬೆಂಬಲ ದೊರಕುವುದು ಖಚಿತವಿಲ್ಲ; ಏಕೆಂದರೆ, ಎಲ್ಲಾ ದೇಶಗಳಲ್ಲೂ ಕಾರ್ಮಿಕರು ಮತ್ತು ರೈತರು ನಮ್ಮ ವಿರುದ್ಧ ಹೋರಾಡಲು ಬಯಸುವುದಿಲ್ಲ. ನಮ್ಮ ದೇಶದಲ್ಲಷ್ಟೇ ಅಲ್ಲ, ಧೀರ ನಾವಿಕರು ಎಲ್ಲೆಡೆ ಮುಂದೆ ಬಂದಿದ್ದಾರೆ...........ಆದ್ದರಿಂದಲೇ, ಅಂಟಾಂಟ್ ದುರ್ಬಲವಾಗಿದೆ; ಅಂತರರಾಷ್ಟ್ರೀಯ ಸ್ತರದಲ್ಲಿ ನಮ್ಮ ನೆಲವು ಸುರಕ್ಷಿತವಾಗಿದೆ ಎಂದು ನಾವು ವಿಶ್ವಾಸದಿಂದ ಹೇಳುತ್ತೇವೆ.

> **"ಮಧ್ಯಯುಗಕ್ಕೆ ಹೋಲಿಸಿದರೆ, ಬೂರ್ಜ್ವಾ ಜನತಂತ್ರವು ಒಂದು ಮಹಾನ್ ಐತಿಹಾಸಿಕ ಮುನ್ನಡೆಯೇನೋ ಸರಿ; ಆದರೆ ಈ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅದು ಯಾವಾಗಲೂ ಸೀಮಿತವಾಗಿರುವ, ಮೊಟಕುಗೊಂಡ, ತೋರಿಕೆ ಮತ್ತು ಸೋಗಲಾಡಿತನದಿಂದ ಕೂಡಿರುವಂತಹದ್ದಾಗಿರುತ್ತದೆ ಹಾಗೂ ಅದು ಹಾಗೆಯೇ ಇರುವುದು. ಮತ್ತದು, ಶ್ರೀಮಂತರಿಗೆ ಸ್ವರ್ಗವನ್ನು ಕಲ್ಪಿಸುವ ಮತ್ತು ಶೋಷಿತರು, ಬಡವರನ್ನು ಬಲೆಯೊಳಗೆ ಸಿಲುಕಿಸುತ್ತಾ ವಂಚನೆಗೀಡು ಮಾಡುವಂತಹದ್ದಾಗಿದೆ."**
>
> – ಲೆನಿನ್
>
> (ಕಾರ್ಮಿಕ ವರ್ಗದ ಕ್ರಾಂತಿ ಮತ್ತು ತತ್ವಭ್ರಷ್ಟ ಕೌಟ್ಸ್ಕಿ ಕೃತಿಯಿಂದ)

...ಕಾಮ್ರೇಡ್ಸ್, ನಮ್ಮ ವಿಜಯವಿನ್ನೂ ಪೂರ್ಣವಾಗಿಲ್ಲ. ನಾವು ಅರ್ಧಕ್ಕಿಂತಲೂ ಕಡಿಮೆ ಸಾಧಿಸಿದ್ದೇವೆ. ನಿಜ, ನಾವು ಮಹಾವಿಜಯವನ್ನು ಕೈವಶ ಮಾಡಿಕೊಂಡಿದ್ದೇವೆ, ಅದಕ್ಕೆ ರಷ್ಯಾದ ಕಾರ್ಮಿಕರ ಮತ್ತು ರೈತರ ಬಲಿದಾನ ಹಾಗೂ ರಣೋತ್ಸಾಹ ಕಾರಣ; ಕಾರ್ಮಿಕರು ಮತ್ತು ರೈತರ ಬೆಂಬಲವನ್ನು ಇನ್ನೂ ಪಡೆಯದಿದ್ದ ಸಮಯದಲ್ಲೂ ಸಹ ಜ಼ಾರ್ ಅರಸೊತ್ತಿಗೆಯ ವಿರುದ್ಧ ಹೋರಾಡಿ ಜೀವ ತೆತ್ತ ವ್ಯಕ್ತಿಗಳನ್ನು ರಷ್ಯಾ ಸೃಷ್ಟಿಸಿದೆ ಎಂದು ತೋರಿಸಿದ್ದಾಗಿದೆ. ರಷ್ಯಾ ಅಂತಹ ಧೀರರನ್ನು ಜನಸಮೂಹದ ಒಳಗಿನಿಂದ ಸೃಷ್ಟಿಸುತ್ತದೆ, ನೂರಾರು, ಸಾವಿರಾರು ಸಂಖ್ಯೆಯಲ್ಲಿ ಅಂತಹ ಧೀರರನ್ನು ಸೃಷ್ಟಿ ಮಾಡಲು ಸಾಧ್ಯ, ಅದು ಸಂಭವಿಸಿದಾಗ ಬಂಡವಾಳವಾದದ ಕಥೆ ಮುಗಿದಂತೆ ಎಂದು ಆಗ ನಾವು ಹೇಳಿದ್ದು ಸರಿಯಾಗಿದೆ. ನಮ್ಮ ಗೆಲುವಿಗೆ ಮುಖ್ಯ ಕಾರಣವೆಂದರೆ, ಯುದ್ಧಭೂಮಿಯಲ್ಲಿ ತಮ್ಮ ಜೀವವನ್ನು ಪಣಕ್ಕಿಟ್ಟು ನಮ್ಮ ಕೆಂಪು ಸೈನ್ಯದ ಧೀರರು ಹಾಗೂ ಕಾರ್ಮಿಕರು ಮತ್ತು ರೈತರು ಅದರಲ್ಲೂ ನಿರ್ದಿಷ್ಟವಾಗಿ ಕೈಗಾರಿಕಾ ಕಾರ್ಮಿಕರು ತೋರಿಸಿದ ಅಸಮಾನ ಸ್ಥೈರ್ಯ. ಬಂಡವಾಳಶಾಹಿ ಗುಲಾಮಗಿರಿಯ ಆರಂಭದ ದಿನಗಳಲ್ಲಿ ಕಾರ್ಮಿಕರು ಅನುಭವಿಸಿದ್ದಕ್ಕಿಂತ ಹೆಚ್ಚು ಸಂಕಷ್ಟಗಳನ್ನು ಅವರಲ್ಲಿ ಹೆಚ್ಚಿನವರು ಈ ಮೂರು ವರ್ಷಗಳಲ್ಲಿ ಅನುಭವಿಸಿದ್ದಾರೆ. ಅತ್ಯಂತ ಶ್ರಮವಹಿಸಿ ಗಳಿಸಿದ ಅಧಿಕಾರ ಉಳಿಸಿಕೊಳ್ಳುವ ಸಲುವಾಗಿ ಅವರು ಚಳಿ, ಹಸಿವು ಮತ್ತು ಸಂಕಟಗಳನ್ನು ಸಹಿಸಿಕೊಂಡರು. ಅವರ ಸ್ಥೈರ್ಯ ಮತ್ತು ಧೀರತ್ವವನ್ನು ಅಭಿನಂದಿಸಲೇಬೇಕು, ಈ ಹೊತ್ತಿನಲ್ಲಿ, ಯಾವ ಯುದ್ಧಕೋರ ಶಕ್ತಿಗಳೂ ಹೊಂದಿರದ, ಗಟ್ಟಿಯಾದ ಏಕಮೇವಾದ್ವಿತೀಯ 'ಹಿಂಬದಿ ಶಕ್ತಿ' ಇದು ಎಂದು ಸಾಬೀತು ಅವರು ಮಾಡಿದ್ದಾರೆ. ಅದರಿಂದಲೇ ನಾವು ಅಷ್ಟು ಗಟ್ಟಿ ಮತ್ತು ದೃಢಚಿತ್ತದವರಾಗಿದ್ದೇವೆ, ಆದರೆ ಅಂಟಾಂಟ್ ನಮ್ಮ ಕಣ್ಣ ಮುಂದೆಯೇ ನಿರಂತರವಾಗಿ ವಿಘಟನೆಯಾಗುತ್ತಿದೆ.

ಆದರೆ, ಈ ಉತ್ಸಾಹ ಮತ್ತು ಧೀರತ್ವಗಳು ಕ್ರಾಂತಿಯ ಧ್ಯೇಯವನ್ನು ಪೂರ್ಣಗೊಳಿಸಿ ಸಂಪೂರ್ಣ ಗೆಲುವಿಗೆ ನಮ್ಮನ್ನು ಕೊಂಡೊಯ್ಯಲು ಸಾಕಾಗುವುದಿಲ್ಲ. ವೈರಿಯು ನಮ್ಮ ಮೇಲೆ ಹಾರಿ ಬಿದ್ದಾಗ ಮತ್ತು ನಮ್ಮ ಕುತ್ತಿಗೆ ಹಿಸುಕುವಾಗ ನಾವು ತಿರುಗಿ ಬೀಳಲು ಈ ಗುಣಗಳು ಸಾಕಾಗುತ್ತವೆ. ರಕ್ತಸಿಕ್ತ ಸಂಘರ್ಷದಲ್ಲಿ ಗೆಲುವನ್ನು ಸಾಧಿಸಲು ಅವು ಸಾಕಾಗುತ್ತವೆ, ಆದರೆ, ಅಂತಿಮ ಗುರಿಯನ್ನು ಮುಟ್ಟಲು ಅವು ಸಾಕಾಗುವುದಿಲ್ಲ. ಏಕೆಂದರೆ, ನಾವೀಗ ನಮ್ಮ ಮಹಾತ್ಕಾರ್ಯದ ದ್ವಿತೀಯಾರ್ಧವನ್ನು, ಅಂದರೆ, ಮುಖ್ಯವಾದ ಮತ್ತು ಅತ್ಯಂತ ಕಷ್ಟಕರವಾದ ಭಾಗವನ್ನು ಎದುರಿಸುತ್ತಿದ್ದೇವೆ. ಇಂದಿನ ನಮ್ಮ ವಿಜಯವನ್ನು, ನಾವು ಗೆಲ್ಲುತ್ತೇವೆ ಎನ್ನುವ ನಮ್ಮ ವಿಶ್ವಾಸವನ್ನು, ಕೆಲಸದ ದ್ವಿತೀಯಾರ್ಧದಲ್ಲಿ ನಿರ್ಣಾಯಕ ಗೆಲುವನ್ನು ಸಾಧಿಸಲು ನಮ್ಮನ್ನು ಸಮರ್ಥರಾಗಿಸುವಂತಹ ಗುಣದಿಂದ ತುಂಬಿಸಬೇಕು. ನಮ್ಮ ಕಾರ್ಯದ ದ್ವಿತೀಯಾರ್ಧವನ್ನು ಪೂರ್ಣಗೊಳಿಸುವುದರಲ್ಲಿ ಕೇವಲ ಉತ್ಸಾಹ, ಕೇವಲ ಸಾವನ್ನು ಎದುರಿಸಲು ಕಾರ್ಮಿಕರು ಮತ್ತು ರೈತರು ಸಿದ್ಧರಾಗಿರುವುದು ಸಾಕಾಗುವುದಿಲ್ಲ; ಏಕೆಂದರೆ, ದ್ವಿತೀಯಾರ್ಧದ ಕಾರ್ಯವು ಅತ್ಯಂತ ಕಷ್ಟಕರವಾದ ರಚನಾತ್ಮಕ ಹಾಗೂ ಸೃಜನಶೀಲ ಕೆಲಸ. ನಾವು ಬಂಡವಾಳವಾದದಿಂದ ಹಾಳಾದ ಸಂಸ್ಕೃತಿಯನ್ನಷ್ಟೇ, ನಾಶಗೊಂಡ ಕಾರ್ಖಾನೆಗಳನ್ನಷ್ಟೇ, ಹತಾಶ ಬುದ್ಧಿಜೀವಿ ವರ್ಗವನ್ನಷ್ಟೇ ಪಾರಂಪರ್ಯವಾಗಿ ಪಡೆದಿಲ್ಲ; ನಾವು ಒಮ್ಮತವಿಲ್ಲದ ಹಾಗೂ ಹಿಂದುಳಿದಿರುವ ವ್ಯಕ್ತಿಗತ ಹಿಡುವಳಿದಾರರ ಸಮೂಹವನ್ನು ಪಡೆದುಕೊಂಡಿದ್ದೇವೆ; ನಾವು ಅನುಭವದ ಕೊರತೆಯನ್ನು, ಒಟ್ಟಾಗಿ ದುಡಿಯುವ ಸ್ಫೂರ್ತಿ ಇಲ್ಲದ್ದನ್ನು ಹಾಗೂ ಹಿಂದಿನದನ್ನು, ಹಳತಾಗಿರುವುದನ್ನು ಸಮಾಧಿ ಮಾಡಬೇಕೆಂಬ ತಿಳುವಳಿಕೆಗಳ ಅಭಾವವನ್ನೂ ಪಡೆದುಕೊಂಡಿದ್ದೇವೆ.

...ನಮ್ಮ ಆರ್ಥಿಕ ಬದುಕು ಛಿದ್ರಛಿದ್ರವಾಗುವುದನ್ನು ಕೊನೆಗಾಣಿಸಲು ಇಂದಿನ ಈ ಹುರುಪನ್ನು ಬಹಳ ಕಾಲದವರೆಗೂ ಕಾರ್ಯರೂಪಕ್ಕಿಳಿಸುತ್ತಲೇ ಇರಬೇಕು ಎನ್ನುವುದನ್ನು ಮರೆಯಬಾರದು. ನಾವು ಹಳೆಯ ರೀತಿ–ನೀತಿಗಳಿಗೆ ಮರಳಲು ಸಾಧ್ಯವಿಲ್ಲ. ಶೋಷಕರ ಆಳ್ವಿಕೆಯನ್ನು ಕಿತ್ತೊಗೆಯುವುದರ ಮೂಲಕ ನಾವು ಈಗಾಗಲೇ ನಾವು ಮಾಡಬೇಕಾದ ಬಹುದೊಡ್ಡ ಕೆಲಸವನ್ನು ಮುಗಿಸಿದ್ದೇವೆ. ಈಗ ನಾವು ಒಟ್ಟಾಗಿ ಕೆಲಸ ಮಾಡಲು ಎಲ್ಲಾ ದುಡಿಯುವ ಪುರುಷರು ಮತ್ತು ಮಹಿಳೆಯರನ್ನು ಒಂದುಗೂಡಿಸಬೇಕು.

...ನಮ್ಮ ಕೆಲಸವು ಕಳೆದ ವರ್ಷಕ್ಕಿಂತ ಇಂದು ಉತ್ತಮವಾಗಿ ಮುಂದುವರೆಯುತ್ತಿರುವುದನ್ನು ನಾನು ನೋಡುತ್ತಿದ್ದೇವೆ. ಎಲ್ಲರಿಗೂ ಬೇಕಾಗುವಷ್ಟು ಆಹಾರ ಒದಗಿಸಲು ಸಾಧ್ಯವಿಲ್ಲ ಮತ್ತು ಹಸಿವು ಹಾಗೂ ಚಳಿಯು ಮನೆ. ಗುಡಿಸಲುಗಳ ಬಾಗಿಲುಗಳನ್ನು ತಟ್ಟುವುದಿಲ್ಲವೆನ್ನುವ ವಿಶ್ವಾಸ ಇನ್ನೂ ನಮಗಿಲ್ಲ....ತೀವ್ರವಾದ ಸಾಮ್ರಾಜ್ಯಶಾಹಿ ಹಾಗೂ ಅಂತರ್ಯುದ್ಧಗಳಾದ ಮೇಲೂ, ಇಂದಿಗೂ ನಮ್ಮ ಉತ್ಪಾದಕತೆಯ ಶಕ್ತಿ ಅಪಾರವಾಗಿಯೇ ಇದೆ ಎಂದು ನಮಗೆ ತಿಳಿದಿದೆ; ಕಾರ್ಮಿಕರು ಹಾಗೂ ರೈತರನ್ನು ಉಪವಾಸದಿಂದಿರಲು ಮತ್ತು ಚಳಿಯಲ್ಲಿ ಅವರು ಸೆಟೆದುಕೊಂಡು ಅಸ್ವಸ್ಥರಾಗಲು ಅವಕಾಶ ನೀಡಬಾರದೆಂದು ನಮಗೆ ಅರಿವಿದೆ;...ಅದನ್ನು ಸಾಧ್ಯಗೊಳಿಸಲು ನಮ್ಮೆಲ್ಲಾ ಸಂಪನ್ಮೂಲಗಳನ್ನು ನಾವು ಕೂಡಿ ಲೆಕ್ಕ ಹಾಕಬೇಕು ಮತ್ತು ಅವುಗಳನ್ನು ಸರಿಯಾಗಿ ವಿತರಿಸಬೇಕು. ಇದನ್ನು ಹೇಗೆ ಮಾಡಬೇಕೆಂದು ನಮಗಿನ್ನೂ ತಿಳಿದಿಲ್ಲ, ಏಕೆಂದರೆ ಬಂಡವಾಳವಾದವು ಪ್ರತಿಯೊಬ್ಬ ಹಿಡುವಳಿದಾರನು ತನ್ನ ಹಿತಾಸಕ್ತಿಯನ್ನು ಹೇಗೆ ಕಾಪಾಡಿಕೊಳ್ಳಬೇಕು ಎನ್ನುವುದನ್ನು, ಹೇಗೆ ಶ್ರೀಮಂತನಾಗಬೇಕು ಎನ್ನುವುದನ್ನು ಮತ್ತು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಹಣವಂತರಲ್ಲಿ ತಾನು ಒಬ್ಬನಾಗುವುದು ಹೇಗೆ ಎಂದು ಯೋಚಿಸುವುದನ್ನು ಕಲಿಸಿದೆ; ಆದರೆ, ಒಂದು ನಿರ್ದಿಷ್ಟ ವಿಚಾರಕ್ಕಾಗಿ ಸಮಾನವಾಗಿ ಹೋರಾಡುವುದು ಹೇಗೆಂದು ಅದು ಯಾರಿಗೂ ಕಲಿಸಿಲ್ಲ. ಆದ್ದರಿಂದಲೇ, ಈಗ ನಾವು ಇನ್ನೊಂದು ತತ್ವದ ದರ್ಶನವನ್ನು ಪಡೆಯಲೇಬೇಕು....ನಮ್ಮ ಸುತ್ತಲೂ ಸಣ್ಣ ಪ್ರಮಾಣದ ಆರ್ಥಿಕತೆಯ ಕೆಲಸಕಾರ್ಯಗಳಿವೆ. ವ್ಯವಹಾರಗಳಿವೆ. ಅವುಗಳ ಜೊತೆಯಲ್ಲಿ, ನಮ್ಮ ಆರ್ಥಿಕ ಬದುಕನ್ನು ಇನ್ನೂ ಸಹ ಮುನ್ನಡೆಸಿಕೊಂಡು ಹೋಗುತ್ತಿರುವುದು ಹಿಂದೆ ದುಡಿಯುತ್ತಿದ್ದ ಅವೇ ಸಣ್ಣ ಘಟಕಗಳು. ಹಿಂದಿನ ರೀತಿಯಲ್ಲಿ ಮತ್ತು ಸ್ವಾರ್ಥದೊಂದಿಗೆ ಕೆಲಸ ಮಾಡುವುದಕ್ಕೆ ಒಗ್ಗಿಹೋದ ಸಣ್ಣಪುಟ್ಟ ಅಧಿಕಾರಿಗಳ ರೀತಿಯ, ಸಣ್ಣಪುಟ್ಟ ಆಡಳಿತಶಾಹಿಗಳ ರೀತಿಯ ಮನೋಭಾವ ನಮ್ಮಲ್ಲಿ ಬೇರುಬಿಟ್ಟಿದೆ ಎನ್ನುವುದನ್ನು ಮರೆಯಬಾರದು. ಅದರ ವಿರುದ್ಧ ಹೋರಾಡುವುದೇ ನಮ್ಮ ಇಂದಿನ ಪ್ರತಿಕ್ಷಣದ ಬಹುಮುಖ್ಯ ಕೆಲಸವಾಗಬೇಕು. ಇಂದಿನ ನಮ್ಮ ಈ ವಿಜಯೋತ್ಸವದ ಸಂಭ್ರಮದ ಸಂದರ್ಭದಲ್ಲಿ, ಸೋವಿಯತ್ ಆಳ್ವಿಕೆಯು ಸ್ಥಾಪನೆಯಾದ ಮೂರನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ, ನಾವು ದುಡಿಮೆಯ ಉತ್ಸಾಹವನ್ನು, ದುಡಿಮೆ ಮಾಡುವ




**ಮಹಾನ್ ನಾಯಕ ಲೆನಿನ್‌ರವರ 101ನೇ ಸ್ಮರಣ ವಾರ್ಷಿಕದಂದು ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಕೆ. ಉಮಾ ರವರಿಂದ ಗೌರವ ಸಮರ್ಪಣೆ (ಬೆಂಗಳೂರಿನಲ್ಲಿ).**

ಇಚ್ಛಾಶಕ್ತಿಯನ್ನು ಮೈಗೂಡಿಸಿಕೊಳ್ಳಬೇಕು. ಅವುಗಳ ಮೇಲೆಯೇ ಕಾರ್ಮಿಕರ ಹಾಗೂ ರೈತರ ಶೀಘ್ರ ವಿಮುಕ್ತಿ, ರಾಷ್ಟ್ರೀಯ ಆರ್ಥಿಕತೆಯ ವಿಮುಕ್ತಿಗಳು ಆಧಾರವಾಗಿವೆ. ಇದರ ಸಾಫಲ್ಯದಲ್ಲಿ ಮಾತ್ರ ನಾವು, ಹಿಂದಿನ ಎಲ್ಲಾ ರಕ್ತಸಿಕ್ತ ಸಮರಗಳಿಗಿಂತ ಹೆಚ್ಚು ಪರಿಣಾಮಕಾರಿಯಾದ ಮತ್ತು ಚಿರಸ್ಥಾಯಿಯಾಗಿ ಉಳಿಯುವಂತಹ ಗೆಲುವನ್ನು ಕಾಣುತ್ತೇವೆ.

# ರಾಜ್ಯದಾದ್ಯಂತ ಮುಂದುವರೆದ 'ಯುವಜನ ಸಂಕಲ್ಪ ಸಮಾವೇಶ'ಗಳು

### ರಾಯಚೂರು

ಜನವರಿ 11ರಂದು ಎಐಡಿವೈಓ ರಾಯಚೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಐಎಂಎ ಸಭಾಂಗಣದಲ್ಲಿ 'ಮಹಿಳೆಯ ಘನತೆ ಮತ್ತು ಮಾನವ ಮೌಲ್ಯ ಉಳಿಸೋಣ' ಎಂಬ ಘೋಷ ವಾಕ್ಯದೊಂದಿಗೆ ರಾಯಚೂರು-ಯಾದಗಿರಿ ವಲಯ ಮಟ್ಟದ ಯುವಜನ ಸಂಕಲ್ಪ ಸಮಾವೇಶವು ನಡೆಯಿತು. ಹಿರಿಯ ಮನೋವೈದ್ಯರಾದ ಡಾ. ಮನೋಹರ್ ವೈ. ಪತ್ತಾರ್, ಇನ್ನೋರ್ವ ಮನೋರೋಗ ತಜ್ಞರಾದ ಡಾ.ಸುನೀಲ್‌ಕುಮಾರ್, ಎಐಡಿವೈಓ ಅಖಿಲ ಭಾರತ ಉಪಾಧ್ಯಕ್ಷ ಡಾ.ಶಶಿಕುಮಾರ್ ಮಾತನಾಡಿದರು.



ಇದಕ್ಕೂ ಮೊದಲು ಎಐಡಿವೈಓ ರಾಜ್ಯ ಅಧ್ಯಕ್ಷರಾದ ಶರಣಪ್ಪ ಉದ್ಬಾಳ್ ಕಾರ್ಯಕ್ರಮದ ಆಶಯದ ಕುರಿತು ಮಾತನಾಡಿದರು. ಎಐಡಿವೈಓ ಜಿಲ್ಲಾಧ್ಯಕ್ಷ ಚನ್ನಬಸವ ಜಾನೇಕಲ್ ಅಧ್ಯಕ್ಷತೆ ವಹಿಸಿದ್ದರು. ಯಾದಗಿರಿ, ರಾಯಚೂರು ಜಿಲ್ಲೆಯ ಹಲವು ಗ್ರಾಮದ ಯುವಕರು, ವಿವಿಧ ಸಂಸ್ಥೆಯ ವಿದ್ಯಾರ್ಥಿ-ಯುವಜನರು ಸೇರಿ ಇನ್ನೂರಕ್ಕೂ ಹೆಚ್ಚು ಜನರು ಸಮಾವೇಶದಲ್ಲಿ ಭಾಗವಹಿಸಿದ್ದರು.

### ಮೈಸೂರು

ಮಹಿಳೆಯ ಘನತೆ ಮತ್ತು ಮಾನವ ಮೌಲ್ಯ ಉಳಿಸಲು ವಲಯ ಮಟ್ಟದ ಯುವಜನರ ಸಂಕಲ್ಪ ಸಮಾವೇಶವನ್ನು ನಗರದ ಗೋವರ್ಧನ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ಮೆಡಿಕಲ್ ಸರ್ವೀಸ್ ಸೆಂಟರ್‌ನ ರಾಜ್ಯಾಧ್ಯಕ್ಷರಾದ ಡಾ:ಸುಧಾ ಕಾಮತ್ ಉದ್ಘಾಟಿಸಿದರು. ಹಿರಿಯ ಮನೋವೈದ್ಯ ಡಾ. ಕಿಶೋರ್, 'ಲೈಂಗಿಕ ಅಪರಾಧಗಳು – ಕಾರಣ ಮತ್ತು ಪರಿಹಾರ' ಎಂಬ ವಿಷಯದ ಕುರಿತು, 'ಇಂದಿನ ಯುವಜನರ ಮನಸ್ಸಿನ ತಲ್ಲಣಗಳು' ಎಂಬ ಎರಡನೇ ಗೋಷ್ಠಿಯನ್ನು ಎಐಡಿವೈಓ ಅಖಿಲ ಭಾರತ ಉಪಾಧ್ಯಕ್ಷ ಡಾ. ಜಿ. ಶಶಿಕುಮಾರ್ ಉದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದ ಕೊನೆಯಲ್ಲಿ ಚೇತೋಹಾರಿ ಸಂವಾದ ಕಾರ್ಯಕ್ರಮ ನಡೆಯಿತು. ಮೈಸೂರು, ಚಾಮರಾಜನಗರ ಸೇರಿದಂತೆ ಸುತ್ತಮುತ್ತಲಿನ ತಾಲೂಕುಗಳಿಂದ ನೂರಾರು ಯುವಜನರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



# ನೇತಾಜಿ ನೆನಪು

**ಈ ಜನವರಿ 23, ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ಕ್ರಾಂತಿಕಾರಿ, ರಾಜಿರಹಿತ ಪಂಥದ ಅಗ್ರಗಣ್ಯ ನಾಯಕ ನೇತಾಜಿ ಸುಭಾಷ್ ಚಂದ್ರ ಬೋಸ್ ರವರ 128ನೇ ಜನ್ಮದಿನ. ಆ ಸಂದರ್ಭದಲ್ಲಿ ಎಐಡಿವೈಓ, ಎಐಡಿಎಸ್‌ಓ, ಎಐಎಂಎಸ್‌ಎಸ್, ಮತ್ತಿತರ ಸಂಘಟನೆಗಳು ರಾಜ್ಯದಾದ್ಯಂತ ವೈವಿಧ್ಯಮಯ ಚಟುವಟಿಕೆಗಳನ್ನು ಹಮ್ಮಿಕೊಂಡು, ಆ ಮೂಲಕ ಜನ್ಮದಿನವನ್ನು ಬಹಳ ಅರ್ಥಪೂರ್ಣವಾಗಿ ಆಚರಿಸಿದವು.**

## 128ನೇ ಜನ್ಮದಿನಾಚರಣೆ


ನೇತಾಜಿ ಜನ್ಮದಿನ ಅಂಗವಾಗಿ ವಾಲಿಬಾಲ್ ಪಂದ್ಯಾವಳಿ, ಎಐಡಿವೈಓ, ಬೆಂಗಳೂರು


ಎಐಡಿವೈಓ, ದಾವಣಗೆರೆ


ಎಐಡಿವೈಓ, ಎಐಡಿಎಸ್‌ಓ, ಕಲಬುರಗಿ


ಎಐಡಿಎಸ್‌ಓ, ತುಮಕೂರು


ಎಐಯುಟಿಯುಸಿ ಸಂಯೋಜಿತ ದಾವಣಗೆರೆ ಬೀದಿಬದಿ ವ್ಯಾಪಾರಸ್ಥರ ಸಂಘದಿಂದ


ಎಐಎಂಎಸ್‌ಎಸ್, ಬೆಂಗಳೂರು

# 'ಹಬ್ ಅಂಡ್ ಸ್ಪೋಕ್' ಮಾದರಿ ಹೆಸರಿನಲ್ಲಿ ಸರ್ಕಾರಿ ಶಾಲೆಗಳ ಬಂದ್-ಎಐಡಿಎಸ್‌ಓ ವಿರೋಧ!

ರಾಜ್ಯ ಸರ್ಕಾರವು 'ಹಬ್ ಅಂಡ್ ಸ್ಪೋಕ್' ಮಾದರಿಯ ಹೆಸರಿನಲ್ಲಿ, ಕಡಿಮೆ ಹಾಜರಾತಿ ಇರುವ ಶಾಲೆಗಳನ್ನು ಇತರ ಶಾಲೆಗಳೊಂದಿಗೆ ಸಂಯೋಜನೆಗೊಳಿಸುವುದಾಗಿ ಘೋಷಿಸಿದೆ. ಈ ಮೂಲಕ ಸರ್ಕಾರವು ರಾಜ್ಯದ ಬಡಮಕ್ಕಳ ಶಿಕ್ಷಣದ ಆಶಾಕಿರಣವಾಗಿರುವ ಶಾಲೆಗಳನ್ನು ಮುಚ್ಚಲು ಮುಂದಾಗಿದೆ. 4ಸಾವಿರಕ್ಕೂ ಹೆಚ್ಚು ಶಾಲೆಗಳನ್ನು ಮುಚ್ಚುತ್ತಿರುವ ಸರ್ಕಾರದ ಈ ನಡೆಗೆ ಎಐಡಿಎಸ್‌ಓ ವಿರೋಧವನ್ನು ವ್ಯಕ್ತಪಡಿಸುತ್ತದೆ. ಹಿಂದೆ ಬಿಜೆಪಿಯು ಆಳಡಿತ ನಡೆಸುತ್ತಿದ್ದಾಗ ಇದೇ ನೆಪವನ್ನು ಮುಂದು ಮಾಡಿ 13,800 ಶಾಲೆಗಳನ್ನು ಮುಚ್ಚಲು ಮುಂದಾಗಿತ್ತು. ಅದರ ವಿರುದ್ಧ,



ಮೈಸೂರಿನಲ್ಲಿ ನಡೆದ ಪ್ರತಿಭಟನೆಯ ನೇತೃತ್ವದಲ್ಲಿ ಎಐಡಿಎಸ್‌ಓ ರಾಜ್ಯ ಉಪಾಧ್ಯಕ್ಷ ಸುಭಾಷ್ ಮತ್ತು ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್

ಎಐಡಿಎಸ್‌ಓ ಕೈಗೊಂಡ ಬೃಹತ್ ಆಂದೋಲನದ ಭಾಗವಾಗಿ 35 ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದ ಸಹಿ ಸಂಗ್ರಹ ಅಭಿಯಾನದ ಮೂಲಕ ಆ ಶಾಲೆಗಳು ಉಳಿದವು. ಆದರೆ, ಈಗ ಮತ್ತೆ ಸರ್ಕಾರಿ ಶಾಲೆಗಳನ್ನು ಮುಚ್ಚುವ ಮಾತು ಬಂದಿದೆ. ಹಾಜರಾತಿ ಕಡಿಮೆ ಇರುವ ಶಾಲೆಗಳನ್ನು ಮುಚ್ಚುವುದು, 'ನೆಗಡಿ ಬಂದ-ರೆ ಮೂಗು ಕತ್ತರಿಸಿದಂತೆ'! ಸರ್ಕಾರವು ತನ್ನ ಈ ಅವೈಜ್ಞಾನಿಕ ಮತ್ತು ಜನವಿರೋಧಿ ನಿರ್ಧಾರವನ್ನು ಕೈಬಿಡಬೇಕು ಹಾಗೂ ಕೂಡಲೇ ಹಾಜರಾತಿ ಕುಸಿದಿರುವ ಶಾಲೆಗಳನ್ನು ಅವಶ್ಯಕ ಸೌಲಭ್ಯಗಳನ್ನು ನೀಡಿ ರಕ್ಷಿಸಬೇಕು.

ಎಐಎಂಎಸ್ಎಸ್ ಸಂಘಟಿತ ಜಿಲ್ಲಾ ಸಮ್ಮೇಳನಗಳು:

# ರಾಜ್ಯದಲ್ಲಿ ಮಹಿಳಾ ಹೋರಾಟಕ್ಕೆ ಒಂದು ಮುಂಚಿಗಿತ!

**ನಮ್ಮ ಮಹಿಳಾ ಮುಂದಳ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ(ಎಐಎಂಎಸ್ಎಸ್), ಸಂಘಟನೆಯನ್ನು ವೈಚಾರಿಕವಾಗಿ ಮತ್ತು ಸಂಘಟನಾತ್ಮಕವಾಗಿ ಉನ್ನತೀಕರಿಸಲು ಕಾಲಕಾಲಕ್ಕೆ ಸಮ್ಮೇಳನಗಳನ್ನು ನಡೆಸುತ್ತದೆ. ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಜಿಲ್ಲಾ ಸಮ್ಮೇಳನಗಳು ಯಶಸ್ವಿಯಾಗಿ ನಡೆದಿವೆ; ರಚನೆಯಾಗಿರುವ ನೂತನ ಜಿಲ್ಲಾ ಸಮಿತಿಗಳು ಸಂಘಟನೆಯನ್ನು ಮುನ್ನಡೆಸುವ, ವಿಸ್ತರಿಸುವ ಜವಾಬ್ದಾರಿ ತೆಗೆದುಕೊಂಡಿವೆ.**




ಬೆಂಗಳೂರು: ಮಾತನಾಡುತ್ತಿರುವವರು: ಎಸ್‌ಯುಸಿಐ(ಸಿ) ಪಕ್ಷದ ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ, ಕಾ. ಎಂ.ಎನ್.ಶ್ರೀ ರಾಮ್. ವೇದಿಕೆಯಲ್ಲಿ, ಎಡದಿಂದ: ಎಐಎಂಎಸ್ಎಸ್ ಜಿಲ್ಲಾಧ್ಯಕ್ಷೆ ಕಾ. ಹೇಮಾವತಿ, ರಾಜ್ಯಾಧ್ಯಕ್ಷೆ ಕಾ. ಎಂ.ಎನ್. ಮಂಜುಳಾ, ರಾಜ್ಯ ಕಾರ್ಯದರ್ಶಿ ಕಾ. ಶೋಭಾ ಎಸ್., ರಾಜ್ಯ ಉಪಾಧ್ಯಕ್ಷೆ ಡಾ. ಮೇರಿ ಜಾನ್, ರಾಜ್ಯ ಕಛೇರಿ ಕಾರ್ಯದರ್ಶಿ ಕಾ. ಎ. ಶಾಂತಾ




ಮೈಸೂರು: ಮಾತನಾಡುತ್ತಿರುವವರು: ಎಸ್‌ಯುಸಿಐ(ಸಿ) ಪಕ್ಷದ ಮೈಸೂರು ಜಿಲ್ಲಾ ಕಾರ್ಯದರ್ಶಿ, ಕಾ. ಜಿ.ರವಿ. ವೇದಿಕೆಯಲ್ಲಿ, ಎಡದಿಂದ: ಎಐಎಂಎಸ್ಎಸ್ ಜಿಲ್ಲಾಧ್ಯಕ್ಷೆ ಕಾ. ನಳಿನಾ, ರಾಜ್ಯಾಧ್ಯಕ್ಷೆ ಕಾ. ಎಂ.ಎನ್. ಮಂಜುಳಾ, ರಾಜ್ಯ ಕಾರ್ಯದರ್ಶಿ ಕಾ. ಶೋಭಾ ಎಸ್, ರಾಜ್ಯ ಉಪಾಧ್ಯಕ್ಷರು ಕಾ. ಸೀಮಾ ಜಿ.ಎಸ್.

## ಭಾರತದ ಪ್ರಥಮ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಜನ್ಮ ದಿನಾಚರಣೆಯನ್ನು ನಮ್ಮ ಪಕ್ಷದ ಮಹಿಳಾ ಮುಂದಳ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ(ಎಐಎಂಎಎಸ್ಎಸ್) ರಾಜ್ಯದ ಹಲವೆಡೆ ಅತ್ಯಂತ ಶ್ರದ್ಧೆ ಮತ್ತು ಸ್ಫೂರ್ತಿಯಿಂದ ಸಂಘಟಿಸಿತ್ತು.




ಧಾರವಾಡ




ಕೊಪ್ಪಳ



ಬಳ್ಳಾರಿ




**ಪ್ರತಿಭಟನೆ....** ಮೈಸೂರು ವಿವಿಯಲ್ಲಿ ಒಂದು ಸೆಮಿಸ್ಟರ್‌ಗೆ 3300 ರೂ. ಪರೀಕ್ಷಾ ಶುಲ್ಕ ಹೆಚ್ಚಳ ಹಾಗೂ ಪ್ರತಿ ವರ್ಷವೂ ಹೆಚ್ಚುತ್ತಿರುವ ಶೇ.10 ಶುಲ್ಕವನ್ನು ಹಿಂಪಡೆಯಬೇಕೆಂದು ಆಗ್ರಹಿಸಿ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆ ನೇತೃತ್ವದಲ್ಲಿ ಮಾನಸ ಗಂಗೋತ್ರಿಯ ಸ್ನಾತಕೋತ್ತರ ವಿದ್ಯಾರ್ಥಿಗಳು ಕ್ರಾಫರ್ಡ್ ಹಾಲ್ ಎದುರು ಪ್ರತಿಭಟಿಸಿದರು. ಕೂಡಲೇ ಶುಲ್ಕ ಹೆಚ್ಚಳವನ್ನು ಹಿಂಪಡೆಯಬೇಕೆಂದು ಕುಲಪತಿಗಳಿಗೆ ಮನವಿ ಸಲ್ಲಿಸಿದರು.




ಜನವರಿ 30ರಂದು ಎಐಕೆಕೆಎಂಎಸ್ ರೈತ ಸಂಘಟನೆ ವತಿಯಿಂದ ಬಳ್ಳಾರಿ ಜಿಲ್ಲಾಧಿಕಾರಿ ಕಚೇರಿಯ ಬಳಿ ಮೆಣಸಿನಕಾಯಿ ಬೆಳೆಗೆ (5531 ವಿಧದ ಬೆಳೆಗೆ ರೂ. 25,000, ಬ್ಯಾಡಗಿ 2043 ವಿಧದ ಬೆಳೆಗೆ ರೂ. 50,000) ಬೆಂಬಲ ಬೆಲೆ ನೀಡಲು, ಬಳ್ಳಾರಿಯಲ್ಲಿ ಮೆಣಸಿನಕಾಯಿ ಮಾರುಕಟ್ಟೆ ಸ್ಥಾಪನೆಗಾಗಿ ಆಗ್ರಹಿಸಿ ಪ್ರತಿಭಟನೆ ಮಾಡಲಾಯಿತು.

ಗಾಜಾ ಸ್ವಾಧೀನಪಡಿಸಿಕೊಳ್ಳುವ ಹುನ್ನಾರ

## ಡೊನಾಲ್ಡ್ ಟ್ರಂಪ್ ಹೇಳಿಕೆಗೆ ಎಸ್‌ಯುಸಿಐ(ಸಿ) ತೀವ್ರ ಖಂಡನೆ

"ಗಾಜಾದ ಆಕ್ರಮಿತ ಪ್ರದೇಶದಲ್ಲಿ ನೆಲೆಸಿರುವ ಪ್ಯಾಲೆಸ್ತೀನಿಯರನ್ನು ಬೇರೆಡೆಗೆ ಪುನರ್ವಸತಿಗೊಳಿಸಿದ ನಂತರ ಅಮೇರಿಕ "ಆ ಸ್ಥಳವನ್ನು ಸ್ವಾಧೀನಪಡಿಸಿಕೊಳ್ಳುತ್ತದೆ ಮತ್ತು ಅಧಿಕಾರವಹಿಸಿಕೊಳ್ಳುತ್ತದೆ" ಎಂಬ ಅತ್ಯಂತ ಕ್ರೂರ ಹೇಳಿಕೆಯನ್ನು ಅಮೇರಿಕನ್ ಸಾಮ್ರಾಜ್ಯಶಾಹಿಗಳ ನಿಷ್ಠಾವಂತ ಪ್ರತಿನಿಧಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿರುವುದು ಇಡೀ ಜಗತ್ತನ್ನು ದಿಗ್ಭ್ರಮೆಗೊಳಿಸಿದೆ. ಇಸ್ರೇಲ್ ಪ್ರಧಾನಿ ಬೆಂಜಮೀನ್ ನೇತನ್ಯಾಹು ಜೊತೆಯಲ್ಲಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಇಸ್ರೇಲ್ – ಪ್ಯಾಲೆಸ್ತೈನ್ ಘರ್ಷಣೆಯ ಬಗ್ಗೆ ದಶಕಗಳ ಕಾಲ ಇರುವ ಅಮೇರಿಕದ ವಿದೇಶಾಂಗ ನೀತಿಯ ಆಧಾರದಲ್ಲಿಯೇ ಈ ದರ್ಪದ ಘೋಷಣೆಯನ್ನು ಅವರು ಮಾಡಿದ್ದಾರೆ.

ಪ್ಯಾಲೆಸ್ತೀನಿಯರು ತಮ್ಮ ತಾಯ್ನಾಡನ್ನು ತೊರೆದು ಇತರ ದೇಶಗಳಿಗೆ ತೆರಳುವರು ಎಂದಿರುವುದು ದುಂಡಾವರ್ತನೆಯ ಮಾತು ಮತ್ತು ಅದು ಜನಾಂಗೀಯ ನರಮೇಧದ ಮಾತಿಗೆ ಸಮಾನವಾಗಿದೆ. ಇದು ಮತ್ತೊಮ್ಮೆ ಅಮೇರಿಕನ್ ಸಾಮ್ರಾಜ್ಯಶಾಹಿಯ ನಿರಂಕುಶವಾದಿ ಮತ್ತು ದಾಳಿಕೋರ ಉದ್ದೇಶವನ್ನು ಬಯಲು ಮಾಡುತ್ತದೆ. ಅಮೇರಿಕವು ತನ್ನ ಪ್ರಭಾವ ವಲಯವನ್ನು ವಿಸ್ತರಿಸಿ 12ನೇ ಪುಟಕ್ಕೆ....

## ವಿವಿ ಕುಲಪತಿಗಳಾಗಿ ಹೊರಗಿನವರ ನೇಮಕ ಅಪಾಯಕಾರಿ – ಎಐಡಿಎಸ್‌ಓ

ಶಿಕ್ಷಣ ಕ್ಷೇತ್ರದಿಂದ ಹೊರತಾಗಿರುವವರನ್ನು ವಿಶ್ವವಿದ್ಯಾಲಯಗಳ ಕುಲಪತಿಗಳನ್ನಾಗಿ ನೇಮಕ ಮಾಡುವ ಅಪಾಯಕಾರಿ ನಿಯಮವನ್ನು ಯುಜಿಸಿ ರೂಪಿಸಿದೆ. ಅದರ ಪ್ರಕಾರ, ಉದ್ಯಮ, ಸಾರ್ವಜನಿಕ ಆಡಳಿತ, ನೀತಿ ನಿರೂಪಣೆ ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಹಿರಿಯ ಅಧಿಕಾರಿ ಹುದ್ದೆಯಲ್ಲಿ ಕನಿಷ್ಠ 10 ವರ್ಷ ಅನುಭವದ ಜೊತೆಗೆ ಶೈಕ್ಷಣಿಕವಾಗಿ ಮಹತ್ವದ ಕೊಡುಗೆ ನೀಡಿದವರನ್ನು ವಿಶ್ವವಿದ್ಯಾಲಯದ ಕುಲಪತಿಯನ್ನಾಗಿ ನೇಮಕ ಮಾಡಬಹುದಾಗಿದೆ. ವಿಶ್ವವಿದ್ಯಾಲಯಗಳ ಸ್ವಾಯತ್ತತೆ ಮತ್ತು ಪ್ರಜಾತಾಂತ್ರಿಕ ಹಕ್ಕನ್ನು ಕಸಿದು ವಿದ್ಯಾರ್ಥಿಗಳು ಹಾಗೂ ವಿಶ್ವವಿದ್ಯಾಲಯದೊಂದಿಗೆ ಸಂಬಂಧ ಹೊಂದಿರದ, ಕೇವಲ ಲಾಭ ನಷ್ಟದ ಲೆಕ್ಕಾಚಾರ ಮಾಡಬಲ್ಲ ಉದ್ಯಮಿಗಳು, ಅಧಿಕಾರಗಳು ಮತ್ತು ಸರ್ಕಾರದ ಹೌದಪ್ಪಗಳ ಕೈಯಲ್ಲಿ ವಿಶ್ವವಿದ್ಯಾಲಯದ ಆಡಳಿತವನ್ನು ಒಪ್ಪಿಸುವ ಹುನ್ನಾರ ಇದಾಗಿದೆ. ಸರ್ಕಾರದ ಈ ಅಪ್ರಜಾತಾಂತ್ರಿಕ ಮತ್ತು ಕಡು ಶಿಕ್ಷಣ ವಿರೋಧಿ ನಡೆಯನ್ನು ಎಐಡಿಎಸ್‌ಓ ತೀವ್ರವಾಗಿ ಖಂಡಿಸುತ್ತದೆ. ಎಂ.ಇ ಅಥವಾ ಎಂ.ಟೆಕ್ ನಲ್ಲಿ ಕನಿಷ್ಠ ಶೇ.55 ಅಂಕ ಪಡೆದವರಿಗೆ ರಾಷ್ಟ್ರೀಯ ಅರ್ಹತಾ ಪರೀಕ್ಷೆಯಿಂದ ವಿನಾಯಿತಿ ನೀಡಿ ನೇರವಾಗಿ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ನೇಮಕ ಮಾಡುವ ನಿಯಮವನ್ನು ಕೂಡ ಕರಡಿನಲ್ಲಿ ಸೂಚಿಸಲಾಗಿದೆ. ಯುಜಿಸಿಯು ಕೂಡಲೇ ಈ ಅಪ್ರಜಾತಾಂತ್ರಿಕ ಕರಡನ್ನು ಹಿಂಪಡೆಯಬೇಕು ಮತ್ತು ಪ್ರಾಧ್ಯಾಪಕ ಹುದ್ದೆಯ ಕನಿಷ್ಠ 10 ವರ್ಷಗಳ ಅನುಭವ ಹಾಗೂ ಆಡಳಿತಾತ್ಮಕ ಹುದ್ದೆಯ ಅನುಭವದ ಆಧಾರದ ಈಗಿನ ಮಾನದಂಡವನ್ನೇ ಮುಂದುವರಿಸಬೇಕೆಂದು ಎಐಡಿಎಸ್‌ಓ ಆಗ್ರಹಿಸುತ್ತದೆ.

ಕಾರ್ಮಿಕ ದೃಷ್ಟಿಕೋನ

Registered Newspaper

Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

# ರೂಪಾಯಿ ಮೌಲ್ಯ ಏಕೆ ಕುಸಿಯುತ್ತಿದೆ?

'ಅಮೆರಿಕದ ಡಾಲರ್ ಎದುರು ರೂಪಾಯಿಯ ಮೌಲ್ಯ ಎಂದಿಲ್ಲದಷ್ಟು ಪಾತಾಳಕ್ಕೆ ಕುಸಿದಿದೆ' ಎಂಬ ಶೀರ್ಷಿಕೆ ಆಗಾಗ್ಗೆ ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುತ್ತಲೇ ಇರುತ್ತದೆ. ನಿಜ! ಕುಸಿತವು ಎಡೆಬಿಡದೆ ಸಾಗಿದೆ, ಇದನ್ನು ಮರೆಮಾಚುವ ಎಲ್ಲಾ ಸಾಧನಗಳೂ ಮುಗಿದು ಈಗ ಬಂಡವಾಳಶಾಹಿ ವ್ಯವಸ್ಥೆಯ ನಿಗ್ರಹಕರು ನಿದ್ದೆ ಕೆಡಿಸಿಕೊಳ್ಳುವಂತಾಗಿದೆ. ಭಾರತವು ರಾಜಕೀಯವಾಗಿ ಸ್ವತಂತ್ರಗೊಂಡಾಗ 1 ಡಾಲರ್ ಗೆ 4.16 ರೂ. ಇದ್ದದ್ದು ಈಗ 85.48 ರೂ. ಗೆ ಏರಿದೆ. ಈ ಆರ್ಥಿಕ ವಿದ್ಯಮಾನದ ದುಷ್ಪರಿಣಾಮವು ಜನಸಾಮಾನ್ಯರ ಗಮನಕ್ಕೆ ಬರದೇ ಹೋದರೂ ಅವರ ಸಂಕಷ್ಟಗಳನ್ನು ವೃದ್ಧಿಸುವಲ್ಲಿ ಇದರ ಪಾತ್ರ ಇದೆ ಎಂಬುದರ ಬಗ್ಗೆ ಶಂಕೆಯೇ ಬೇಡ. ನಮ್ಮ ದೇಶದ ಮಾನ್ಯ ಪ್ರಧಾನಿಗಳು, ಅವರ ಹಣಕಾಸು ಮಂತ್ರಿಗಳು, ಮಂತ್ರಿ ಮಂಡಳವನ್ನೂ ಸೇರಿ ಇಡೀ ಅರ್ಥಿಕತಜ್ಞರೆಲ್ಲರೂ ಭಾರತದ ಆರ್ಥಿಕ ಬುನಾದಿ ಸದೃಢವಾಗಿದೆ ಎನ್ನುತ್ತಿದ್ದಾರೆ. ಜಾಗತಿಕ ಕುಸಿತದಿಂದ ಕಿಂಚಿತ್ತೂ ಹಾನಿಯಾಗದಷ್ಟು ದೇಶ ಸ್ವಾವಲಂಬಿಯಾಗಿದೆ ಎಂಬ ಚಿತ್ರಣವನ್ನು ಬಿಂಬಿಸುವಲ್ಲಿ ಇವರೆಲ್ಲರೂ ನಿರತರಾಗಿದ್ದಾರೆ. ರೂಪಾಯಿ ಮೌಲ್ಯ ಕುಸಿಯುತ್ತಿದೆ. ಆರ್ಥಿಕ ಹಿಂಜರಿತದ ಮುನ್ಸೂಚನೆಗಳು ಅನಾವರಣಗೊಳ್ಳುತ್ತಿವೆ. ತೀವ್ರ ಬೆಲೆ ಏರಿಕೆ, ನಿರುದ್ಯೋಗ, ಕೈಗಾರಿಕಾ ಉತ್ಪತ್ತಿ ಕುಸಿಯುತ್ತಿದ್ದು 2.5 ಕೋಟಿ ಕೈಗಾರಿಕೆಗಳು ಮುಚ್ಚಿಹೋಗಿವೆ. ಲಕ್ಷಾಂತರ ದುಡಿಯುವ ಜನತೆಯ ಆದಾಯ ಕುಸಿಯುತ್ತಿದೆ. ಇದು ದೇಶದ ವಾಸ್ತವ ಚಿತ್ರಣವಾಗಿರುವಾಗ, ಕೇಂದ್ರ ಬಜೆಟ್ ಮಂಡನೆಯ ದಿನಗಳು ಸಮೀಪಿಸುತ್ತಿದ್ದಂತೆ ಅರ್ಥಶಾಸ್ತ್ರದ ಎಲ್ಲಾ ಧುರೀಣರನ್ನು ಈಗ ಕಣಕ್ಕಿಳಿಸಿ ನಕಲಿ ಡಾಟಾಗಳನ್ನು ಸೃಷ್ಟಿಸಿ ಭಾರತದ ಆರ್ಥಿಕತೆ ಸದೃಢವಾಗಿದೆ ಎಂಬ ಚಿತ್ರಣ ನೀಡಲು ಸರ್ಕಾರ ಸಜ್ಜಾಗುತ್ತಿದೆ. ಸರ್ಕಾರದ ಈ ಎಲ್ಲಾ ಹರಸಾಹಸಗಳಿಂದ ಸೃಷ್ಟಿಸಲ್ಪಟ್ಟ ಈ ಚಿತ್ರಣದ ನೈಜತೆ ಜನತೆಗೆ ಈಗ ಅರ್ಥವಾಗಲು ಪ್ರಾರಂಭವಾಗಿದೆ.

ಇಷ್ಟು ಕಾಲ ತಮ್ಮ ವಿದ್ವತ್ತನ್ನೆಲ್ಲಾ ಬಳಸಿಕೊಂಡು ಭಾರತದ ಆರ್ಥಿಕ ವ್ಯವಸ್ಥೆ ಸುಭಿಕ್ಷವಾಗಿದೆ ಎಂಬ ಚಿತ್ರಣ ನೀಡುತ್ತಿದ್ದವರೆಲ್ಲಾ ಈಗ ಜಾಗತಿಕ ಬಂಡವಾಳವಾದದ ಬಿಕ್ಕಟ್ಟಿನ ದಿನಗಳಲ್ಲಿ ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲ ಎಂಬ ಕಠೋರ ಸತ್ಯವನ್ನು ಒಪ್ಪಿಕೊಳ್ಳುವ ಪರಿಸ್ಥಿತಿ ಉಂಟಾಗಿದೆ. ಭಾರತದ ಆರ್ಥಿಕತೆಯು ಜಾಗತಿಕ ಆರ್ಥಿಕತೆಯೊಂದಿಗೆ ವ್ಯಾಪಾರ ಮತ್ತು ಹಣಕಾಸು ಸಂಬಂಧ ಹೊಂದಿರುವುದರಿಂದ ಜಾಗತಿಕ ಆರ್ಥಿಕ ಹಿಂಜರಿತದ ಪರಿಣಾಮ ಭಾರತದ ಮೇಲೆ ತೀವ್ರವಾಗಿರಬಹುದು ಎಂಬುದನ್ನು ಸರ್ಕಾರ ಈಗ ಗುಪ್ತವಾಗಿಯಾದರೂ ಒಪ್ಪಿಕೊಳ್ಳಲೇಬೇಕಾಗುತ್ತಿದೆ. ರೂಪಾಯಿಯ ಮೌಲ್ಯ ಕುಸಿಯುತ್ತಿರುವುದು ಇದರ ಇತ್ತೀಚಿನ ಅಭಿವ್ಯಕ್ತಿ ಮತ್ತು ಈ ಕುಸಿತವನ್ನು ತಕ್ಷಣವೇ ತಡೆಯದಿದ್ದಲ್ಲಿ ಆರ್ಥಿಕತೆ ಮತ್ತಷ್ಟು ಸಂಕಷ್ಟಕ್ಕೀಡಾಗಲಿದೆ.

**ಇಷ್ಟೆಲ್ಲಾ ಚರ್ಚೆಯಲ್ಲಿರುವ ರೂಪಾಯಿ ಅಪಮೌಲ್ಯ ಎಂದರೇನು?**

ಒಂದು ದೇಶದ ಆಮದು ಹಾಗೂ ರಫ್ತಿನ ಮಧ್ಯೆ ಇರುವ ವ್ಯತ್ಯಾಸ ಆ ದೇಶದ ಕರೆನ್ಸಿಯ ಮೌಲ್ಯವನ್ನು ನಿರ್ಧರಿಸುತ್ತದೆ. ಸರಕಿನ ಮೌಲ್ಯ ಹೇಗೆ ಮಾರುಕಟ್ಟೆಯಲ್ಲಿ ಏರಿಕೆ ಇಳಿಕೆಯಾಗುತ್ತದೆಯೋ ಹಾಗೆಯೇ ಕರೆನ್ಸಿ ಸರಬರಾಜಿನಲ್ಲಿರುವುದಕ್ಕಿಂತಲೂ ಅದರ ಬೇಡಿಕೆ ಹೆಚ್ಚು ಇದ್ದರೆ ಅದರ ಮೌಲ್ಯ ಹೆಚ್ಚುತ್ತದೆ. ಕಡಿಮೆಯಾದಂತೆ ಅದರ ಮೌಲ್ಯ ತಗ್ಗುತ್ತದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಅಮೆರಿಕನ್ ಡಾಲರ್‌ಗೆ ಬೇಡಿಕೆ ಹೆಚ್ಚಾಗುತ್ತಿದ್ದು, ನಮ್ಮ ರೂಪಾಯಿಗೆ ಬೇಡಿಕೆ ಕಡಿಮೆಯಾಗುತ್ತಾ ಇದೆ.

**ರೂಪಾಯಿ ಬೇಡಿಕೆ ಯಾವಾಗ ಹೆಚ್ಚುತ್ತದೆ ಹಾಗೂ ಯಾವಾಗ ಕುಸಿಯುತ್ತದೆ?**

ದೇಶದ ಆಮದು, ರಫ್ತಿಗಿಂತಲೂ ಅತೀ ಹೆಚ್ಚಾದಾಗ ರೂಪಾಯಿ ಬೇಡಿಕೆ ಇಳಿಮುಖವಾಗುತ್ತದೆ. ನಾವು ರಫ್ತು ಮಾಡುವಾಗ ಸರಕಿನ ಬದಲಾಗಿ ವಿದೇಶಿ ಕರೆನ್ಸಿ ರೂಪದಲ್ಲಿ ಹಣ ಪಡೆಯುತ್ತೇವೆ. ಹಾಗೆಯೇ ಆಮದು ಮಾಡಿಕೊಂಡಾಗ ವಿದೇಶಿ ಕರೆನ್ಸಿ ರೂಪದಲ್ಲಿ ನಾವು ಹಣ ನೀಡುತ್ತೇವೆ. ಈ ವಿದೇಶಿ ಕರೆನ್ಸಿ ಸಂಗ್ರಹದಲ್ಲಿ ಏರಿಕೆ ಇಳಿಕೆಯಾಗುವುದು ರೂಪಾಯಿ ಮೌಲ್ಯ ನಿರ್ಧರಿಸುತ್ತದೆ. ಉದಾಹರಣೆಗೆ ನಮ್ಮ ದೇಶದ ಒಟ್ಟು ವಹಿವಾಟಿನಲ್ಲಿ ರಫ್ತಿಗಿಂತಲೂ, ಆಮದು ಹೆಚ್ಚಾದಲ್ಲಿ ವಿದೇಶಿ ಕರೆನ್ಸಿ ಸಂಗ್ರಹ ಸವಕಳಿಸುತ್ತದೆ. ವಾಸ್ತವತೆಯ ಚಿತ್ರಣವನ್ನೊಮ್ಮೆ ನೋಡೋಣ: ನವೆಂಬರ್ 2024ರಲ್ಲಿ ಆಮದು ಶೇ. 27ರಷ್ಟು ಅಂದರೆ 69.95 ಬಿಲಿಯನ್ ಡಾಲರ್‌ಗೆ ಹೆಚ್ಚಳಗೊಂಡು ರಫ್ತು ಶೇ. 4.8ರಷ್ಟು ಅಂದರೆ 32.1 ಬಿಲಿಯನ್ ಡಾಲರ್‌ರಷ್ಟು ಇಳಿಕೆ ಕಂಡಿತ್ತು. ರಫ್ತಿಗಿಂತಲೂ ಆಮದು 37.8 ಬಿಲಿಯನ್ ಡಾಲರ್‌ರಷ್ಟು ಹೆಚ್ಚಾಗಿದೆ. ಅಂದರೆ ಒಟ್ಟು ವಿದೇಶಿ ಕರೆನ್ಸಿ ಸಂಗ್ರಹ ದಲ್ಲಿನ ಕೊರತೆ 37.8 ಬಿಲಿಯನ್ ಡಾಲರ್‌ಗೆ ಏರಿಕೆಯಾಗಿತ್ತು. (ಇಕನಾಮಿಕ್ ಟೈಮ್ಸ್ 16–12–24)

**ವಿದೇಶಿ ಕರೆನ್ಸಿ ಸಂಗ್ರಹದಲ್ಲಿನ ಕೊರತೆಯನ್ನು ಹೇಗೆ ನಿಭಾಯಿಸುತ್ತಾರೆ?**

ಅಂತರರಾಷ್ಟ್ರೀಯ ಮಾರುಕಟ್ಟೆ ಹಾಗೂ ಐ.ಎಮ್.ಎಫ್ ನಿಂದ ಸಾಲ ಪಡೆದು, ವಿದೇಶಿ ನೇರ ಬಂಡವಾಳದಿಂದ ಸಿಗುವ ವಿದೇಶಿ ಕರೆನ್ಸಿ ಒಳಗೊಂಡಾಗಿಯೂ ಕೊರತೆ ಮಿಕ್ಕಲ್ಲಿ ವಿದೇಶಿ ಘಟಕಗಳು ಮತ್ತು ಸಾಂಸ್ಥಿಕ ಹೂಡಿಕೆದಾರರಿಂದ(ಎಫ್.ಐ.ಐ) ಸಿಗುವ ಹೂಡಿಕೆಗಳ ಮೇಲೆ ಅತಿರೇಕವಾಗಿಯೇ ಭಾರತ ಸರ್ಕಾರ ಅವಲಂಬಿತವಾಗಿದೆ. ಕೆಲವೊಮ್ಮೆ ಈ ಎಫ್.ಐ.ಐ ಗಳು ತಮ್ಮ ಶೇರುಗಳನ್ನು ಮಾರಲು ಹೊರಟಾಗ ಸರ್ಕಾರ ದೊಡ್ಡ ಪ್ರಮಾಣದ ಮೊತ್ತವನ್ನು ಡಾಲರ್



ರೂಪದಲ್ಲಿ ತೆರಬೇಕಾಗುತ್ತದೆ. ಇದರಿಂದ ಮತ್ತೆ ವಿದೇಶಿ ಕರೆನ್ಸಿ ಸಂಗ್ರಹದಲ್ಲಿ ಕೊರತೆಯುಂಟಾಗುತ್ತದೆ. ಜಾಗತಿಕ ಮಾರುಕಟ್ಟೆಯಲ್ಲಿ ತಮ್ಮ ನಿರೀಕ್ಷೆಗೆ ತಕ್ಕಂತೆ ಲಾಭ ಬರದಿದ್ದಲ್ಲಿ ಈ ಎಫ್.ಐ.ಐ ಗಳು ಉತ್ತಮ ಲಾಭಕ್ಕಾಗಿ ಒಂದು ಮಾರುಕಟ್ಟೆಯನ್ನು ಬಿಟ್ಟು ಇನ್ನೊಂದು ಮಾರುಕಟ್ಟೆಗೆ ಜಿಗಿಯುತ್ತಾರೆ. ಇವೆಲ್ಲವೂ ಒಂದು ರೀತಿಯ ಜೂಜು ಇದ್ದಂತೆ. ಒಮ್ಮೆ ವಿದೇಶಿ ಕರೆನ್ಸಿ ಸಂಗ್ರಹದಲ್ಲಿ ಇದ್ದ ಹಣ ಇನ್ನೊಂದು ಘಳಿಗೆಯಲ್ಲೇ ಇರುವುದಿಲ್ಲ. ಇವ್ಯಾವೂ ಸ್ಥಿರ ಶೇರುಗಳಲ್ಲ. ಈ ಎಫ್.ಐ.ಐ ಗಳು ತಮ್ಮಿಚ್ಛೆಯಂತೆ ಯಾವ ಸಮಯದಲ್ಲಾದರೂ ಶೇರು ವಾಪಸ್ಸು ಪಡೆಯಬಹುದು. ಅಮೇರಿಕದ ಡಾಲರ್‌ನ ಶಕ್ತಿ, ಜಾಗತೀಕ ಅಪಾಯಗಳು, ಕಚ್ಚಾ ತೈಲದ ಅನಿಶ್ಚಿತ ಹಾಗೂ ಅತೀ ಹೆಚ್ಚು ಬೆಲೆಗಳು ಈ ವಿದ್ಯಮಾನಕ್ಕೆ ಕಾರಣವಾಗಬಹುದು.

ಕೇಂದ್ರ ಸರ್ಕಾರಕ್ಕೆ ಇದು ಮುಜುಗರದ ವಿಷಯವೇ. ಹಿಂದೆ ಕಾಂಗ್ರೆಸ್ ಸರ್ಕಾರವಿದ್ದಾಗ, ಇದೇ ಬಿಜೆಪಿ ಪಕ್ಷವು, ರೂಪಾಯಿ ಮೌಲ್ಯ ಕುಸಿತವಾದಾಗ ಅದಕ್ಕೆ ಸರ್ಕಾರದಲ್ಲಿನ ಭ್ರಷ್ಟಾಚಾರ, ದುರ್ಬಲ ಆರ್ಥಿಕ ನಿರ್ವಹಣೆ ಎಂಬ ದೋಷಾರೋಪದ ಪಟ್ಟಿಯ ಪ್ರಚಾರ ಕೈಗೊಂಡಿತ್ತು. ಈಗ ರೂಪಾಯಿ ಮತ್ತಷ್ಟು ಪ್ರಪಾತಕ್ಕೆ ಉರುಳುತ್ತಿರುವಾಗ ಬಿಜೆಪಿಯ ಮುಖಭಂಗವೂ ಹೆಚ್ಚುತ್ತಿದೆ!

**ಈ ಪರಿಸ್ಥಿತಿಯನ್ನು ಸರ್ಕಾರ ಹೇಗೆ ನಿಭಾಯಿಸಬಲ್ಲದು?**

ಈ ಹಿಂದೆ ಹೇಳಿರುವಂತೆ ರೂಪಾಯಿಯ ಬೇಡಿಕೆಯ ಆಧಾರದ ಮೇಲೆ ಅದರ ಮೌಲ್ಯ ನಿರ್ಧಾರವಾಗುವುದರಿಂದ ಆರ್.ಬಿ.ಐ ಮಧ್ಯಪ್ರವೇಶಿಸಿ ಡಾಲರ್‌ಗಳನ್ನು ಕೊಂಡುಕೊಳ್ಳುವ ಅಥವಾ ಮಾರುವ ಮೂಲಕ ಈ ಪ್ರಕ್ರಿಯೆಯನ್ನು ನಿಯಂತ್ರಿಸಬಹುದು. ಡಾಲರ್‌ಗಳನ್ನು ಕೊಂಡುಕೊಂಡಲ್ಲಿ ಮಾರುಕಟ್ಟೆಯಲ್ಲಿ ರೂಪಾಯಿ ಸರಬರಾಜು ಹೆಚ್ಚಾಗಿ ಅದರ ಮೌಲ್ಯ ಕುಸಿಯುತ್ತದೆ. ಡಾಲರ್‌ಗಳನ್ನು ಮಾರಾಟಮಾಡಿದ್ದಲ್ಲಿ ರೂಪಾಯಿ ಸರಬರಾಜು ಕಡಿಮೆಯಾಗಿ ಅದರ ಮೌಲ್ಯ ಹೆಚ್ಚುತ್ತದೆ. ಆರ್.ಬಿ.ಐ ಇತ್ತೀಚೆಗೆ ಈ ಡಾಲರ್ ಮಾರುವ ಭರದಲ್ಲಿದ್ದು ಆರ್ಥಿಕತೆ ಉಳಿಸುವ ಹರಸಾಹಸದಲ್ಲಿದೆ.

ಮೋದಿಯವರ 'ಮೇಕ್ ಇನ್ ಇಂಡಿಯಾ'ದ ಎಲ್ಲಾ ಅಬ್ಬರಗಳ ನಡುವೆಯೂ ಭಾರತದ ಸರಕುಗಳು ಜಾಗತಿಕ ಮಾರುಕಟ್ಟೆಯಲ್ಲಿ ಬೇರೆ ಸರಕುಗಳೊಂದಿಗೆ ಸ್ಪರ್ಧಿಸುವಲ್ಲಿ ವಿಫಲವಾಗುತ್ತಿವೆ. ಲಾಭಕೋರ ಭಾರತದ ಕೈಗಾರಿಕಾದಾರರಿಗೆ ಇಲ್ಲೇ ಸರಕುಗಳನ್ನು ಉತ್ಪಾದಿಸುವುದು ತುಟ್ಟಿಯಾಗುವುದರಿಂದ ಅವರ ಆಮದು ಹೆಚ್ಚುತ್ತಿದೆ. ರಫ್ತು ದಿನೇದಿನೇ ಕುಸಿತ ಕಾಣುತ್ತಿದೆ. ಕಳೆದ ನವೆಂಬರ್‌ನಲ್ಲಿ ಶೇ. 4.85ರಷ್ಟು ಸರಕು ರಫ್ತಿನಲ್ಲಿ ಇಳಿಕೆ ಕಂಡಿದೆ. ಇದರಿಂದಾಗಿ ಆಮದು ಮಾಡಿಕೊಳ್ಳಲಾಗುವ ಕಚ್ಚಾ ವಸ್ತುಗಳ, ಅವುಗಳಿಂದ ಮಾಡಲ್ಪಡುವ ವಸ್ತುಗಳ ಬೆಲೆ ಅತಿಯಾಗಿ ಹೆಚ್ಚಾಗುತ್ತದೆ. ಬಂಗಾರ, ವಜ್ರ, ಪ್ಲಾಟಿನಂನಂತಹ ವಸ್ತುಗಳನ್ನು ದೇಶದ ಆಗರ್ಭ ಶ್ರೀಮಂತರು ಆಮದು ಮಾಡಿಕೊಳ್ಳುವುದರಿಂದ ಅವುಗಳ ಆಮದು ಸುಂಕದ ಹೊರೆಯನ್ನು ಜನಸಾಮಾನ್ಯರ ತಲೆಗೇ ಕಟ್ಟಲಾಗುತ್ತದೆ.

ಆಡಳಿತದಲ್ಲಿರುವ ಬಿಜೆಪಿ ಸರ್ಕಾರ "ತಮ್ಮ ಆರ್ಥಿಕತೆ ಬಲಿಷ್ಠವಾಗಿದೆ" ಎಂಬ ಹಸಿ ಸುಳ್ಳನ್ನು ಎಷ್ಟು ಬಾರಿ ಹೇಳಿದರೂ ಸತ್ಯ ಬದಲಾಗುವುದಿಲ್ಲ. ಅವಸಾನದ ಅಂಚಿನಲ್ಲಿರುವ ಬಂಡವಾಳಶಾಹಿ ವ್ಯವಸ್ಥೆ ತಾನೇ ಸೃಷ್ಟಿಸಿರುವ ಸಮಸ್ಯೆಗಳಲ್ಲಿ ವ್ಯವಸ್ಥೆಯ ನಿಯಮದಿಂದಾಗಿ ತಾನೇ ಮುಳುಗುತ್ತದೆ. ರೂಪಾಯಿ ಮೌಲ್ಯ ಕುಸಿಯುತ್ತಿರುವುದೂ ಈ ಸಾಯುತ್ತಿರುವ ವ್ಯವಸ್ಥೆಯ ಲಕ್ಷಣವೇ. ಲಕ್ಷಣಗಳಿಗೆ ಎಷ್ಟೇ ಮದ್ದು ಬಳಿದರೂ ಸಮಸ್ಯೆಯ ಬುಡವನ್ನು ಕಿತ್ತೊಗೆಯದೇ ಈ ಸಮಸ್ಯೆಗಳಿಗೆ ಪರಿಹಾರವಿಲ್ಲ.

ರೂಪಾಯಿ ಮೌಲ್ಯ ಕುಸಿತ, ಬೆಲೆ ಏರಿಕೆ, ನಿರುದ್ಯೋಗದಂತಹ ಸಮಸ್ಯೆಗಳಿಗೆ ಈ ವ್ಯವಸ್ಥೆಯನ್ನು ಬದಲಾಯಿಸದ ಹೊರತು ಬೇರೆ ಪರಿಹಾರವಿಲ್ಲವೆಂಬುದನ್ನು ಈ ದೇಶದ ದುಡಿಯುವ ಜನತೆ ಅರಿಯಬೇಕು. ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯುವವರೆಗೂ ಜನ ಹೋರಾಟಗಳನ್ನು ಬೆಳೆಸುವುದರ ಮೂಲಕ ಸರ್ಕಾರ ಜನಪರ ನೀತಿಗಳನ್ನು ಜಾರಿಗೆ ತರುವಂತೆ, ಸತ್ಯವನ್ನೇ ಬಾಯಿ ಬಿಡುವಂತೆ, ಲಾಭಕೋರ ಬಂಡವಾಳಶಾಹಿಗಳ ಲಾಭಗಳಿಕೆಯ ಮೇಲೆ ನಿಯಂತ್ರಣ ಹೇರುವಂತೆ ಒತ್ತಡ ಹೇರಬೇಕು.

## ಗಾಜಾ ಸ್ವಾಧೀನಪಡಿಸಿಕೊಳ್ಳುವ ಹುನ್ನಾರ

...11ನೇ ಪುಟದಿಂದ

ಹತ್ತಾರು ಪ್ರದೇಶಗಳನ್ನು ಮತ್ತು ಸಾರ್ವಭೌಮ ದೇಶಗಳನ್ನು ತನ್ನ ವಸಾಹತುಗಳನ್ನಾಗಿಸಿಕೊಳ್ಳಲು ಹೊರಟಿದೆ ಎನ್ನುವುದು ಸ್ಪಷ್ಟ. ಇನ್ನೊಂದೆಡೆ, ಸ್ವಾಯತ್ತ ಡಚ್ ಪ್ರದೇಶವಾದ ಗ್ರೀನ್ ಲ್ಯಾಂಡ್‌ನ ಮೇಲೆ ತನ್ನ ಅಧಿಪತ್ಯವನ್ನು ಸ್ಥಾಪಿಸುವುದಾಗಿ ಟ್ರಂಪ್ ಹೇಳಿದ್ದರು.

ಪ್ರಬಲ ಸಮಾಜವಾದಿ ಬಣವು ಇಂದು ಇಲ್ಲದಿರುವಾಗ ಮನುಕುಲದ ಶತ್ರುವಾದ ಅಮೇರಿಕನ್ ಸಾಮ್ರಾಜ್ಯಶಾಹಿಗೆ ಯಾವುದೇ ಅಡೆತಡೆ ಇಲ್ಲದಂತಾಗಿದೆ ಮತ್ತು ಪೆಂಟಗನ್ ಆಡಳಿತದ ಇಂತಹ ಅಂತರರಾಷ್ಟ್ರೀಯ ದೋಚುವ ನೀತಿಯನ್ನು ತಡೆಯುವ ಏಕೈಕ ಮಾರ್ಗವೆಂದರೆ ಯುದ್ಧವಿರೋಧಿ ಜನತೆ ಜಗತ್ತಿನಾದ್ಯಂತ ಐಕ್ಯ, ಸುಸಂಘಟಿತ, ಪ್ರಬಲ ಸಾಮ್ರಾಜ್ಯಶಾಹಿ ವಿರೋಧಿ ಆಂದೋಲನವನ್ನು ಕಟ್ಟುವುದು ಮತ್ತು ಮುನ್ನಡೆಸುವುದು ಎಂದು ನಾವು ಒತ್ತಿ ಹೇಳುತ್ತೇವೆ. ಇತರರನ್ನು ಅಧೀನಗೊಳಿಸಿ ಬೆದರಿಸುವ ಈ ಸಾಮ್ರಾಜ್ಯಶಾಹಿ ದೌರ್ಜನ್ಯವನ್ನು, ನಮ್ಮೊಂದಿಗೆ ಸೇರಿ ವಿಶ್ವದ ಪ್ರಗತಿಪರ ಆಲೋಚನೆಯುಳ್ಳ ಜನರು ತೀವ್ರವಾಗಿ ಖಂಡಿಸುತ್ತಾರೆ ಎಂಬುದು ನಮ್ಮ ಬಲವಾದ ನಂಬಿಕೆಯಾಗಿದೆ. ಅಮೇರಿಕನ್ ಸಾಮ್ರಾಜ್ಯಶಾಹಿಯ ನೆರವಿನೊಂದಿಗೆ ಫ್ಯಾಸಿಸ್ಟ್ ಯಹೂದಿ ಇಸ್ರೇಲ್‌ನ ಅಕ್ರಮ ಆಕ್ರಮಣ ಮತ್ತು ಮಿಲಿಟರಿ ದಾಳಿಯಿಂದ ತಮ್ಮ ತಾಯ್ನಾಡನ್ನು ಮುಕ್ತಗೊಳಿಸುವ ಪ್ಯಾಲೆಸ್ಟೈನ್‌ರ ಜನ್ಮಸಿದ್ಧ ಹಕ್ಕನ್ನು ಗೌರವಿಸಬೇಕು ಮತ್ತು ಅದನ್ನು ಬೆಂಬಲಿಸಲು ವಿಶ್ವದಾದ್ಯಂತ ಜನತೆ ಧ್ವನಿ ಎತ್ತಬೇಕು ಎಂದು ನಾವು ಕರೆ ನೀಡುತ್ತೇವೆ."

## ಇಸ್ರೇಲ್‌ನಲ್ಲಿ ವಾರಾಂತ್ಯದಲ್ಲಿ ಭುಗಿಲೆದ್ದ ಪ್ರತಿಭಟನೆಗಳು

ಯುದ್ಧ, ಅತಿಕ್ರಮಣ ಮತ್ತು ಹಸಿವಿನ ವಿರುದ್ಧ ಹಾಗೂ ಗಾಜಾ ಸೆರೆಯಾಳುಗಳ ಬಿಡುಗಡೆ ಒಪ್ಪಂದಕ್ಕಾಗಿ ಒತ್ತಾಯಿಸಿ ಇಸ್ರೇಲ್‌ನ ಉಗ್ರ, ಬಲಪಂಥೀಯ ಸರ್ಕಾರದ ವಿರುದ್ಧ, 2024ರ ಡಿಸೆಂಬರ್ 14 ಮತ್ತು 15ರ ಶನಿವಾರ ರಾತ್ರಿ ಮತ್ತು ಭಾನುವಾರ, ಇಸ್ರೇಲಿನ ಕಮ್ಯುನಿಸ್ಟ್ ಪಕ್ಷದ ಕರೆಯ ಮೇರೆಗೆ, ಇಸ್ರೇಲಿನ ವಿವಿಧ ನಗರಗಳಲ್ಲಿ ಹಲವಾರು ಸಂಘಟನೆಗಳು ಮತ್ತು ಸಾವಿರಾರು ನಾಗರಿಕರು ಪ್ರತಿಭಟಿಸಿದರು. ಇಸ್ರೇಲ್ ಸೈನಿಕರನ್ನುದ್ದೇಶಿಸಿ, "ಅಪರಾಧಿಗಳಾಗಬೇಡಿ, ಮಕ್ಕಳ ಮೇಲೆ ಬಾಂಬ್ ಹಾಕಬೇಡಿ" ಎಂದು ಕೂಗಿದರು."ಇಸ್ರೇಲ್ ಸರ್ಕಾರ, ಆಹಾರ ಮತ್ತು ನೀರನ್ನು ತಡೆಹಿಡಿದು, ಅವನ್ನು ಶಸ್ತ್ರಾಸ್ತ್ರಗಳಂತೆ ಬಳಸುತ್ತಿದೆ. ಇಡೀ ಜನಾಂಗವನ್ನು ಹಸಿವಿಗೆ ದೂಡಿದೆ ಮತ್ತು ಮಿಲಿಯಾಂತರ ಜನರಿಗೆ ಹಾನಿ ಉಂಟುಮಾಡುತ್ತಿದೆ. ಇದು ಯುದ್ಧಕ್ಕೆ ವಿರಾಮ



ನೀಡುವ ಹಾಗೂ ಬಂಧಿತರನ್ನು ಬಿಡುಗಡೆಗೊಳಿಸುವ ಸಮಯ." ಎಂದು ಆಗ್ರಹಿಸಿದರು.

Published by: K.Radhakrishna on behalf of SOCIALIST UNITY CENTRE OF INDIA-COMMUNIST, Karnataka State Committee, No.31, 3rd Cross, Malleswaram, Bangalore-03 Ph:080-23561443. E-mail:karmikadrushtikona@gmail.com and Printed by him at Balaji Publications, No.16/2, Bychatura Road, Magadi Town, Magadi-562120 Website: www.sucicommunist.org EDITOR: K.RADHAKRISHNA